ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 10 ಗುರುವಾರ 2022

ಸಂಪುಟ: 43 | ಸಂಚಿಕೆ: 203 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

7ನೇ ವೇತನ ಆಯೋಗ ರಚನೆ

ನಿವೃತ್ತ ಮುಖ್ಯ ಕಾರ್ಯದರ್ಶಿ ಸುಧಾಕರ್‌ರಾವ್ ಅಧ್ಯಕ್ಷತೆಯಲ್ಲಿ ಆಯೋಗ ಅಧ್ಯಯನ; ಚುನಾವಣೆಗೆ ಮುನ್ನಾ ಸರ್ಕಾರಿ ನೌಕರರಿಗೆ ಬಂಪರ್ ಕೊಡುಗೆ ನೀಡಲು ಸರ್ಕಾರ

ಬೆಂಗಳೂರು, ನ. 9(ಕೆಎಂಶಿ)– ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆ ಮತ್ತು ಇತರೆ ಸೌಲಭ್ಯಗಳ ವಿಸ್ತರಣೆಗೆ ಸಂಬಂಧಿಸಿದಂತೆ ಏಳನೇ ವೇತನ ಆಯೋಗವನ್ನು ಸರ್ಕಾರ ರಚಿಸಿದೆ.

ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಸುಧಾಕರ್ ರಾವ್ ಅವರ ಅಧ್ಯಕ್ಷತೆಯಲ್ಲಿ ಏಳನೇ ವೇತನ ಆಯೋಗ ರಚಿಸಲಾಗಿದೆ. ಇದರಿಂದ ಮಧ್ಯಂತರ ವರದಿ ತರಿಸಿ, ಮುಂದಿನ ಬಜೆಟ್‌ನಲ್ಲಿ ನೌಕರರಿಗೆ ಬಂಪರ್ ಕೊಡುಗೆ ನೀಡಲು ಮುಖ್ಯಮಂತ್ರಿಯವರು ನಿರ್ಧರಿಸಿದ್ದಾರೆ. ಪ್ರತಿ ಐದು ವರ್ಷಕ್ಕೊಮ್ಮೆ ವೇತನ ಆಯೋಗ ರಚಿಸಬೇಕು. ಆದರೆ ಮುಂಬರುವ ವಿಧಾನ ಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರ ಅವಧಿಗೂ ಮುನ್ನ ಮೂರು ತಿಂಗಳ ಮುಂಚೆಯೇ ಆಯೋಗ ರಚನೆ ಮಾಡುತ್ತಿದೆ.



ಈ ಹಿಂದೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಆರನೇ ವೇತನ ಆಯೋಗ ರಚಿಸಿ, ಅದನ್ನು ಅನುಷ್ಠಾನಗೊಳಿಸಿದ್ದರು. ಈ ಆಯೋಗದ ಶಿಫಾರಸ್ಸಿನ ಮೇಲೆ 2018ರ ಬಜೆಟ್ ಮೂಲಕ ನೌಕರರ ವೇತನ ಮತ್ತು ಭತ್ಯೆಯನ್ನು ಸಿದ್ದರಾಮಯ್ಯ ಹೆಚ್ಚಳ ಮಾಡಿದ್ದರು. ರಾಜ್ಯದಲ್ಲಿ ಸುಮಾರು 5.23 ಲಕ್ಷ ಮಂದಿ ಹಾಲಿ ಸರ್ಕಾರಿ ನೌಕರರಿದ್ದು, ಉಳಿದಂತೆ ಮೂರು ಲಕ್ಷಕ್ಕೂ ಅಧಿಕ ಮಂದಿ ಪಿಂಚಣಿದಾರರು ಮತ್ತು ನಿಗಮ ಮಂಡಳಿ ಪ್ರಾಧಿಕಾರದ ನೌಕರರಿದ್ದಾರೆ. ಏಳನೇ ವೇತನ ಆಯೋಗದ ಶಿಫಾರಸ್ಸನ್ನು ರಾಜ್ಯ ಸರ್ಕಾರ ಅನುಷ್ಠಾನಗೊಳಿಸಿದಲ್ಲಿ, ಸರ್ಕಾರದ ಬೊಕ್ಕಸದ ಮೇಲೆ 12 ಸಾವಿರ ಕೋಟಿ ರೂಗಳ ಹೊರೆ ಬೀಳಲಿದೆ. ತುಟ್ಟಿಭತ್ಯೆಯನ್ನು ಮೂಲ ವೇತನದೊಂದಿಗೆ ವಿಲೀನಗೊಳಿಸುವಂತೆ ರಾಜ್ಯ ಸರ್ಕಾರಿ ನೌಕರರ ಸಂಘ ಬೇಡಿಕೆ ಇರಿಸಿದೆ. ಒಂದು ವೇಳೆ ಬೇಡಿಕೆಯನ್ನು ಅನುಷ್ಠಾನಗೊಳಿಸಿದರೆ, ಮೂಲ ವೇತನದ ಪ್ರಮಾಣ ಶೇಕಡ 30 ರಿಂದ 40ಕ್ಕೆ ಹೆಚ್ಚಳವಾಗಲಿದೆ. ರಾಜ್ಯ ವಿಧಾನಸಭೆಗೆ ಏಪ್ರಿಲ್–ಮೇ ತಿಂಗಳಲ್ಲಿ ಚುನಾವಣೆ ನಡೆಯಲಿದ್ದು, ಇದಕ್ಕೂ ಮುನ್ನವೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಜೆಟ್ ಮಂಡನೆ ಮಾಡಲಿದ್ದಾರೆ. ಬಜೆಟ್ ಮಂಡನೆ ಸಂದರ್ಭದಲ್ಲೇ ಏಳನೇ ವೇತನ ಆಯೋಗ ಮಧ್ಯಂತರ ವರದಿಯನ್ನು ಜಾರಿಗೊಳಿಸುವ ನಿರ್ಧಾರ ಪ್ರಕಟಿಸಿ, ಈ ಎಂಟು ಲಕ್ಷ ಕುಟುಂಬದ ಲಾಭ ಪಡೆಯಲು ಮುಖ್ಯಮಂತ್ರಿಯವರು ಮುಂದಾಗಿದ್ದಾರೆ ಎನ್ನಲಾಗಿದೆ. ಪ್ರತಿ ಐದು ವರ್ಷಕ್ಕೊಮ್ಮೆ ವೇತನ ಆಯೋಗ ರಚನೆಯಾಗುತ್ತದೆ. ಆಯೋಗವು ಬೆಲೆ ಏರಿಕೆ, ಇತರೆ ರಾಜ್ಯಗಳಲ್ಲಿನ ವೇತನ ಪರಿಷ್ಕರಣೆ, ಕೇಂದ್ರದ ಕ್ರಮಗಳನ್ನು ಪರಿಶೀಲಿಸಿ, ವೇತನ ಪರಿಷ್ಕರಣೆಗೆ ಶಿಫಾರಸ್ಸು ಮಾಡುತ್ತದೆ.

ಸಿದ್ದರಾಮಯ್ಯ ರಾಜಕೀಯ ಅಲೆಮಾರಿ

●ಸಂಸದ ವಿ.ಶ್ರೀನಿವಾಸ್ ಪ್ರಸಾದ್ ವ್ಯಂಗ್ಯ
●ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಯುದ್ಧಕ್ಕೆ ಹೋಗು ಎಂದು ಮರದ ಕತ್ತಿ ಕೊಟ್ಟಿದ್ದಾರೆ!



ಚಾಮರಾಜನಗರ, ನ.9– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಉಪಕಾರ ಸ್ಮರಣೆ ಇಲ್ಲ. ಕೇವಲ ವೀರಾವೇಶದ ಮಾತುಗಳನ್ನು ಆಡ್ತಾರೆ. ಆತ ರಾಜಕೀಯ ಅಲೆಮಾರಿ ಎಂದು ಸಂಸದ ವಿ. ಶ್ರೀನಿವಾಸ ಪ್ರಸಾದ್ ಅವರು ಏಕವಚನದಲ್ಲೇ ವಾಗ್ದಾಳಿ ನಡೆಸಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ತನಗೆ ಸಹಾಯ ಮಾಡಿದವರನ್ನು ನೆನೆಯವುದಿಲ್ಲ. ಆತನಿಗೆ ಉಪಕಾರ ಸ್ಮರಣೆ ಇಲ್ಲ. ಸಭೆ ಸಮಾರಂಭಗಳಲ್ಲಿ ಕೇವಲ ವೀರಾವೇಶದ ಮಾತುಗಳನ್ನು ಆಡುತ್ತಾರೆ ಅಷ್ಟೇ ಎಂದು ತಮ್ಮದೇ ಧಾಟಿಯಲ್ಲಿ ಸಿದ್ದರಾಮಯ್ಯ ವಿರುದ್ಧ ಹರಿಹಾಯ್ದರು. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸೋತು ಬಾದಾಮಿಗೆ ಹೋದರು. ಈಗ ನನ್ನನ್ನು ಚಾಮರಾಜನಗರ, ಕೋಲಾರ, ಚಿಕ್ಕನಾಯಕನಹಳ್ಳಿ ಎಲ್ಲಾ ಕಡೆ ಸ್ಪರ್ಧಿಸಿ ಎಂದು ಕರೆಯುತ್ತಿದ್ದಾರೆ ಎನ್ನುತ್ತಾರೆ. ಆದರೆ, ಅವರು ನಾನು ಇಲ್ಲಿಂದಲೇ ಸ್ಪರ್ಧಿಸುತ್ತೇನೆ ಎಂದು ಹೇಳಿಲ್ಲ. ಈ ಮೂಲಕ ಸಿದ್ದರಾಮಯ್ಯ ರಾಜಕೀಯ ಅಲೆಮಾರಿ ಆಗಿದ್ದಾರೆ. ನಿರ್ದಿಷ್ಟವಾಗಿ ಕ್ಷೇತ್ರ ಹೇಳುವುದಕ್ಕೆ ಸಿದ್ದರಾಮಯ್ಯಗೆ ಧೈರ್ಯ ಇಲ್ಲ ಎಂದರು.

ಮರದ ಕತ್ತಿ: ಎಐಸಿಸಿಯಲ್ಲಿ ಏನಿದೆ. ಮಲ್ಲಿಕಾರ್ಜುನ ಖರ್ಗೆ ಅವರಿಗೆ ಏನು ಕೊಟ್ಟಿದ್ದಾರೆ. ಯುದ್ಧಕ್ಕೆ ಹೋಗು ಎಂದು ಮರದ ಕತ್ತಿ ಕೊಟ್ಟಿದ್ದಾರೆ ಎಂದು ಪ್ರಸಾದ್ ವ್ಯಂಗ್ಯವಾಡಿದರು. ಸಿದ್ದರಾಮಯ್ಯ ನಾನೇ ಮುಂದಿನ ಮುಖ್ಯಮಂತ್ರಿ ಎಂದು ಹೇಳುತ್ತಾ ಮಣ್ಣು ಮುಕ್ಕಿದರು. ಮೊದಲು ಪಾರ್ಟಿಯನ್ನು ಕಟ್ಟಲಿ. ಭಾರತ ಜೋಡೋ ಯಾತ್ರೆಗೆ ತೆಲಂಗಾಣದಲ್ಲಿ ಜನರೇ ಇಲ್ಲ. ▶ 8ನೇ ಪುಟಕ್ಕೆ

ಕೆಂಪೇಗೌಡರ ಪ್ರತಿಮೆ ಜಗತ್ತಿನ ಅತೀ ಎತ್ತರದ ಕಂಚಿನ ಪ್ರತಿಮೆ

ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್‌ನಿಂದ ಪ್ರಮಾಣಪತ್ರ



ಬೆಂಗಳೂರು: ನವೆಂಬರ್ 11 ರಂದು ಪ್ರಧಾನಿ ನರೇಂದ್ರ ಮೋದಿ ಉದ್ಘಾಟನೆ ಮಾಡಲಿರುವ ನಾಡಪ್ರಭು ಕೆಂಪೇಗೌಡರ ಕಂಚಿನ ಪ್ರತಿಮೆ ಜಗತ್ತಿನ ಅತಿ ಎತ್ತರದ ಕಂಚಿನ ಪ್ರತಿಮೆ ಎಂದು ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲಾಗಿದೆ.

ಈ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟ್ವೀಟ್ ಮೂಲಕ ಹಂಚಿಕೊಂಡಿದ್ದು, ಸಂತಸ ವ್ಯಕ್ತಪಡಿಸಿ ದ್ದಾರೆ. ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡರ "ಪ್ರಗತಿಯ ಪ್ರತಿಮೆ"ಯು ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್ ಅನುಸಾರ ಮೊದಲ ಹಾಗೂ ಅತ್ಯಂತ ಎತ್ತರದ ಕಂಚಿನ ಪ್ರತಿಮೆ ಎಂಬುದು ನಮಗೆ ಹೆಮ್ಮೆಯ ವಿಷಯ. 108 ಅಡಿಯ ಈ ಪ್ರತಿಮೆ ಕೆಂಪೇಗೌಡರ ದೂರದೃಷ್ಟಿಯ ಬೆಂಗಳೂರನ್ನು ಬಿಂಬಿಸುತ್ತದೆ. ಪ್ರಗತಿಯ ಪ್ರತಿಮೆ, ಬನ್ನಿನಾಡ ಕಟ್ಟೋಣ ಎಂದು ಟ್ವೀಟ್ ಮಾಡಿದ್ದಾರೆ.

ನಾಗರಿಕರ ನಾನಾ ಸಮಸ್ಯೆ ನಿವಾರಣೆಗೆ 'ಪಾಲಿಕೆ ಅದಾಲತ್'

●ನ.14ರಿಂದ 19ರವರೆಗೆ ಅರ್ಜಿ ಸಲ್ಲಿಸಲು ಅವಕಾಶ ●ಇಂತಹ ಅರ್ಜಿಗಳಿಗೆ ನ.27ರವರೆಗೆ ಪರಿಹಾರ ಕಲ್ಪಿಸಲು ಯತ್ನ ●ನ.30ರಂದು ಅಂತಿಮ ಅದಾಲತ್‌ನಲ್ಲಿ ಅವಕಾಶ



ಮೈಸೂರು, ನ.9(ಎಸ್‌ಪಿಎನ್)– ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವ 9 ಕ್ಕೂ ಹೆಚ್ಚು ನಾಗರಿಕ ಸನ್ನದು ಮತ್ತು ಸೇವಾ ಸೌಲಭ್ಯಗಳನ್ನು ಒಂದೇ ವೇದಿಕೆಯಲ್ಲಿ ಒದಗಿಸಲು 'ಪಾಲಿಕೆ ಅದಾಲತ್' ಹಮ್ಮಿಕೊಂಡಿದ್ದು, ಈ ಸೇವೆ ಪಡೆಯಲು ನ.14ರಿಂದ ನ.19ರೊಳಗೆ ಸಾರ್ವಜನಿಕರು ಅರ್ಜಿ ಸಲ್ಲಿಸಬಹುದು ಎಂದು ಮೇಯರ್ ಶಿವಕುಮಾರ್ ತಿಳಿಸಿದರು. ಮೈಸೂರು ನಗರ ಪಾಲಿಕೆಯ ಹಳೆ ಕೌನ್ಸಿಲ್ ಸಭಾಂಗಣದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮೈಸೂರು ಜನತೆ ಎದುರಿಸುತ್ತಿರುವ ನಾನಾ ಸಂಬಂಧ ದೂರು ಗಳ ಶೀಘ್ರ ಪರಿಹಾರ ಕಂಡುಕೊಳ್ಳಲು ಒಂದು ವೇದಿಕೆ ಕಲ್ಪಿಸುವ ಕಾರ್ಯಕ್ರಮ ಇದಾಗಿದೆ ಎಂದು ಸ್ಪಷ್ಟಪಡಿಸಿದರು. ಪಾಲಿಕೆ ಅದಾಲತ್‌ನಲ್ಲಿ ನಿವೇಶನ ಅಥವಾ ಮನೆಗಳಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ಈ ಸಂಬಂಧ ಆಶ್ರಯ ಯೋಜನೆಯಡಿ ಅಧಿಕೃತ ಪ್ರಕಟಣೆ ಹೊರಡಿಸಿ ಅರ್ಜಿಗಳನ್ನು ಕರೆದಾಗ ಮಾತ್ರ ಅರ್ಜಿ ಸಲ್ಲಿಸಬೇಕು. ಆದಾಲತ್ ಕಾರ್ಯ ಕ್ರಮದಲ್ಲಿ ಈಗಾಗಲೇ ವಲಯ ▶ 8ನೇ ಪುಟಕ್ಕೆ

ನ.14ರಿಂದ ನ.19 ರವರೆಗೆ 'ಪಾಲಿಕೆ ಅದಾಲತ್'ನಲ್ಲಿ ಸಾರ್ವಜನಿಕರಿಂದ ಬೆಳಗ್ಗೆ 11ರಿಂದ ಸಂಜೆ 4.30ರವರೆಗೆ ಮೈಸೂರು ಮಹಾನಗರ ಪಾಲಿಕೆ ಆವರಣದಲ್ಲಿ ಅರ್ಜಿ ಸ್ವೀಕರಿಸಲಾಗುವುದು. ನ.30ರಂದು ನಡೆಯುವ ಅಂತಿಮ ಅದಾಲತ್ ಪಾಲಿಕೆ ಆವರಣದಲ್ಲಿ ಆಯೋಜಿಸಿದ್ದು, ಹೆಚ್ಚಿನ ಮಾಹಿತಿಗಾಗಿ ಪಾಲಿಕೆ ಕಂಟ್ರೋಲ್ ರೂಂ ಮೊ. 94498–41196 ಅನ್ನು ಸಂಪರ್ಕಿಸಿ, ಅಗತ್ಯ ಮಾಹಿತಿ ಪಡೆಯಬಹುದು.

ಮೊದಲೇ ಅರ್ಜಿ ಸಲ್ಲಿಸಿರಬೇಕು


'ಪಾಲಿಕೆ ಅದಾಲತ್'ನಲ್ಲಿ ನಾಗರಿಕ ಸನ್ನದು ಅಥವಾ ಸೇವಾ ಸೌಲಭ್ಯಗಳಾದ ನಿವೇಶನ/ಮನೆ ಖಾತಾ ವರ್ಗಾವಣೆ/ನೋಂದಣಿ ಪ್ರಕರಣಗಳು, ಮನೆ/ನಿವೇಶನ ಕಂದಾಯ ನಿಗದಿತ ಅರ್ಜಿ ಸಲ್ಲಿಸಿರುವ ಪ್ರಕರಣಗಳು. ಆಶ್ರಯ ಯೋಜನೆಯಡಿ (ಚಾಮರಾಜ, ನರಸಿಂಹರಾಜ, ಕೃಷ್ಣರಾಜ ಕ್ಷೇತ್ರ) ಈಗಾಗಲೇ ಮನೆ/ನಿವೇಶನ ಮಂಜೂರಾಗಿದ್ದು, ಸ್ವಾಧೀನ ಪತ್ರ, ಹಕ್ಕು ಪತ್ರ, ಹಕ್ಕು ಖುಲಾಸೆ ಪತ್ರ, ಖಾತೆ ನೋಂದಣಿ/ವರ್ಗಾವಣೆ ಕೋರಿ ಸಲ್ಲಿಸಿರುವ ಪ್ರಕರಣಗಳು. ಕಟ್ಟಡ ನಿರ್ಮಾಣ ನಕ್ಷೆ ಕೋರಿ, ಕಟ್ಟಡ ಪೂರ್ಣಗೊಂಡ ಪ್ರಮಾಣ ಪತ್ರ ಕೋರಿ(ಸಿಆರ್),ವಾಣಿಜ್ಯ ಪರವಾನಗಿ ಕೋರಿ, ಜಾಹೀರಾತು ಪ್ರಕಟಣೆ ಫಲಕ ಅರ್ಜಿ, ಜನನ ಮತ್ತು ಮರಣ ದೃಢೀಕರಣ ಸೇರಿ ಇತರೆ ಸೇವಾ ಸೌಲಭ್ಯಗಳಿಗೆ ಸಾರ್ವ ಜನಿಕರು ಅರ್ಜಿ ಸಲ್ಲಿಸಬಹುದಾಗಿದೆ ಎಂದರು.

ಮುಡಾ ಜಾಗಕ್ಕೆ ನಕಲಿ ದಾಖಲೆ ಸೃಷ್ಟಿಸಿ 14 ಕೋಟಿ ಸಾಲ ಪಡೆದ ಭೂಗಳ್ಳರು!

●25 ಕೋಟಿ ರೂ. ಬೆಲೆಯ ಸ್ವತ್ತನ್ನು ಮತ್ತೊಬ್ಬರಿಗೆ ದಾನಪತ್ರದ ಮೂಲಕ ಪರಭಾರೆ
●ಆರ್‌ಟಿಐ ಕಾರ್ಯಕರ್ತ ಬಿ.ಎನ್.ನಾಗೇಂದ್ರರಿಂದ ಅಕ್ರಮ ಬಯಲು ●ಎಚ್ಚೆತ್ತ ಮುಡಾ ಅಧಿಕಾರಿಗಳಿಂದ ದೂರು, ನಾಲ್ವರ ವಿರುದ್ಧ ವಿದ್ಯಾರಣ್ಯಪುರಂ ಠಾಣೆಯಲ್ಲಿ ಎಫ್‌ಐಆರ್ ದಾಖಲು
●ಮೈಸೂರು ಸುತ್ತಮುತ್ತ ರಾಜಾರೋಷವಾಗಿ ನಡೆಯುತ್ತಿದೆ ಅಕ್ರಮ ಭೂಕಬಳಿಕೆ ಅಟ್ಟಹಾಸ



ಮುಡಾ ಕಚೇರಿ



ಮೈಸೂರು ಇಂಡಸ್ಟ್ರಿಯಲ್ ಸಬರ್ಬ್ 2ನೇ ಹಂತದ 5700 ಚದರಡಿ ವಿಸ್ತೀರ್ಣದ ಮುಡಾ ಕೈಗಾರಿಕಾ ನಿವೇಶನ.

ಎಸ್.ಟಿ.ರವಿಕುಮಾರ್

ಮೈಸೂರು, ನ. 9– ನಕಲಿ ದಾಖಲೆ ಸೃಷ್ಟಿಸಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) 5,700 ಚದರಡಿ (285x200 ಅಡಿ) ವಿಸ್ತೀರ್ಣದ ಕೈಗಾರಿಕಾ ನಿವೇಶನ ಅಡವಿಟ್ಟು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಬರೋಬ್ಬರಿ 14 ಕೋಟಿ ಸಾಲ ಪಡೆದಿರುವುದಲ್ಲದೇ ಸದರಿ ಸ್ವತ್ತನ್ನು ಬೇರೆ ವ್ಯಕ್ತಿಗೆ ದಾನಪತ್ರದ ಮೂಲಕ ಪರಭಾರೆ ಮಾಡಿರುವ ಭಾರೀ ಅಕ್ರಮ ಮೈಸೂರಿನಲ್ಲಿ ಬೆಳಕಿಗೆ ಬಂದಿದೆ.

ಆರ್‌ಟಿಐ ಕಾರ್ಯಕರ್ತ ಬಿ.ಎನ್. ನಾಗೇಂದ್ರ ಸೂಕ್ತ ದಾಖಲೆಗಳೊಂದಿಗೆ ಹಗರಣವನ್ನು ಬಯಲಿಗೆ ತಂದ ಹಿನ್ನೆಲೆಯಲ್ಲಿ ಎಚ್ಚೆತ್ತ ಮುಡಾ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ನಿರ್ದೇಶನದಂತೆ ಪ್ರಾಧಿಕಾರ ನೀಡಿದ ಲಿಖಿತ ದೂರಿನನ್ವಯ ಮೈಸೂರಿನ ವಿದ್ಯಾರಣ್ಯಪುರಂ ಠಾಣೆ ಪೊಲೀಸರು, ನಕಲಿ ದಾಖಲೆ ಸೃಷ್ಟಿಸಿ ವಂಚಿಸಿದ್ದ ನಾಲ್ವರ ವಿರುದ್ಧ ಐಪಿಸಿ ಸೆಕ್ಷನ್ 420, 465, 468, 471 ರೆಡ್‌ವಿತ್ 34 ರೀತ್ಯಾ ಮಂಗಳವಾರ ಪ್ರಕರಣ ದಾಖಲಿಸಿದ್ದಾರೆ. ಮೈಸೂರಿನ ಎಂ. ನಂಜಪ್ಪ ಹಾಸನದ ಎಲ್.ಜಗದೀಶ್, ಶಶಿ ಹಾಗೂ ಲಕ್ಷ್ಮೀಗೌಡ, ಅಕ್ರಮವಾಗಿ ಮುಡಾ ನಿವೇಶನವನ್ನು ಬ್ಯಾಂಕ್ ಆಫ್ ಬರೋಡಾ ಹಾಸನ ಶಾಖೆಯಲ್ಲಿ ಅಡವಿಟ್ಟು 14 ಕೋಟಿ ರೂ. ಸಾಲ ಪಡೆದಿದ್ದಾರೆ. ಇವರ ವಿರುದ್ಧ ವಿದ್ಯಾರಣ್ಯಪುರಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ವಿಶ್ವೇಶ್ವರನಗರದ ಇಂಡಸ್ಟ್ರಿಯಲ್ ಸಬರ್ಬ್ 2ನೇ ಹಂತದ ಬಡಾವಣೆಯಲ್ಲಿರುವ 285x200 ಅಡಿಯ ಒಟ್ಟು 5,700 ಚದರಡಿ ವಿಸ್ತೀರ್ಣದ ಕೈಗಾರಿಕಾ ನಿವೇಶನ ಸಂಖ್ಯೆ 36/ಎ ಮುಡಾ ನಿವೇಶನವಿದ್ದು, ಈವರೆಗೂ ಯಾರಿಗೂ ಮಂಜೂರಾಗಿಲ್ಲ ಎಂದು ಮುಡಾ ತಹಸೀಲ್ದಾರ್ ಆರ್. ಮಂಜುನಾಥ ತಮ್ಮ ದೂರಿನಲ್ಲಿ ತಿಳಿಸಿದ್ದಾರೆ. 2016ರಿಂದ ಈವರೆಗೆ ಹಲವು ಬಾರಿ ಹರಾಜು ಮಾಡಿದರೂ ಈವರೆಗೆ ನಿಗದಿತ ದರಕ್ಕೆ ಯಾರೂ ಬಿಡ್ ಮಾಡದ ಕಾರಣ ಈ ನಿವೇಶನ (ಚದರಡಿಗೆ 2,600 ರೂ. ಬೆಲೆ ನಿಗದಿಯಾಗಿತ್ತು) ಹಾಗೆಯೇ ಬಿದ್ದಿದೆ. ಈ ಹಂತದಲ್ಲಿ ಇಸಿ ತೆಗೆಸಿ ಪರಿಶೀಲಿಸಿದಾಗ 2018ರ ಸೆಪ್ಟೆಂಬರ್ 28ರಂದು ಮೆ. ಆರ್‌ಜೆಡಿಜೆ ಪ್ರಾಪರ್ಟೀಸ್ ಪಾಲುದಾರರಾದ ಜಗದೀಶ್, ಶಶಿ, ಎಂ. ನಂಜಪ್ಪ ಹಾಗೂ ಲಕ್ಷ್ಮೀಗೌಡ ಎಂಬುವರಿಂದ ಬ್ಯಾಂಕ್ ಆಫ್ ಬರೋಡಾ, ಹಾಸನ ಶಾಖೆಯಲ್ಲಿ ಆಧಾರ ಎಂಬುದಾಗಿ ನೋಂದಣಿಯಾಗಿದ್ದು, 14 ಕೋಟಿ ರೂ. ಸಾಲ ಪಡೆದು ನಂತರ 2018ರ ಅಕ್ಟೋಬರ್ 20ರಂದು ಸಾಲ ಹಿಂತಿರುಗಿಸಿರುವ ವಿಷಯ ತಿಳಿಯಿತು ಎಂದು ಮಂಜುನಾಥ ದೂರಿನಲ್ಲಿ ▶ 8ನೇ ಪುಟಕ್ಕೆ

ಹಳೇ ಕೆಸರೆ, ರಾಯನಕೆರೆ ತ್ಯಾಜ್ಯ ವಿಲೇವಾರಿ ಘಟಕಗಳ ಆರಂಭದೊಂದಿಗೆ

ಜನರಿಗೆ ಸಿವೇಜ್ ಫಾರಮ್ ದುರ್ವಾಸನೆಗೆ ಮುಕ್ತಿ

●ಶಾಸಕ ರಾಮದಾಸ್ ಭರವಸೆ ●ಹಳೇ ಕೆಸರೆಯಲ್ಲಿ 300 ಟನ್, ರಾಯನಕೆರೆಯಲ್ಲಿ 200 ಟನ್ ಘನ ತ್ಯಾಜ್ಯ ವಿಲೇವಾರಿ * ಕೆಸರೆ ಘಟಕ ಡಿಸೆಂಬರ್‌ನಲ್ಲಿ, ರಾಯನಕೆರೆ ಘಟಕ ಜನವರಿಯಲ್ಲಿ ಕಾರ್ಯಾರಂಭ ●ಇದರೊಂದಿಗೆ ಮತ್ತೆ ಮೈಸೂರು ಸ್ವಚ್ಛ ನಗರಿ ಪ್ರತಿಷ್ಠೆ ಮೆರೆಯಲು ಪಣ





ಮೈಸೂರು, ನ.9(ಎಂಟಿವೈ)– ಮೈಸೂರು ತಾಲೂಕಿನ ರಾಯನಕೆರೆಯಲ್ಲಿ ನಿರ್ಮಿಸುತ್ತಿರುವ ಘನತ್ಯಾಜ್ಯ ವಿಲೇವಾರಿ ಘಟಕದ ಕಾಮಗಾರಿ ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳ್ಳಲಿದೆ. ಜನವರಿ 2ನೇ ವಾರದಿಂದ ಕಾರ್ಯಾರಂಭ ಮಾಡುವುದರಿಂದ ವಿದ್ಯಾರಣ್ಯಪುರಂ ಸಿವೇಜ್ ಪ್ಲಾಂಟ್ ಸಮಸ್ಯೆಗೆ ಶಾಶ್ವತ ಪರಿಹಾರ ದೊರೆಯಲಿದೆ ಎಂದು ಶಾಸಕ ಎಸ್.ಎ.ರಾಮದಾಸ್ ತಿಳಿಸಿದ್ದಾರೆ.

9.50 ಕೋಟಿ ರೂ. ವೆಚ್ಚದಲ್ಲಿ ರಾಯನಕೆರೆಯಲ್ಲಿ ನಿರ್ಮಿಸಲಾಗುತ್ತಿರುವ 200 ಟನ್ ಸಾಮರ್ಥ್ಯದ ತ್ಯಾಜ್ಯ ವಿಲೇವಾರಿ ಘಟಕದ ಕಾಮಗಾರಿ ಪರಿಶೀಲನೆ ಬಳಿಕ ಮಾತನಾಡಿದ ಅವರು, ಮೈಸೂರು ನಗರದಲ್ಲಿ ಪ್ರತಿದಿನ 450 ರಿಂದ 500 ಟನ್ ತ್ಯಾಜ್ಯ ಸಂಗ್ರಹವಾಗುತ್ತಿದ್ದು, ಅದನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವುದೇ ಪಾಲಿಕೆಗೆ ಸವಾಲಾಗಿ ಪರಿಣಮಿಸಿತ್ತು. ಹಲವು ವರ್ಷದಿಂದ ಮೈಸೂರಲ್ಲಿ ಸಂಗ್ರಹವಾಗುವ ಕಸವನ್ನು ವಿದ್ಯಾರಣ್ಯಪುರಂನಲ್ಲಿರುವ ಸಿವೇಜ್ ಫಾರಂನಲ್ಲಿ ಸಂಗ್ರಹಿಸಲಾಗುತ್ತಿತ್ತು. ಅಲ್ಲದೆ ಪೂರ್ಣ ಪ್ರಮಾಣದಲ್ಲಿ ವಿಲೇವಾರಿ ಮಾಡಲು ಸಾಧ್ಯವಾಗದ ಕಾರಣ, 7 ಲಕ್ಷಕ್ಕೂ ಅಧಿಕ ಟನ್ ಕಸದ ರಾಶಿ ಅಲ್ಲಿ ಬಿದ್ದಿದೆ. ಮೈಸೂರು ನಗರ ಬೆಳೆದಂತೆ ಕಸ ಸಂಗ್ರಹಣೆ ಪ್ರಮಾಣವೂ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಮೈಸೂರಲ್ಲಿ ಘನತ್ಯಾಜ್ಯ ವಿಲೇವಾರಿ ಸಮಸ್ಯೆ ಉದ್ಭವವಾಗದಂತೆ ಎಚ್ಚರ ವಹಿಸುವ ನಿಟ್ಟಿನಲ್ಲಿ ಹೊಸದಾಗಿ ಹಳೆ ಕೆಸರೆ ಹಾಗೂ ರಾಯನಕೆರೆಯಲ್ಲಿ ಕಸ ವಿಲೇವಾರಿ ಘಟಕ ಸ್ಥಾಪಿಸಲಾಗುತ್ತಿದೆ ಎಂದರು. ಹಳೆ ಕೆಸರೆಯಲ್ಲಿ ಸ್ಥಾಪಿಸುತ್ತಿರುವ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ 300 ಟನ್ ಕಸ ವಿಲೇವಾರಿ ಮಾಡಬಹುದು. ಆದರೆ ಈಗ ಪ್ರಾಯೋಗಿಕವಾಗಿ 150 ಟನ್ ವಿಲೇವಾರಿ ಮಾಡುವಂತೆ ಸೂಚಿಸಲಾಗಿದೆ. ರಾಯನಕೆರೆಯಲ್ಲಿ 200 ಟನ್ ಕಸ ವಿಲೇವಾರಿ ಮಾಡಬಹುದಾಗಿದೆ. ಈಗಾಗಲೇ ಘಟಕ ನಿರ್ಮಾಣಕ್ಕೆ ತಳಪಾಯ ಕಾಮಗಾರಿ ಪೂರ್ಣಗೊಂಡಿದೆ. ಮುಂದಿನ ▶ 6ನೇ ಪುಟಕ್ಕೆ

ಡಿ.25ರೊಳಗೆ ಶ್ವಾನ ಪುನರ್ವಸತಿ ಕೇಂದ್ರ ಉದ್ಘಾಟನೆ




ಮೈಸೂರು, ನ.9(ಎಂಟಿವೈ)– ಬೀದಿನಾಯಿಗಳ ರಕ್ಷಣೆಗಾಗಿ ರಾಜ್ಯದಲ್ಲೇ ಮೊದಲ ಬಾರಿಗೆ ಮೈಸೂರಲ್ಲಿ ನಿರ್ಮಿಸುತ್ತಿರುವ ಶ್ವಾನಗಳ ಪುನರ್ವಸತಿ ಕೇಂದ್ರ ಡಿ.25ರೊಳಗೆ ಆರಂಭವಾಗಲಿದೆ ಎಂದು ಶಾಸಕ ಎಸ್.ಎ.ರಾಮದಾಸ್ ತಿಳಿಸಿದ್ದಾರೆ. ಮೈಸೂರು ತಾಲೂಕಿನ ರಾಯನಕೆರೆ ಬಳಿ 3.20 ಎಕರೆ ಜಾಗದಲ್ಲಿ 4 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸುತ್ತಿರುವ ಶ್ವಾನಗಳ ಪುನರ್ವಸತಿ ಕೇಂದ್ರದ ಕಾಮಗಾರಿ ಪರಿಶೀಲಿಸಿದ ಬಳಿಕ ಮಾತನಾಡಿದ ಅವರು, ಮೈಸೂರು ನಗರದಲ್ಲಿ ನಾಯಿಗಳ ಸಂಖ್ಯೆ ಹೆಚ್ಚಾಗಿದೆ ಎಂಬ ದೂರು ಕೇಳಿ ಬರುತ್ತಿದೆ.

ಅಲ್ಲದೇ ಶ್ವಾನಗಳಿಗೆ ಆಗುತ್ತಿರುವ ನಾನಾ ತೊಂದರೆಯ ಬಗ್ಗೆಯೂ ಸಾರ್ವಜನಿಕರು ದೂರು ನೀಡುತ್ತಲೇ ಬಂದಿದ್ದಾರೆ. ಈ ಹಿನ್ನೆಲೆಯಲ್ಲಿ ನಗರದಲ್ಲಿರುವ ಬೀದಿ ನಾಯಿಗಳಿಗಾಗಿ ಪುನರ್ವಸತಿ ಕೇಂದ್ರ ಸ್ಥಾಪಿಸಲಾಗುತ್ತಿದೆ. ಅವುಗಳ ಉಪಟಳದ ದೂರು ಬಂದ ಸ್ಥಳದಿಂದ ಬೀದಿನಾಯಿಗಳನ್ನು ಹಿಡಿದು, ಪುನರ್ವಸತಿ ಕೇಂದ್ರದಲ್ಲಿ ಪಾಲನೆ ಮಾಡಲಾಗುತ್ತದೆ ಎಂದರು.

ಕೊರೊನಾ ಸಂದರ್ಭದಲ್ಲಿ ಆಹಾರವಿಲ್ಲದೇ ನಾಯಿಗಳು ನರಳಿದ್ದವು. ಶ್ವಾನ ಪ್ರಿಯರ ಸಹಕಾರ ಹಾಗೂ ವಿವಿಧ ಸಂಘ ಸಂಸ್ಥೆಗಳ ನೆರವು ಪಡೆದು, ಕೋವಿಡ್ ಸಂದರ್ಭದಲ್ಲಿ ಬೀದಿ ನಾಯಿಗಳಿಗೆ ಆಹಾರ ಪೂರೈಸಲಾಗಿತ್ತು. ಸಾಕಷ್ಟು ಶ್ವಾನಗಳು ಆಹಾರವಿಲ್ಲದೇ, ಅನಾರೋಗ್ಯದಿಂದ, ಅಪಘಾತಕ್ಕೀಡಾಗಿ ಮೃತಪಟ್ಟಿದ್ದವು. ಇದನ್ನು ಮನಗಂಡು, ಅವುಗಳ ಕಾಪಾಡುವ ದೃಷ್ಟಿಯಿಂದ ಶ್ವಾನಗಳ ಪುನರ್ವಸತಿ ಕೇಂದ್ರವನ್ನು ಸ್ಥಾಪಿಸಬೇಕೆಂದು ತೀರ್ಮಾನಿಸಲಾಗಿತ್ತು. ▶ 6ನೇ ಪುಟಕ್ಕೆ

ಅಂಡಮಾನ್ ಗ್ಯಾಂಗ್‌ರೇಪ್ ಪ್ರಕರಣದಲ್ಲಿ ತಲೆಮರೆಸಿಕೊಂಡಿರುವ ಅಧಿಕಾರಿ ಸುಳಿವು ನೀಡಿದವರಿಗೆ ಲಕ್ಷ ರೂ. ಬಹುಮಾನ



ರಿಶೀಶ್ವರಲಾಲ್

ಮೈಸೂರು,ನ.9(ಆರ್‌ಕೆ)–ಅಂಡಮಾನ್ ಗ್ಯಾಂಗ್‌ರೇಪ್ ಪ್ರಕರಣದಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿರುವ ಅಧಿಕಾರಿಯ ಸುಳಿವು ನೀಡಿದವರಿಗೆ ಲಕ್ಷ ರೂ. ಬಹುಮಾನ ನೀಡುವುದಾಗಿ ಅಲ್ಲಿನ ಪೊಲೀಸರು ತಿಳಿಸಿದ್ದಾರೆ. ಅಂಡಮಾನ್‌ನಲ್ಲಿ ಕಾರ್ಮಿಕ ಆಯುಕ್ತರಾಗಿದ್ದ ರಿಶೀಶ್ವರಲಾಲ್ ರಿಶಿ ಅಲಿಯಾಸ್ ಆರ್.ಎಲ್. ರಿಶಿ ತಲೆಮರೆಸಿಕೊಂಡಿರುವವರು. ಗ್ಯಾಂಗ್‌ರೇಪ್ ಪ್ರಕರಣದಲ್ಲಿ ಈ ಅಧಿಕಾರಿ ಆರೋಪಿಯಾಗಿದ್ದು, ಅಂಡಮಾನ್‌ನ ಅಬೆರದೀನ್ ಪೊಲೀಸ್ ಠಾಣೆ (ಪೋರ್ಟ್‌ಬ್ಲೇರ್)ಯಲ್ಲಿ ಸಾಮೂಹಿಕ ಅತ್ಯಾಚಾರ ಪ್ರಕರಣ (ಎಫ್‌ಐಆರ್ ನಂ. 165/22, ದಿನಾಂಕ 1.10.2022 ಯು/ಎಸ್ 376ಡಿ, 228ಎ, 506, 120ಬಿ ಐಪಿಸಿ) ದಾಖಲಾಗುತ್ತಿದ್ದಂತೆಯೇ ರಿಶೀಶ್ವರಲಾಲ್ ತಲೆಮರೆಸಿಕೊಂಡಿದ್ದಾರೆ ಎಂದು ಅಬೆರದೀನ್ ಪೊಲೀಸರ ಪರವಾಗಿ ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿಯಿಂದ ಹೊರಡಿಸಲಾದ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

5.7 ಅಡಿ ಎತ್ತರ, ಸಾಧಾರಣ ಮೈಕಟ್ಟು, ಬಿಳಿ ಮೈಬಣ್ಣದ ಚಹರೆ ಹೊಂದಿರುವ ಈ ಅಧಿಕಾರಿಯ ಸುಳಿವು ನೀಡಿದವರಿಗೆ ಲಕ್ಷ ರೂ. ನಗದು ಬಹುಮಾನ ನೀಡಲಾಗುವುದು ಹಾಗೂ ಮಾಹಿತಿದಾರರ ವಿವರವನ್ನು ರಹಸ್ಯವಾಗಿಡಲಾಗುವುದು. ಕೆಲಸ ಕೊಡಿಸುವ ಆಮಿಷ ಒಡ್ಡಿ ಅಂಡಮಾನ್ ನಿಕೋಬಾರ್ ದ್ವೀಪದ ಮಾಜಿ ಮುಖ್ಯ ಕಾರ್ಯದರ್ಶಿ ಮನೆಗೆ ಕರೆಸಿಕೊಂಡು 21 ವರ್ಷದ ಮಹಿಳೆ ಮೇಲೆ ಗ್ಯಾಂಗ್‌ರೇಪ್ ಮಾಡಿದ್ದಾರೆಂಬ ಆರೋಪದಡಿ ರಿಶೀಶ್ವರಲಾಲ್‌ಗಾಗಿ ಅಲ್ಲಿನ ಪೊಲೀಸರು ಶೋಧ ನಡೆಸುತ್ತಿದ್ದಾರೆ. 46 ವರ್ಷ ವಯಸ್ಸಿನ ರಿಶೀಶ್ವರಲಾಲ್ ಬಗ್ಗೆ ಮಾಹಿತಿ ದೊರೆತಲ್ಲಿ ತನಿಖಾಧಿಕಾರಿಗಳಾದ ಇನ್ಸ್‌ಪೆಕ್ಟರ್ ಜ್ಯೋತಿ ಚೆಟ್ಟುವಾಲ್ (91–94742 46869), ಸಬ್ ಇನ್ಸ್‌ಪೆಕ್ಟರ್ ಅಭಿಷೇಕ್ ಮೆನನ್ (+91 9531892057, 94742 22113), ಇಮೇಲ್ ಐಡಿ sp:apsap@and.nc.enಗೆ ಮಾಹಿತಿ ನೀಡಬಹುದಾಗಿದೆ. ಅಥವಾ ವಿಶೇಷ ತನಿಖಾ ತಂಡ, ಪೊಲೀಸ್ ಲೈನ್, ಪೋರ್ಟ್‌ಬ್ಲೇರ್–744103, ದಕ್ಷಿಣ ಅಂಡಮಾನ್ ಸಂಪರ್ಕಿಸಬಹುದು ಎಂದು ಪೊಲೀಸ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಮೈಸೂರಿನ ಬೋಗಾದಿ ಮುಖ್ಯರಸ್ತೆ–ಜೆ.ಸಿ.ಕಾಲೇಜು ರಸ್ತೆ ಸಿಗ್ನಲ್ ಜಂಕ್ಷನ್‌ನಲ್ಲಿ ಕೆಆರ್‌ಐಡಿಎಲ್ ವತಿಯಿಂದ 5 ಲಕ್ಷ ವೆಚ್ಚದಲ್ಲಿ ನಿರ್ಮಿಸಲುದ್ದೇಶಿಸಿರುವ ಶಂಕರ್ ನಾಗ್ ಆಟೋ ನಿಲ್ದಾಣ ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಭೂಮಿಪೂಜೆ ನೆರವೇರಿಸಿದರು. ಇದೇ ವೇಳೆ ಶಂಕರ್‌ನಾಗ್ ಅವರ 68ನೇ ಹುಟ್ಟುಹಬ್ಬವನ್ನು ಆಚರಿಸಲಾಯಿತು. ವಾರ್ಡ್ ನಂ.19ರ ಕಾರ್ಪೊರೇಟರ್ ಶ್ರೀಮತಿ ಭಾಗ್ಯ ಮಾದೇಶ್, ಬಿ.ಎಲ್.ಎ–1 ದಿನೇಶ್‌ಗೌಡ, ಚಾಮರಾಜ ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿ ರಮೇಶ್, ಮುಖಂಡರಾದ ರವಿ, ಆಟೋ ಚಾಲಕರ ಸಂಘದ ರಾಜು, ಸಂತೋಷ್, ಬಾಬು, ನಿವಾಸಿಗಳಾದ ಕಾಂತರಾಜು, ಪಾಂಡವಪುರ ದಿನೇಶ್, ರಂಗಪ್ಪ, ಕೆಆರ್‌ಐಡಿಎಲ್ ಸಂಸ್ಥೆಯ ಇಂಜಿನಿಯರ್ ಅರ್ಚನ, ವಿವೇಕ್ ಉಪಸ್ಥಿತರಿದ್ದರು.

ಶೇ.10ರಷ್ಟು ಮೀಸಲಾತಿ ಈ ವರ್ಷದಿಂದಲೇ ಅನುಷ್ಠಾನಗೊಳಿಸಿ

ಮೈಸೂರು, ನ.9(ಆರ್‌ಕೆಬಿ)– ಆರ್ಥಿಕವಾಗಿ ಹಿಂದುಳಿದ ಸಮುದಾಯಗಳಿಗೆ ಶೇ.10 ಮೀಸಲಾತಿ ಕುರಿತಂತೆ ಸುಪ್ರೀಂಕೋರ್ಟ್ ನೀಡಿರುವ ತೀರ್ಪನ್ನು ರಾಜ್ಯ ಸರ್ಕಾರ ಈ ವರ್ಷದಿಂದಲೇ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳುವಂತೆ ಜಿಲ್ಲಾ ಬ್ರಾಹ್ಮಣ ಮಹಾಸಭಾ ಜಿಲ್ಲಾಧ್ಯಕ್ಷ ಬಿ. ಆರ್.ನಟರಾಜ್ ಜೋಯಿಸ್ ಒತ್ತಾಯಿಸಿದರು.



ಬ್ರಾಹ್ಮಣ ಮಹಾಸಭಾ ಒತ್ತಾಯ

ಮೈಸೂರು ಪತ್ರಕರ್ತರ ಭವನದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಆರ್ಥಿಕವಾಗಿ ಹಿಂದುಳಿದ ಸಮುದಾಯಗಳಿಗೆ ಶೇ.10 ಮೀಸಲಾತಿಗೆ ಶ್ರಮಿಸಿದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಜಿಲ್ಲಾ ಬ್ರಾಹ್ಮಣ ಮಹಾಸಭಾ ಸಂಘದ ಪರವಾಗಿ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ಕೇಂದ್ರ ಸರ್ಕಾರದ ಈ ಕೊಡುಗೆಯಿಂದ ಮೇಲ್ವರ್ಗದ ಬಡವರಿಗೆ ಅನುಕೂಲವಾಗುತ್ತದೆ. ಇದರಲ್ಲಿ ಕೇವಲ ಬ್ರಾಹ್ಮಣ ಸಮುದಾಯಗಳು ಮಾತ್ರ ಸೇರ್ಪಡೆಗೊಂಡಿಲ್ಲ. ಅನೇಕ ಮೇಲ್ಜಾತಿಗಳು ಹಾಗೂ ವಾರ್ಷಿಕ 8 ಲಕ್ಷಕ್ಕಿಂತ ಕಡಿಮೆ ಆದಾಯ ಹೊಂದಿರುವ ಎಲ್ಲಾ ಸಮುದಾಯಗಳು ಈ ಮೀಸಲಾತಿಯ ಫಲಾನುಭವಿಗಳು ಎಂದರು.

ಬ್ರಾಹ್ಮಣ ಸಮುದಾಯದಲ್ಲೂ ಅನೇಕರು ಬಡವರಿದ್ದಾರೆ. ಈ ಸಮುದಾಯದ ಮಕ್ಕಳು ಕಷ್ಟಪಟ್ಟು ಓದಿ ಪರೀಕ್ಷೆಗಳಲ್ಲಿ ಶೇ.95 ಕ್ಕಿಂತಲೂ ಅಧಿಕ ಅಂಕಗಳನ್ನು ಪಡೆದರೂ ಅವರಿಗೆ ವೃತ್ತಿಪರ ಕೋರ್ಸ್‌ಗಳಲ್ಲಿ ಹಾಗೂ ಸರ್ಕಾರಿ ನೌಕರಿಯಲ್ಲಿ ಅವಕಾಶ ಸಿಗುತ್ತಿರಲಿಲ್ಲ. ಆದರೆ, ಕೇಂದ್ರ ಸರ್ಕಾರ ನೀಡುವ ಶೇ.10 ಮೀಸಲಾತಿಯಿಂದ ಕೆಲ ಬಡ ಬ್ರಾಹ್ಮಣ ಸಮುದಾಯದ ಪ್ರತಿಭೆಗಳಿಗೆ ಸ್ವಲ್ಪ ಮಟ್ಟಿಗೆ ಅನುಕೂಲವಾಗಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಚಿಂತಕ ರಘುರಾಮ್ ವಾಜಪೇಯಿ, ಸಂಘದ ಮಹಿಳಾ ಅಧ್ಯಕ್ಷೆ ವಿಜಯಲಕ್ಷ್ಮಿ, ಆರ್.ಎಸ್.ಸತ್ಯನಾರಾಯಣ ಉಪಸ್ಥಿತರಿದ್ದರು.

'ದೇವಾಂಗ ಕುಟುಂಬ' ರಚನೆಗೆ ನ.12ರಂದು ಪೂರ್ವಭಾವಿ ಸಭೆ

ಮೈಸೂರು,ನ.9(ಆರ್‌ಕೆಬಿ)–ಮೈಸೂರು ಜಿಲ್ಲೆ ಮತ್ತು ನಗರ ಪ್ರದೇಶದ ದೇವಾಂಗ ಕುಲಬಾಂಧವರನ್ನು ಒಂದೇ ವೇದಿಕೆಯಡಿ ತರುವ ನಿಟ್ಟಿನಲ್ಲಿ 'ದೇವಾಂಗ ಕುಟುಂಬ'ವನ್ನು ರಚಿಸುವ ಸಂಬಂಧ ನ.12ರಂದು ಮೈಸೂರಿನ ಸುಮುಖ ಫಂಕ್ಷನ್ ಹಾಲ್‌ನಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ ಎಂದು ಸಂಘಟನೆ ನಿರ್ದೇಶಕ ಜಗದೀಶ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ 50 ಸಾವಿರಕ್ಕೂ ಹೆಚ್ಚಿರುವ ದೇವಾಂಗ ಸಮುದಾಯದ ಜನರ ಒಂದೇ ವೇದಿಕೆಯಡಿ ಸಂಘಟಿಸುವ ಉದ್ದೇಶ ಹೊಂದಿದ್ದೇವೆ ಎಂದರು.

ಹಿಂದುಳಿದ ದೇವಾಂಗ ಸಮುದಾಯ ನೇಕಾರಿಕೆ ವೃತ್ತಿಯಾಗಿದ್ದು, ಕೇಂದ್ರ, ರಾಜ್ಯ ಸರ್ಕಾರದ ಸರ್ಕಾರಿ ಸವಲತ್ತುಗಳು ನಮ್ಮ ಸಮುದಾಯಕ್ಕೆ ತಲುಪುತ್ತಿಲ್ಲ. ಹೀಗಾಗಿ ನಮ್ಮ ಸಮುದಾಯ ಕಡೆಗಣಿಸಲ್ಪಟ್ಟಿದೆ. ಹೀಗಾಗಿ ನ.12ರ ಪೂರ್ವಭಾವಿ ಸಭೆ ಬಹಳ ಮುಖ್ಯವಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಎಂ.ಎಸ್ ಮಂಜುನಾಥ್, ಬಿ.ವಿ ಕುಮಾರ್, ಎಂ.ವಿ.ಬಾಲರಾಜ್ ಉಪಸ್ಥಿತರಿದ್ದರು.

20ಕ್ಕೆ ಗಾಯತ್ರಿ ಸುಂದರೇಶ್‌ರ ರತುನ ಮೆಚ್ಚಿದ ಕಥೆಗಳು ಕೃತಿ ಲೋಕಾರ್ಪಣೆ

ಮೈಸೂರು,ನ.9–ಮೈಸೂರಿನ ಸಂಸ್ಕೃತಿ ಪ್ರಕಾಶನದ ವತಿಯಿಂದ ಲೇಖಕಿ, ಕಥೆಗಾರ್ತಿ ಗಾಯತ್ರಿ ಸುಂದರೇಶ್ ಅವರ "ರತುನ ಮೆಚ್ಚಿದ ಕಥೆಗಳು" ಕೃತಿ ಬಿಡುಗಡೆ ಸಮಾರಂಭವನ್ನು ನ.20ರಂದು ಅಪರಾಹ್ನ 12.15ಕ್ಕೆ ಕೃಷ್ಣಧಾಮ ಹತ್ತಿರವಿರುವ ಬಬ್ಬೂರು ಕಮ್ಮೆ ಸಂಘದ ಆವರಣದಲ್ಲಿ ಏರ್ಪಡಿಸಲಾಗಿದೆ.

ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನ ಶ್ರೀಗಂಧವಲಯ ಪ್ರಮುಖರು, ಅಂಕಣಕಾರರೂ ಆದ ಡಾ.ವಿ.ರಂಗನಾಥ್ ಕೃತಿ ಲೋಕಾರ್ಪಣೆಗೊಳಿಸಲಿದ್ದಾರೆ. ಲೇಖಕರು, ಪುಸ್ತಕ ಸಲಹೆಗಾರರೂ ಆದಂತಹ ಸಂಸ್ಕೃತಿ ಸುಬ್ರಹ್ಮಣ್ಯ ಮುಖ್ಯ ಅತಿಥಿಗಳಾಗಿದ್ದು, ನಿವೃತ್ತ ರೈಲ್ವೆ ಅಧಿಕಾರಿಗಳಾದ ಹೆಚ್.ಎಸ್.ರಾಮಣ್ಣ ಉಪಸ್ಥಿತರಿರುತ್ತಾರೆ. ಲೇಖಕಿಯ ಅತ್ತೆಯವರಾದ ಶ್ರೀಮತಿ ನಾಗರತ್ನಮ್ಮನವರ ಮೊದಲನೇ ವರುಷದ ಪುಣ್ಯ ಸ್ಮರಣಾರ್ಥದ ದಿನ ಬಿಡುಗಡೆಯಾಗುತ್ತಿರುವ ಈ ಕೃತಿಯಲ್ಲಿ ಒಟ್ಟು 17 ಕಥೆಗಳಿವೆ. ಕನ್ನಡ ರಾಜ್ಯೋತ್ಸವದ ತಿಂಗಳಿನಲ್ಲಿ ಸಾಹಿತ್ಯ ಸರಸ್ವತಿಗೆ 'ಪುಸ್ತಕ ಬಾಗೀನ' ಕೊಡುವ ಉದ್ದೇಶದಿಂದ ಅದೇ ದಿನ ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಲೇಖಕಿ ಗಾಯತ್ರಿ ಸುಂದರೇಶ್ ತಿಳಿಸಿದ್ದಾರೆ.

ಮೈಸೂರಲ್ಲಿ ಇಂದು ಗೃಹ ಸಚಿವರಿಂದ ಆಲನಹಳ್ಳಿ, ಹೆಬ್ಬಾಳು ಠಾಣೆ ಸೇರಿದಂತೆ

ಪೊಲೀಸ್ ಇಲಾಖೆಯ ನಾಲ್ಕು ಕಟ್ಟಡಗಳ ಉದ್ಘಾಟನೆ



ಹೆಬ್ಬಾಳು ಪೊಲೀಸ್ ಠಾಣೆ



ಆಲನಹಳ್ಳಿ ಪೊಲೀಸ್ ಠಾಣೆ



ಕೆ.ಆರ್.ಪ್ರಸಾದ್ ಹೆಬ್ಬಾಳ್ ಇನ್ಸ್‌ಪೆಕ್ಟರ್



ಜಿ.ಎನ್.ಶ್ರೀಕಾಂತ್ ಆಲನಹಳ್ಳಿ ಇನ್ಸ್‌ಪೆಕ್ಟರ್



ಆರಗ ಜ್ಞಾನೇಂದ್ರ



ಪೊಲೀಸ್ ಟ್ರೈನಿಂಗ್ ಸ್ಕೂಲ್ ಬ್ಲಾಕ್



ಕರ್ನಾಟಕ ಪೊಲೀಸ್ ಅಕಾಡೆಮಿ ಹಾಸ್ಟೆಲ್

ಮೈಸೂರು, ನ. 9 (ಆರ್‌ಕೆ)– ಮೈಸೂರಲ್ಲಿ ಪೊಲೀಸ್ ಇಲಾಖೆ ನಿರ್ಮಿಸಿರುವ ಆಲನಹಳ್ಳಿ, ಹೆಬ್ಬಾಳು ಪೊಲೀಸ್ ಠಾಣೆ, ಪಿಟಿಎಸ್ ಆಡಳಿತ ಕಚೇರಿ ಹಾಗೂ ಕೆಪಿಎ ಗೆಜೆಟೆಡ್ ಅಧಿಕಾರಿಗಳ ಹಾಸ್ಟೆಲ್ ಬ್ಲಾಕ್‌ನ ಕಟ್ಟಡಗಳನ್ನು ಗೃಹ ಸಚಿವ ಆರಗ ಜ್ಞಾನೇಂದ್ರ ನಾಳೆ (ನ.10) ಉದ್ಘಾಟಿಸುವರು. ಇಂದು ಸಂಜೆಯೇ ಮೈಸೂರಿಗೆ ಆಗಮಿಸಿ ನಜರ್‌ಬಾದ್‌ನ ಸರ್ಕಾರಿ ಅತಿಥಿ ಗೃಹದಲ್ಲಿ ವಾಸ್ತವ್ಯ ಹೂಡಿರುವ ಗೃಹ ಸಚಿವರು, ಗುರುವಾರ ಬೆಳಗ್ಗೆ 10 ಗಂಟೆಗೆ ರಿಂಗ್ ರಸ್ತೆ ಜಂಕ್ಷನ್ ಬಳಿ ಬನ್ನೂರು ರಸ್ತೆಗೆ ಹೊಂದಿಕೊಂಡಂತೆ 2.15 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಿಸಿರುವ ಆಲನಹಳ್ಳಿ ಪೊಲೀಸ್ ಠಾಣೆ ನೂತನ ಕಟ್ಟಡವನ್ನು ಉದ್ಘಾಟಿಸುವರು ಎಂದು ಆ ಠಾಣೆ ಇನ್ಸ್‌ಪೆಕ್ಟರ್ ಜಿ.ಎನ್.ಶ್ರೀಕಾಂತ್ ತಿಳಿಸಿದ್ದಾರೆ.

ಬೆಳಗ್ಗೆ 11 ಗಂಟೆಗೆ ಹೆಬ್ಬಾಳು ಮುಖ್ಯ ರಸ್ತೆಯಲ್ಲಿ ನಿರ್ಮಿಸಿರುವ 2.15 ಕೋಟಿ ರೂ. ವೆಚ್ಚದ ಹೆಬ್ಬಾಳು ಠಾಣೆ ಹೊಸ ಕಟ್ಟಡವನ್ನು ಗೃಹ ಸಚಿವರು ಉದ್ಘಾಟಿಸುವರು ಎಂದು ಸದರಿ ಠಾಣೆ ಇನ್ಸ್‌ಪೆಕ್ಟರ್ ಕೆ.ಆರ್. ಪ್ರಸಾದ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಪ್ರಸ್ತುತ ರಿಂಗ್ ರಸ್ತೆಗೆ ಹೊಂದಿಕೊಂಡಂತೆ ಆಲನಹಳ್ಳಿಯ ಬಾಡಿಗೆ ಕಟ್ಟಡದಲ್ಲಿ ಆಲನಹಳ್ಳಿ ಪೊಲೀಸ್ ಠಾಣೆ, ಹೆಬ್ಬಾಳಿನ ಶುಭೋದಿನಿ ಕಲ್ಯಾಣ ಮಂಟಪದ ಪಕ್ಕ ರಿಂಗ್ ರಸ್ತೆಗೆ ಹೊಂದಿಕೊಂಡಂತೆ ಖಾಸಗಿ ಕಟ್ಟಡದಲ್ಲಿ ಹೆಬ್ಬಾಳು ಪೊಲೀಸ್ ಠಾಣೆ ಕಾರ್ಯನಿರ್ವಹಿಸುತ್ತಿವೆ. ಈ ಎರಡೂ ಪೊಲೀಸ್ ಠಾಣೆಗಳಿಗೆ ಈಗ ಹೊಸ ಕಟ್ಟಡ ನಿರ್ಮಿಸಲಾಗಿದ್ದು, ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಇದಕ್ಕೆ ವಿಶೇಷ ಆಸ್ಥೆ ವಹಿಸಿದ್ದರು.

ಮೈಸೂರಿನ ಜ್ಯೋತಿನಗರದ ಪೊಲೀಸ್ ತರಬೇತಿ ಶಾಲೆ (ಪಿಟಿಎಸ್) ಆವರಣದಲ್ಲಿ 16 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಆಡಳಿತ ವಿಭಾಗದ ಕಟ್ಟಡವನ್ನು ಸಹ ಆರಗ ಜ್ಞಾನೇಂದ್ರ ಗುರುವಾರ ಬೆಳಗ್ಗೆ 11.30 ಗಂಟೆಗೆ ಉದ್ಘಾಟಿಸುವರು ಎಂದು ಶಾಲೆಯ ಪ್ರಾಂಶುಪಾಲ ಹೆಚ್.ಟಿ. ಶೇಖರ್ ತಿಳಿಸಿದ್ದಾರೆ. ನಂತರ, ಮಧ್ಯಾಹ್ನ 12.30 ಗಂಟೆಗೆ ಕರ್ನಾಟಕ ಪೊಲೀಸ್ ಅಕಾಡೆಮಿ (ಕೆಪಿಎ) ಆವರಣದಲ್ಲಿ 4.51 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಡಿವೈಎಸ್ಪಿ ರ್‍ಯಾಂಕ್ ಅಧಿ ಕಾರಿಗಳ ಹಾಸ್ಟೆಲ್ ಬ್ಲಾಕ್ ಕಟ್ಟಡವನ್ನೂ ಸಚಿವರು ಉದ್ಘಾಟಿಸುವರು. ಬಳಿಕ ಆರಗ ಜ್ಞಾನೇಂದ್ರ ಮಧ್ಯಾಹ್ನ 2 ಗಂಟೆಗೆ ಶತಾಬ್ದಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಬೆಂಗಳೂರಿಗೆ ಹಿಂತಿರುಗುವರು. ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಲ್.ನಾಗೇಂದ್ರ, ತನ್ವೀರ್ ಸೇಠ್, ಎಸ್.ಎ.ರಾಮದಾಸ್, ಜಿ.ಟಿ. ದೇವೇಗೌಡ, ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಪ್ರವೀಣ್ ಸೂದ್, ದಕ್ಷಿಣ ವಲಯ ಐಜಿಪಿ ಪ್ರವೀಣ್ ಮಧುಕರ್ ಪವಾರ್, ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೇರಿದಂತೆ ಹಲವು ಪೊಲೀಸ್ ಅಧಿಕಾರಿಗಳು ನೂತನ ಕಟ್ಟಡಗಳ ಉದ್ಘಾಟನೆ ವೇಳೆ ಉಪಸ್ಥಿತರಿರುವರು.

2 ದಿನ ಜಿಟಿಡಿ ವಿಶ್ರಾಂತಿ



ಅನಾರೋಗ್ಯ ನಿಮಿತ್ತ ಶಾಸಕ ಜಿ.ಟಿ. ದೇವೇಗೌಡರು ವೈದ್ಯರ ಸಲಹೆ ಮೇರೆಗೆ ಎರಡು ದಿನಗಳ ಕಾಲ ವಿಶ್ರಾಂತಿ ಮೊರೆ ಹೋಗಿದ್ದಾರೆ. ನ.10 (ಗುರುವಾರ) ಹಾಗೂ 11 (ಶುಕ್ರವಾರ) ಬೆಂಗಳೂರಲ್ಲೇ ವಿಶ್ರಾಂತಿ ಪಡೆಯಲಿದ್ದಾರೆ. ಹೆಬ್ಬಾಳು, ಆಲನಹಳ್ಳಿ ಪೊಲೀಸ್ ಠಾಣೆ ಕಟ್ಟಡ ಉದ್ಘಾಟನಾ ಸಮಾರಂಭವೂ ಸೇರಿದಂತೆ ವಿವಿಧ ಕಾರ್ಯಕ್ರಮಗಳಲ್ಲಿ ಅವರು ಪಾಲ್ಗೊಳ್ಳಬೇಕಿತ್ತು.





ಅಶ್ವಿನಿ ಎಂಟರ್‌ಪ್ರೈಸಸ್ ಮಾಲೀಕ ಆದ ದಸರಾ ವಸ್ತುಪ್ರದರ್ಶನ ಗುತ್ತಿಗೆದಾರ ಜಿ.ಮಂಜುಗೌಡರ 50ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಮಳಿಗೆದಾರರ ವತಿಯಿಂದ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುವ ಪೌರಕಾರ್ಮಿಕರು, ತೋಟಗಾರಿಕೆ ಸಿಬ್ಬಂದಿ, ಭದ್ರತಾ ಸಿಬ್ಬಂದಿಗಳಿಗೆ ಸೀರೆ, ಬಟ್ಟೆ ಮತ್ತು ಸಿಹಿ ವಿತರಿಸಲಾಯಿತು. ಇದೇ ವೇಳೆ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ ಅಭಿನಂದಿಸಿದರು. ಸಜೀದ್ ಹುಸೇನ್ ಬೃಹತ್ ಗಾತ್ರದ ಸೇಬಿನ ಹಾರವನ್ನು ಕ್ರೇನ್ ಮೂಲಕ ಮಂಜುಗೌಡರಿಗೆ ಹಾಕಿ ಸನ್ಮಾನಿಸಿ, ಬೃಹತ್ ಕೇಕ್ ಕತ್ತರಿಸಿ ಅಭಿನಂದಿಸಿದರು. ಈ ವೇಳೆ ಮಲ್ಲಿಕಾರ್ಜುನ್, ಅಜಾಮ್, ಸಾಗರ್ ಹಾಜರಿದ್ದರು. ಬಲಚಿತ್ರದಲ್ಲಿ ಭಾಗ್ಯ ಸಾಗರ್ ಎಜುಕೇಶನಲ್ ಟ್ರಸ್ಟ್ ವತಿಯಿಂದ ಸಿಹಿ ವಿತರಿಸಲಾಯಿತು. ಈ ವೇಳೆ ಪೈಲ್ವಾನ್ ಚಂದ್ರಶೇಖರ್, ಪ್ರವೀಣ್, ಶಂಕರ್, ಸಂಪತ್, ಯಶು, ಸಜೀದ್ ಹುಸೇನ್, ಸಾಗರ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.11.2022 ಗುರುವಾರ, ಮಳೆ ನಕ್ಷತ್ರ: ವಿಶಾಖ, 08.11.2022 ರಿಂದ 19.11.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಿತೀಯ, ನಕ್ಷತ್ರ : ರೋಹಿಣಿ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಪಾರ್ಶ್ವವಾಯು ಪೀಡಿತರಿಗೆ ಚಿಕಿತ್ಸೆ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಲಲಿತ ಮಹಲ್ ಹೆಲಿಪ್ಯಾಡ್ ಬಳಿ, ಆಲನಹಳ್ಳಿ, ಬೆಳಗ್ಗೆಯಿಂದ.

■ **ರೋಟರಿ ಕ್ಲಬ್ ಮೈಸೂರು ಪಶ್ಚಿಮ** : ರಿಫ್ಲೆಕ್ಸೊಲೊಜಿ, ಸುಜೋಕ್ ಮ್ಯಾಗ್ನೆಟ್ ಮತ್ತು ವೈಬ್ರೇಶನ್ ತೆರಪಿ ಚಿಕಿತ್ಸಾ ಶಿಬಿರ, ಸ್ಥಳ: ರೋಟರಿ ವೆಸ್ಟ್ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 9 ರಿಂದ.

■ **ಶ್ರೀ ನಟರಾಜ ಪ್ರತಿಷ್ಠಾನ, ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳು** : ಕನ್ನಡ ರಾಜ್ಯೋತ್ಸವ ಆಚರಣೆ, ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಹಿರಿಯ ಸಾಹಿತಿ ಪ್ರೊ. ಸಿ.ಪಿ. ಕೃಷ್ಣಕುಮಾರ್, ಮೆರವಣಿಗೆ ಉದ್ಘಾಟನೆ : ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಚೇತನ್, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 11ಕ್ಕೆ.

■ **ವ್ಯವಸ್ಥಾಪಕರು** : ಪ್ರೊ. ಎಂ.ಎಸ್. ಶೇಖರ್ ಅವರ ಸೋಸಲೆ ಸಿದ್ದಪ್ಪ ಸಮಗ್ರ ಸಾಹಿತ್ಯ ಸಂಪುಟ (ಸಂಪಾದಿತ) ಮತ್ತು ಹೊರಳು ಹಾದಿ (ವಿಮರ್ಶೆ) ಕೃತಿಗಳ ಬಿಡುಗಡೆ ಹಾಗೂ ವಿಚಾರಗೋಷ್ಠಿ ಸಮಾರಂಭ, ಕೃತಿಗಳ ಬಿಡುಗಡೆ : ಸಂಸದ ವಿ. ಶ್ರೀನಿವಾಸ ಪ್ರಸಾದ್, ಮುಖ್ಯ ಅತಿಥಿಗಳು : ಶಾಸಕ ಎನ್. ಮಹೇಶ್, ಅಧ್ಯಕ್ಷತೆ : ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಜಿ. ಹೇಮಂತಕುಮಾರ್, ವಿಶೇಷ ಆಹ್ವಾನಿತರು : ರಂಗ ನಿರ್ದೇಶಕ ಎಚ್. ಜನಾರ್ದನ್ (ಜನ್ನಿ), ಹಿರಿಯ ಮುಖಂಡ ಬಸವೇಗೌಡ, ಉಪಸ್ಥಿತರು : ಡಾ. ನಂದೀಶ್ ಹಂಚೆ, ಡಾ. ಜಿ.ವಿ. ಆನಂದಮೂರ್ತಿ, ಶ್ರೀಮತಿ ಸಿದ್ದಮ್ಮ, ಕೃತಿಗಳ ಲೇಖಕ ಪ್ರೊ. ಎಂ.ಎಸ್. ಶೇಖರ್, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಸುರಭಿ ಗಾನಕಲಾ ಮಂದಿರ ಚಾರಿಟಬಲ್ ಟ್ರಸ್ಟ್** : ವಿದುಷಿ ಡಾ. ಸುಕನ್ಯಾ ಪ್ರಭಾಕರ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಶಿಬಿರ, ಸ್ಥಳ: 510, 13ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಸಂಜೆ 4.30 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ** : ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಕನ್ನಡ ಸಾಹಿತ್ಯ ಕಲಾಕೂಟ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ** : ಶ್ರೀ ಕನಕದಾಸರ ಜಯಂತಿ ಹಾಗೂ ಕನಕಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ, ಕನಕಶ್ರೀ ಪ್ರಶಸ್ತಿ ಪ್ರದಾನ : ವಿಧಾನಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಆಕಾಶವಾಣಿ ಹಿರಿಯ ಉದ್ಘೋಷಕರಾದ ಡಾ. ಮೈಸೂರು ಉಮೇಶ್ ಅವರಿಂದ ಕನಕದಾಸರ ಸಾಮಾಜಿಕ ಸುಧಾರಣೆ ಕುರಿತು ಉಪನ್ಯಾಸ, ಅಧ್ಯಕ್ಷತೆ : ಸಂಸ್ಕೃತಿ ಪೋಷಕ ಡಾ. ಕೆ. ರಘುರಾಂ ವಾಜಪೇಯಿ, ಮುಖ್ಯ ಉಪಸ್ಥಿತರು : ಎ.ಪಿ. ನಾಗೇಶ್, ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್. ಶಿವರಾಮು, ಕನ್ನಡ ಸಾಹಿತ್ಯ ಕಲಾಕೂಟದಧ್ಯಕ್ಷ ಎಂ. ಚಂದ್ರಶೇಖರ್, ಸ್ಥಳ: ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಮಧ್ಯಾಹ್ನ12.15ಕ್ಕೆ.

■ **ಜೆಎಸ್‌ಎಸ್ ಆಸ್ಪತ್ರೆ** : ಜೆಎಸ್‌ಎಸ್ ಆಸ್ಪತ್ರೆಯಲ್ಲಿ ರೊಬೊಟಿಕ್ಸ್ ಫಿಸಿಯೋಥೆರಪಿ ಸೇವೆಗೆ ಚಾಲನೆ, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ಮುಖ್ಯ ಆವರಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಟ್ರೇಡರ್ಸ್ ಸುರಕ್ಷಾ ಕ್ಷೇಮಾಭಿವೃದ್ಧಿ ಸಂಘ** : ಆನ್‌ಲೈನ್ ಉದ್ದಿಮೆ ರಹದಾರಿ ನವೀಕರಣ ಕಾರ್ಯಾಗಾರ, ಉದ್ಘಾಟನೆ : ಮೇಯರ್ ಶಿವಕುಮಾರ್, ಉಪಸ್ಥಿತರು : ಆರೋಗ್ಯ ಅಧಿಕಾರಿ ಡಾ. ಡಿ.ಜಿ. ನಾಗರಾಜ್, ಸಂಘದ ಅಧ್ಯಕ್ಷ ಪಿ. ಪ್ರಶಾಂತ್‌ಗೌಡ, ಸ್ಥಳ: ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಆವರಣ, ಶಿವರಾಂಪೇಟೆ, ಬೆಳಗ್ಗೆ 10 ರಿಂದ.

■ **ಟಿಪ್ಪು ಕನ್ನಡ ರಾಜ್ಯೋತ್ಸವ ವೇದಿಕೆ** : ಕನ್ನಡ ರಾಜ್ಯೋತ್ಸವ ಆಚರಣೆ, ಮುಖ್ಯ ಅತಿಥಿಗಳು : ವಿಧಾನ ಪರಿಷತ್ ಸದಸ್ಯ ಅಡಗೂರು ವಿಶ್ವನಾಥ್, ಪ್ರೊ. ನಂಜರಾಜ ಅರಸ್, ಪ್ರೊ. ಮಹೇಶ್ ಚಂದ್ರಗುರು, ಶಾಂತರಾಜು, ಡಾ. ಲಕ್ಷ್ಮೀನಾರಾಯಣ, ಶ್ರೀ ಬಸವಲಿಂಗ ಸ್ವಾಮೀಜಿ, ಅಧ್ಯಕ್ಷತೆ : ಶಾಸಕ ತನ್ವೀರ್ ಸೇಠ್, ಸ್ಥಳ: ಅಲ್‌ಬದರ್ ಸರ್ಕಲ್ ಪಕ್ಕದ ಮೈದಾನ, ರಾಜೀವ್‌ನಗರ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು** : ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕರಿಗೆ ಯಶಸ್ವಿನಿ ಸಹಕಾರಿ ಆರೋಗ್ಯ ರಕ್ಷಣಾ ಯೋಜನೆ ಕುರಿತು ವಿಷಯಾಧಾರಿತ ತರಬೇತಿ ಕಾರ್ಯಕ್ರಮ, ಉದ್ಘಾಟನೆ: ಸಹಕಾರ ಸಂಘಗಳ ಉಪನಿಬಂಧಕರು ಜಿ.ಆರ್. ವಿಜಯಕುಮಾರ್, ಅಧ್ಯಕ್ಷತೆ : ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಮುಖ್ಯ ಅತಿಥಿಗಳು : ಕೆ.ಎಸ್. ಹರೀಶ್‌ಕುಮಾರ್, ಎಸ್.ಆರ್. ನಾರಾಯಣರಾವ್, ಚರಣ್, ಸ್ಥಳ: ಜಿಲ್ಲಾ ಸಹಕಾರ ಒಕ್ಕೂಟದ ಸಭಾಂಗಣ, ಚಾಮರಾಜ ಜೋಡಿ ರಸ್ತೆ, ಬೆಳಗ್ಗೆ 10ಕ್ಕೆ.

■ **ರೋಟರ್‍ಯಾಕ್ಟ್ ಕ್ಲಬ್ ಆಫ್ ಜೆಎಸ್‌ಎಸ್ ಲಾ ಕಾಲೇಜು** : ಪದಗ್ರಹಣ ಸಮಾರಂಭ, ಮುಖ್ಯ ಅತಿಥಿಗಳು : ಡಾ. ಎಸ್.ಹೆಚ್. ಜಗದೀಶ್, ಗೌರವ ಅತಿಥಿಗಳು : ಪ್ರೊ. ಕೆ.ಎಸ್. ಸುರೇಶ್, ಡಾ. ಎಸ್. ನಟರಾಜು, ರೋಟರಿ ಮೈಸೂರು ನಾರ್ತ್ ಕೆ. ಲೋಕನಾಥ್, ಕೆ. ರವಿ, ಆರ್.ಕೆ. ನಿಖಿಲ್, ಕೆ.ಸಿ. ಬಬೀನಾ, ಸ್ಥಳ: ಸಿಲ್ವರ್ ಜ್ಯೂಬಿಲಿ ಹಾಲ್, ಜೆಎಸ್‌ಎಸ್ ಕಾನೂನು ಕಾಲೇಜು, ಸಂಜೆ 4.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮೈಸೂರು ವಿವಿ ಅರ್ಥಶಾಸ್ತ್ರ ಪ್ರಾಧ್ಯಾಪಕರ ಸಂಘ, ಡಿ. ಬನುಮಯ್ಯ ವಾಣಿಜ್ಯ ಮತ್ತು ಕಲಾ ಕಾಲೇಜು** : ನ್ಯಾಷನಲ್ ಎಜುಕೇಷನ್ ಪಾಲಿಸಿ ಕುರಿತು ರಾಜ್ಯ ಮಟ್ಟದ ಕಾರ್ಯಾಗಾರ, ಉದ್ಘಾಟನೆ : ಐಎಸ್‌ಇಸಿ ವಿಶ್ರಾಂತ ನಿರ್ದೇಶಕ ಪ್ರೊ. ಮಾದೇಶ್ವರನ್, ಮುಖ್ಯ ಅತಿಥಿಗಳು : ಪ್ರೊ. ಎಂ. ಮಹೇಶ, ಪ್ರೊ. ಡಿ.ವಿ. ಗೋಪಾಲಪ್ಪ, ಡಾ. ಎಂ.ಎಸ್. ಗಿರಿಧರ್, ಅಧ್ಯಕ್ಷತೆ : ಡಿ. ಬನುಮಯ್ಯ ವಿದ್ಯಾಸಂಸ್ಥೆ ಅಧ್ಯಕ್ಷ ಡಾ. ವಿ.ಬಿ. ಜಯದೇವ, ಸ್ಥಳ: ಕಲಾ ಭವನ, ಡಿ. ಬನುಮಯ್ಯ ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ಯುವ ಭಾರತ್ ಸಂಘಟನೆ** : ಕನಕದಾಸರ ಜಯಂತಿ ಹಾಗೂ ಒನಕೆ ಓಬವ್ವ ಜಯಂತಿ ಆಚರಣೆ, ಮುಖ್ಯ ಅತಿಥಿಗಳು : ಇಳೈ ಆಳ್ವಾರ್ ಸ್ವಾಮೀಜಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಡಾ. ಎಸ್.ಪಿ. ಯೋಗಣ್ಣ, ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ನಟರಾಜ್ ಜೋಯಿಸ್, ಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ಸ್ಥಳ: ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ, ಬೆಳಗ್ಗೆ 11.30ಕ್ಕೆ.

■ **ಮಹಾರಾಜ ಸರ್ಕಾರಿ ಪದವಿಪೂರ್ವ ಕಾಲೇಜು** : ವಾರ್ಷಿಕ ವಿಶೇಷ ಶಿಬಿರ, ಉದ್ಘಾಟನೆ : ಶಾಸಕ ಎಲ್. ನಾಗೇಂದ್ರ, ಅಧ್ಯಕ್ಷತೆ : ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ನಾಗಮಲ್ಲೇಶ್, ಸ್ಥಳ: ಶ್ರೀ ಗಣೇಶಪುರಿ ನಿತ್ಯಾನಂದ ಆಶ್ರಮ, ಚಾಮುಂಡಿಬೆಟ್ಟದ ಪಾದ, ಮಧ್ಯಾಹ್ನ 3ಕ್ಕೆ.

ಶ್ರೀ ಸುತ್ತೂರು ಕ್ಷೇತ್ರ

■ **ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ** : ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ವತಿಯಿಂದ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಶ್ರೀ ಸುತ್ತೂರು ಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಕವಿನುಡಿ ಸವಿನುಡಿ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40ಅರಿವಿನ ಶಿಖರ, ಗಾಯನ– ಮತ್ತೂರು ಕುಮಾರಸ್ವಾಮಿ, ಸಿ. ವಿಶ್ವನಾಥ್, ವ್ಯಾಖ್ಯಾನ– ಡಾ. ಬಿ.ವಿ. ವಸಂತ ಕುಮಾರ್, 9.00 ಕನ್ನಡ ಕಜ್ಜಾಯ, 10.00 ಕೆ.ಎಂ. ಸುರೇಂದ್ರ–ನಾದಸ್ವರ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ.

ಮಧ್ಯಾಹ್ನ: 12.30 ದೇವರನಾಮ–ಅಜಯ್ ವಾರಿಯರ್, ಡಾ. ಆರ್.ಎನ್. ಶ್ರೀಲತಾ, 1.20 ಭಾವಗೀತೆಗಳು–ವೃಂದಗಾನ, 4.00 ಜನಪದ ಸಂಗೀತ–ತಂಬೂರಿ ಜವರಯ್ಯ ಮತ್ತು ಸಂಗಡಿಗರು, 4.30 ರಸಮಂಜರಿ, ಕನ್ನಡವನ್ನು ಪೋಷಿಸಿದ ಸಂಸ್ಕೃತ–ಮಾತನಾಡುತ್ತಾರೆ ಡಾ.ಎಂ.ಎ. ಆಳ್ವಾರ್, "ತರ್ಕದ ಭಾವವೇನು", ಮಾತನಾಡುತ್ತಾರೆ ವಿದ್ವಾನ್ ಶ್ರೀನಿಧಿ ಪ್ಯಾಟಿ, 6.50 ಕೃಷಿರಂಗ–ಕಿಸಾನ್‌ವಾಣಿ – ಸಮಗ್ರ ಕೃಷಿಯಲ್ಲಿನ ಅನುಭವ ಕುರಿತು ಕೆ.ಜಿ. ಸತ್ಯಮೂರ್ತಿ ಅವರೊಡನೆ ಸಂದರ್ಶನ, 9.00 ಯುವವಾಣಿ–ಚಿತ್ರ ಚಿತ್ತಾರ–ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಪ್ರಸ್ತುತಿ– ರಾಧಿಕಾ ಎನ್., 10.00 ನಾಟಕ, 10.30 ಸವಿನೆನಪು



ಭಾರತೀಯ ಹಬ್ಬಗಳ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮ

ನವೆಂಬರ್ 10

■ **ಇನ್ಫೋಸಿಸ್ ಪ್ರತಿಷ್ಠಾನ, ಬೆಂಗಳೂರು, ಭಾರತೀಯ ವಿದ್ಯಾ ಭವನ, ಬೆಂಗಳೂರು–ಮೈಸೂರು** : 'ಮೈಸೂರು ಸಹೋದರರು' ಎಂದೇ ಖ್ಯಾತನಾಮರಾದ ವಿದ್ವಾನ್ ಮೈಸೂರು ನಾಗರಾಜು ಮತ್ತು ವಿದ್ವಾನ್ ಡಾ.ಮೈಸೂರು ಮಂಜುನಾಥ್ ಅವರಿಂದ 'ಅಮೋಘ ಯುಗಳ ಪಿಟೀಲು ವಾದನ'. ಮೃದಂಗ: ತುಮಕೂರು ಬಿ.ರವಿಶಂಕರ್, ಘಟಂ: ಗಿರಿಧರ್ ಉಡುಪ, ತಬಲಾ: ರೂಪಕ್ ಕಲ್ಲೂರ್ಕರ್, ಸ್ಥಳ : ಕಲಾಮಂದಿರ, ವಿನೋಬಾ ರಸ್ತೆ, ಸಂಜೆ 6ಕ್ಕೆ.

ಕಲಾಶಿಬಿರ... ಭಾರತೀಯ ಹಬ್ಬಗಳು ಸಾಂಸ್ಕೃತಿಕ ಉತ್ಸವದ ಪ್ರಯುಕ್ತ ಕಲಾ ಶಿಬಿರ, ನಿರ್ದೇಶಕರು : ಶ್ರೀಮತಿ ಇನ್ನಾ ಉಮ್ಮೆಹಾನಿ, ಸ್ಥಳ: ರಂಗಾಯಣ ಆವರಣ (ಬಯಲು ರಂಗಮಂದಿರ), ಬೆಳಗ್ಗೆ 10.30 ರಿಂದ.

ಪುಸ್ತಕ ಮೇಳ: ಕಲಾಮಂದಿರ ಆವರಣದಲ್ಲಿ ರಿಯಾಯಿತಿ ದರದಲ್ಲಿ ಬಿವಿಬಿ ಪ್ರಕಾಶನದ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ ಮೇಳ.

‘ಭಾರತೀಯ ಹಬ್ಬಗಳು’ ಸಾಂಸ್ಕೃತಿಕ ಉತ್ಸವದಲ್ಲಿ ಜಾನಪದ ಲೋಕ ಅನಾವರಣ





ಮೈಸೂರು,ನ.9(ಎಂಕೆ)–‘ಭಾರ ತೀಯ ಹಬ್ಬಗಳ’ ಸಾಂಸ್ಕೃತಿಕ ಉತ್ಸವದಲ್ಲಿ ಜಾನಪದ ರಂಗು... ಕಂಸಾಳೆ, ನಗಾರಿ ನಾದ–ನೃತ್ಯಕ್ಕೆ ಕುಣಿದು ಕುಪ್ಪಳಿಸಿದ ಕಲಾಭಿಮಾನಿಗಳು...

ಮೈಸೂರಿನ ಕಲಾಮಂದಿರದಲ್ಲಿ ಇನ್ಫೋಸಿಸ್ ಪ್ರತಿಷ್ಠಾನ ಬೆಂಗಳೂರು ಹಾಗೂ ಭಾರತೀಯ ವಿದ್ಯಾಭವನ (ಬಿವಿಬಿ) ಬೆಂಗಳೂರು–ಮೈಸೂರು ಕೇಂದ್ರಗಳ ಸಂಯುಕ್ತಾಶ್ರಯದಲ್ಲಿ ‘ಭಾರತೀಯ ಹಬ್ಬಗಳು’ ಶೀರ್ಷಿಕೆಯಡಿ ಆಯೋಜಿಸಿರುವ ‘ಏಳು ದಿನಗಳ ಸಾಂಸ್ಕೃತಿಕ ಉತ್ಸವ’ದ ಆರನೇ ದಿನ ಜಾನಪದ ಲೋಕವೇ ಸೃಷ್ಟಿಯಾಗಿತ್ತು.

ಪಂಡಿತ್ ಪ್ರವೀಣ್ ಡಿ.ರಾವ್ ನಿರ್ದೇಶನದಲ್ಲಿ ಪ್ರಸ್ತುತಪಡಿಸಿದ ಜಾನಪದ ಮೇಳದಲ್ಲಿ ಕರ್ನಾಟಕದ ಹೆಸರಾಂತ ಜಾನಪದ ಕಲಾವಿದರು ತಮ್ಮ ಸುಮಧುರ ಕಂಠಸಿರಿಯಿಂದ ಗಾನದ ಇಂಪು ಹರಿಸಿದರೆ, ಜಾನಪದ ಕಲಾವಿದರ ಅಮೋಘ ನೃತ್ಯ ಪ್ರದರ್ಶನ ‘ಸಾಂಸ್ಕೃತಿಕ ಉತ್ಸವ’ದ ರಂಗು ಹೆಚ್ಚಿಸಿತು.

ಖ್ಯಾತ ಜಾನಪದ ಗಾಯಕರಾದ ಸಿ.ಎಂ.ನರಸಿಂಹಮೂರ್ತಿ, ಸವಿತಕ್ಕಾ, ಶುಭಾ ರಾಘವೇಂದ್ರ, ಭರತ್ ನಾಯಕ್ ಇನ್ನಿತರರು ಜಾನಪದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡಿ ಗಮನ ಸೆಳೆದರೆ, ಮೈಸೂರು ಹಾಗೂ ಚಾಮರಾಜನಗರದ ನೃತ್ಯ ಕಲಾವಿದರ ತಂಡ ಕಂಸಾಳೆ, ಕೋಲಾಟ, ನಗಾರಿ ಹಾಗೂ ನೃತ್ಯ ಪ್ರದರ್ಶನದ ಮೂಲಕ ಭಾರೀ ಪ್ರಶಂಸೆ ಪಡೆದರು. ‘ಶರಣು ಶರಣುವಯ್ಯ ಗಣನಾಯಕ’ ಹಾಡಿನೊಂದಿಗೆ ಜಾನಪದ ಮೇಳಕ್ಕೆ ಚಾಲನೆ ನೀಡಿದ ಗಾಯಕ ಸಿ.ಎಂ.ನರಸಿಂಹಮೂರ್ತಿ, ‘ತಂದನ್ನ ತಾನಾನೆ’, ‘ಸಿದ್ದಯ್ಯ ಸ್ವಾಮಿ ಬನ್ನಿ’, ‘ಹಾಲರವಿ ಬಂದೋ’ ಹಾಡುಗಳನ್ನು ಹಾಡಿದರೆ, ಗಾಯಕಿ ಸವಿತಕ್ಕಾ ‘ಸಂಕ್ರಾಂತಿ ಹಬ್ಬ ಬಂತೂ’, ‘ಬಂತು ಬಂತು ಸುಗ್ಗಿ’, ‘ಬೆಳ್ಳನೇ ಎರಡೆತ್ತು’, ‘ಒಲಿದು ಚಾಮುಂಡಿ’ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡಿ ಮನಸೆಳೆದರು.

ಗಾಯಕಿ ಶುಭಾ ರಾಘವೇಂದ್ರ ‘ಬನ್ನಿ ಮಡಿಯೋಣು ಬಾರ ಕೋಲು ಕೋಲೆ’, ‘ಎಲ್ಲೊ ಕಾಣೆ’ ಹಾಗೂ ‘ಮುಂಗೊಂಡಾದ ಮಾದೇಶ್ವರಗೆ’ ಹಾಡನ್ನು ಹಾಡಿ ರಂಜಿಸಿದರು. ಜಾನಪದ ಹಾಡುಗಳ ಜೊತೆ ಜೊತೆಗೆ ಕಂಸಾಳೆ, ಕಂಗಿಲು ನೃತ್ಯ ಹಾಗೂ ಜಾನಪದ ನೃತ್ಯಗಳ ಪ್ರದರ್ಶನ ಮತ್ತು ನಗಾರಿ ಸದ್ದು ನೆರೆದವರನ್ನು ಚಕಿತರನ್ನಾಗಿಸಿತು. ಕಡೆಯಲ್ಲಿ ಎಲ್ಲಾ ಜಾನಪದ ಕಲಾವಿದರು ‘ಜಕ್ಕಣಕ್ಕ’ ಹಾಡನ್ನು ಹಾಡುವ ಮೂಲಕ ಜಾನಪದ ಮೇಳಕ್ಕೆ ವೈಭವದ ಮೆರಗಿನೊಂದಿಗೆ ತೆರೆ ಎಳೆದರು.

ಮಿನಿ ದಸರಾ ಉತ್ಸವ: ಮೈಸೂರು ವಿಭಾಗದ ಹೆಚ್ಚುವರಿ ಪ್ರಾದೇಶಿಕ ಆಯುಕ್ತ ಪಿ.ಶಿವರಾಜ್ ಮಾತನಾಡಿ, ಸಾಂಸ್ಕೃತಿಕ ಉತ್ಸವದಲ್ಲಿ ಪ್ರದರ್ಶನಗೊಂಡ ಜಾನಪದ ಮೇಳ ಮಿನಿ ದಸರಾ ಸಾಂಸ್ಕೃತಿಕ ಕಾರ್ಯಕ್ರಮವನ್ನೇ ಸೃಷ್ಟಿಸಿತು. ಕಡಿಮೆ ಅವಧಿಯಲ್ಲಿ ಇಷ್ಟೊಂದು ಅಚ್ಚುಕಟ್ಟಾಗಿ ಜಾನಪದ ಹಾಡು–ನೃತ್ಯ ಕಾರ್ಯಕ್ರಮ ನೀಡಿರುವುದು ಶ್ಲಾಘನೀಯ ಎಂದರು.

ಸುಮಧುರ ಹಾಡು, ಮನೋಜ್ಞ ನೃತ್ಯಕ್ಕೆ ನೆರೆದವರು ದಿಲ್‌ಖುಷ್

ಕಲೆ ಎಲ್ಲರನ್ನು ಕೈ ಬೀಸಿ ಕರೆಯುತ್ತದೆ. ಆದರೆ ಅಪ್ಪಿಕೊಳ್ಳುವುದು ಕೆಲವರನ್ನು ಮಾತ್ರ. ನಾನು ಮೊದಲ ಬಾರಿಗೆ ಈ ಸಮಾರಂಭದಲ್ಲಿ ಭಾಗವಹಿಸಿದ್ದೇನೆ. ಈ ರೀತಿ ಕಾರ್ಯಕ್ರಮಗಳು ನಡೆದರೆ ಮತ್ತೆ ಮತ್ತೆ ಭಾಗವಹಿಸಬೇಕು ಎನಿಸುತ್ತದೆ ಎಂದು ಹರ್ಷ ವ್ಯಕ್ತಪಡಿಸಿದರಲ್ಲದೆ ಎಲ್ಲಾ ಜಾನಪದ ಕಲಾವಿದರಿಗೆ ಧನ್ಯವಾದ ತಿಳಿಸಿದರು. ‘ಮೈಸೂರು ಮಿತ್ರ’ ಹಾಗೂ ‘ಸ್ಟಾರ್ ಆಫ್ ಮೈಸೂರ್’ ಸಂಸ್ಥಾಪಕ ಸಂಪಾದಕರೂ ಆದ ಬಿವಿಬಿ ಮೈಸೂರು ಕೇಂದ್ರದ ಅಧ್ಯಕ್ಷ ಕೆ.ಬಿ.ಗಣಪತಿ, ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ, ಖಜಾಂಚಿ ಎ.ಟಿ.ಭಾಷ್ಯಂ, ಉಪಾಧ್ಯಕ್ಷ ಪ್ರೊ.ಸಿ.ನಾಗಣ್ಣ, ವಿದುಷಿ ನಾಗಲಕ್ಷ್ಮಿರಾವ್ ಮತ್ತಿತರರಿದ್ದರು.

ವಿವಿಧ ಬೇಡಿಕೆ ಈಡೇರಿಸಲು ಒತ್ತಾಯಿಸಿ ರೈತ ಸಂಘ ಪ್ರತಿಭಟನೆ



ಮೈಸೂರು,ನ.9(ಪಿಎಂ)– ಕಬ್ಬು ಮತ್ತು ಭತ್ತಕ್ಕೆ ವೈಜ್ಞಾನಿಕ ಬೆಲೆ ನಿಗದಿಗೊಳಿಸಬೇಕು, ಹಾಲಿನ ದರ ಹೆಚ್ಚಿಸಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು. ಡಿಸಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಪ್ರತಿ ಟನ್ ಕಬ್ಬಿಗೆ 4,500 ರೂ. ದರ ನಿಗದಿ ಮಾಡಬೇಕು. ರಾಜ್ಯ ಸರ್ಕಾರ ಎಸ್‌ಎಪಿ ಮೂಲಕ ಪ್ರತಿ ಟನ್ ಕಬ್ಬಿಗೆ 500 ರೂ. ನೀಡಬೇಕು. ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚದಲ್ಲಿ ರಿಯಾಯಿತಿ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿ ಲೀಟರ್ ಹಾಲಿಗೆ 40 ರೂ.ಗಳನ್ನು ನಿಗದಿ ಮಾಡಬೇಕು. ಭಾಗ್ಯಜ್ಯೋತಿ, ಕುಟೀರ ಜ್ಯೋತಿಯ ವಿದ್ಯುತ್ ಬಾಕಿ ಮನ್ನಾ ಮಾಡಬೇಕು. ಭತ್ತ ಕಟಾವು ಮಾಡುವ ಮುನ್ನವೇ ಭತ್ತ ಖರೀದಿ ಕೇಂದ್ರವನ್ನು ತೆರೆಯಬೇಕು ಎಂದು ಆಗ್ರಹಿಸಿದರು. ಸಂಘದ ಮುಖಂಡರಾದ ಪ್ರಸನ್ನ ಎನ್.ಗೌಡ, ಹೊಸೂರು ಕುಮಾರ್, ಹೊಸಕೋಟೆ ಬಸವರಾಜ್, ಪಿ.ಮರಂಕಯ್ಯ, ಆನಂದೂರು ಪ್ರಭಾಕರ್, ಮಂಡಕಳ್ಳಿ ಮಹೇಶ್, ರಾಮೇಗೌಡ, ಶಿವಲಿಂಗಪ್ಪ, ಅತ್ತಹಳ್ಳಿ ಶಿವನಂಜು, ರಾಘವೇಂದ್ರ, ಪರಮೇಶ್, ಹೆಜ್ಜಿಗೆ ಪ್ರಕಾಶ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಶಾಸಕ ಸತೀಶ್ ಜಾರಕಿಹೊಳಿ ವಿರುದ್ಧ ಬಿಜೆಪಿ ಪ್ರತಿಭಟನೆ

ಓಟಿಗಾಗಿ ಮತ್ತೊಂದು ಧರ್ಮೀಯರ ಓಲೈಸಲು ನೀಚ ಹೇಳಿಕೆ ; ಶಾಸಕ ಎಲ್.ನಾಗೇಂದ್ರ ಖಂಡನೆ

ಮೈಸೂರು, ನ.9(ಪಿಎಂ)–ಶಾಸಕ ಸತೀಶ್ ಜಾರಕಿಹೊಳಿ ಹಿಂದೂ ವಿರೋಧಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ಬಿಜೆಪಿ ನಗರ ಮತ್ತು ಜಿಲ್ಲಾ ಘಟಕದ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಕೋರ್ಟ್ ಎದುರಿನ ಗಾಂಧಿ ಪುತ್ಥಳಿ ಬಳಿ ಜಮಾಯಿಸಿದ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಸತೀಶ್ ಜಾರಕಿಹೊಳಿ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಶಾಸಕ ಎಲ್.ನಾಗೇಂದ್ರ, ಸತೀಶ್ ಜಾರಕಿಹೊಳಿ ಬೇಜವಾಬ್ದಾರಿ ಹೇಳಿಕೆ ನೀಡಿದ್ದಾರೆ. ಅವರು ತಮ್ಮ ಹೇಳಿಕೆ ಮೂಲಕ ಇಡೀ ಹಿಂದೂ ಸಮುದಾಯ ಕೆಣಕಿದ್ದಾರೆ. ಮತ್ತೊಂದು ಧರ್ಮೀಯರನ್ನು ಓಟಿಗಾಗಿ ಓಲೈಸಿಕೊಳ್ಳಲು ಈ ರೀತಿಯಲ್ಲಿ ಮಾತನಾಡಿದ್ದಾರೆ ಎಂದು ಕಿಡಿಕಾರಿದರು.

ಇವರು ಒಬ್ಬ ಚುನಾಯಿತ ಪ್ರತಿನಿಧಿಯಾಗಿ ಈ ರೀತಿ ಹಿಂದೂ ಧರ್ಮದ ವಿರುದ್ಧ ಹೇಳಿಕೆ ನೀಡಿ, ನೀಚ ಕೃತ್ಯ ಎಸಗಿದ್ದಾರೆ. ಇದನ್ನು ಇಡೀ ಹಿಂದೂ ಧರ್ಮೀಯರು ಖಂಡಿಸಲಿದ್ದು, ಜೊತೆಗೆ ಬಿಜೆಪಿ ಇಂದು ರಾಜ್ಯಾದ್ಯಂತ ಅವರ ಹೇಳಿಕೆ ವಿರುದ್ಧ ಹೋರಾಟಕ್ಕಿಳಿದಿದೆ ಎಂದರು.



ಸತೀಶ್ ಜಾರಕಿಹೊಳಿ ಅವರು ತಮ್ಮ ಶಾಲಾ ದಾಖಲಾತಿಗಳಲ್ಲಿ ತಮ್ಮ ಧರ್ಮ ಯಾವುದೆಂದು ಕೊಟ್ಟಿದ್ದಾರೆ ಎಂದು ಸ್ಪಷ್ಟಪಡಿಸಬೇಕು. ಚುನಾವಣೆಯಲ್ಲಿ ಸ್ಪರ್ಧಿಸುವಾಗ ಯಾವ ಧರ್ಮ ಎಂದು ಉಲ್ಲೇಖಿಸಿದ್ದಾರೆ ಎಂಬುದನ್ನೂ ಸಾರ್ವಜನಿಕವಾಗಿ ತಿಳಿಸಬೇಕು. ಇವರ ಹೀಗೇ ಉದ್ಧಟತನದಿಂದ ಮಾತನಾಡಿದರೆ ಮುಂದಿನ ದಿನಗಳಲ್ಲಿ ರಾಜಕೀಯ ಕ್ಷೇತ್ರದಲ್ಲಿ ಅವರಿಗೆ ಹಿಂದೂ ಧರ್ಮೀಯರು ತಕ್ಕ ಪಾಠ ಕಲಿಸಲಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇವರ ಹೇಳಿಕೆಯಿಂದ ಇಡೀ ಹಿಂದೂ ಧರ್ಮಕ್ಕೆ ಅಪಮಾನ ಆಗಿದ್ದು, ಇವರ ವಿರುದ್ಧ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕೂಡಲೇ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

> “ಅತ್ಯಂತ ಕೊಳಕು ಮಾತುಗಳನ್ನು ಆಡುವ ಮೂಲಕ ಸತೀಶ್ ಜಾರಕಿಹೊಳಿ, ಇಡೀ ಭಾರತೀಯರಿಗೆ ಅಪಮಾನ ಮಾಡಿ ರಾಷ್ಟ್ರದ್ರೋಹ ಎಸಗಿದ್ದಾರೆ. ಕಾಂಗ್ರೆಸ್‌ನವರಿಗೆ ನೈತಿಕತೆ, ಹಿಂದೂ ಧರ್ಮದ ಬಗ್ಗೆ ಗೌರವ ಇದ್ದರೆ, ಈ ದೇಶದ ಸಂಸ್ಕೃತಿ ಬಗ್ಗೆ ಗೌರವ ಇದ್ದರೆ, ಸತೀಶ್ ಜಾರಕಿಹೊಳಿ ಅವರನ್ನು ಕಾಂಗ್ರೆಸ್‌ನಿಂದ ಉಚ್ಚಾಟನೆ ಮಾಡಲಿ. ಆ ಮೂಲಕ ಕಾಂಗ್ರೆಸ್‌ನವರು ತಾವು ಹಿಂದೂಪರ ಎಂದು ಸಾಬೀತುಪಡಿಸಿದರೆ ಮಾತ್ರ ಈ ರಾಜ್ಯ ಮತ್ತು ದೇಶದ ಜನ ಕಾಂಗ್ರೆಸ್‌ನವರನ್ನು ಒಪ್ಪಲಿದ್ದಾರೆ. ಕಾಂಗ್ರೆಸ್‌ನವರು ಉಚ್ಚಾಟಿಸಿ ಸಾಚಾತನ ಸಾಬೀತುಪಡಿಸಲಿ.
> **–ರಘು ಆರ್.ಕೌಟಿಲ್ಯ, ಅಧ್ಯಕ್ಷರು, ಮೈಸೂರು ಅರಗು ಮತ್ತು ಬಣ್ಣ ಕಾರ್ಖಾನೆ**

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಹಿಂದೂ ನೆಲೆಯಾದ ಭಾರತದಲ್ಲಿ ಇರುವ ಎಲ್ಲರೂ ಹಿಂದೂಗಳೇ ಎಂಬ ಸಾಮರಸ್ಯದ ಮಾತುಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ. ಆದರೆ ಈ ಸತೀಶ್ ಜಾರಕಿಹೊಳಿ ಅವರು ಅರೆಬರೆ ತಿಳುವಳಿಕೆಯಿಂದ ಅಜ್ಞಾನ, ಅಪ್ರಬುದ್ಧದ ಹೇಳಿಕೆ ನೀಡಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕೇವಲ ಬಾಯಿ ಮಾತಿಗೆ ತಪ್ಪು ಎಂದು ಹೇಳಿದ್ದಾರೆ ಎಂದು ಕಿಡಿಕಾರಿದರು. ಮೈಸೂರು ಅರಗು ಮತ್ತು ಬಣ್ಣ ಕಾರ್ಖಾನೆ ಅಧ್ಯಕ್ಷ ರಘು ಆರ್.ಕೌಟಿಲ್ಯ, ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ರಾಜ್ಯ ಮುಖ್ಯ ವಕ್ತಾರ ಎಂ.ಜಿ.ಮಹೇಶ್, ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಪಾಲಿಕೆ ಬಿಜೆಪಿ ಸದಸ್ಯರಾದ ಬಿ.ವಿ.ಮಂಜುನಾಥ್, ಪ್ರಮೀಳಾ ಭರತ್, ಮುಖಂಡರಾದ ಬಿ.ಪಿ.ಮಂಜುನಾಥ್, ಹೇಮಂತ ಕುಮಾರ್ ಗೌಡ, ಜಯಪ್ರಕಾಶ್ (ಜೆಪಿ) ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕಾರ್ಮಿಕ ನ್ಯಾಯಾಲಯವನ್ನು ಮಳಲವಾಡಿ ನ್ಯಾಯಾಲಯ ಸಂಕೀರ್ಣಕ್ಕೆ ವರ್ಗಾಯಿಸಲು ಮನವಿ



ಮೈಸೂರು,ನ.9(ಆರ್‌ಕೆಬಿ)–ಮಳಲವಾಡಿಯಲ್ಲಿರುವ ನೂತನ ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕ ನ್ಯಾಯಾಲಯ ಮತ್ತು ಔದ್ಯಮಿಕ ನ್ಯಾಯಾಧೀಕರಣ ಕಚೇರಿಯನ್ನು ತೆರವುಗೊಳಿಸಿರುವ ಕ್ರಮ ಸರಿಯಲ್ಲ ಎಂದು ಮೈಸೂರು ಇಂಡಸ್ಟ್ರಿಯಲ್ ಲಾ ಪ್ರಾಕ್ಟಿಷನರ್ಸ್ ಅಸೋಸಿಯೇಷನ್ ಅಸಮಾಧಾನ ವ್ಯಕ್ತಪಡಿಸಿದೆ.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾರ್ಮಿಕ ಕಾನೂನು ನ್ಯಾಯವಾದಿ ಜಗದೀಶ್‌ರಾವ್, ಸುಮಾರು 30 ವರ್ಷಗಳಿಂದಲೂ ಈ ಎರಡು ನ್ಯಾಯಾಲಯಗಳಿಗೆ ಸ್ವಂತ ಕಟ್ಟಡ ಒದಗಿಸಲಾಗಿಲ್ಲ. ಹಾಗಾಗಿ ಒಂದು ಬಾಡಿಗೆ ಕಟ್ಟಡದಿಂದ ಮತ್ತೊಂದು ಬಾಡಿಗೆ ಕಟ್ಟಡಕ್ಕೆ ಸ್ಥಳಾಂತರ ಮಾಡಲಾಗುತ್ತಿತ್ತು. ಆದರೆ ನಮ್ಮ ಸಂಘದ ಸದಸ್ಯರ ಪರಿಶ್ರಮದ ಫಲವಾಗಿ ಜಿಲ್ಲಾ ನ್ಯಾಯಾಲಯಕ್ಕೆ ಹೊಸ ನ್ಯಾಯಾಲಯ ಸಂಕೀರ್ಣದ ನಿರ್ಮಾಣಕ್ಕೆ ಮುಡಾ ವತಿಯಿಂದ ಕೆಲವೇ ದೂರದಲ್ಲಿರುವ ಮಳಲವಾಡಿಯಲ್ಲಿ ನಿವೇಶನ ನೀಡಲಾಗಿತ್ತು. ಬಳಿಕ ಅಲ್ಲಿ ನಮ್ಮ ಈ ಎರಡೂ ನ್ಯಾಯಾಲಯಗಳಿಗೆ ಬೇಕಾದ ಸ್ಥಳಾವಕಾಶವೂ ಸೇರಿದಂತೆ ವಿವಿಧ ಒಟ್ಟು 26 ನ್ಯಾಯಾಲಯಗಳಿಗೆ ಅವಕಾಶ ಮಾಡಿಕೊಡಲಾಗಿತ್ತು. ಆದರೆ 2 ತಿಂಗಳ ಹಿಂದೆ ನೂತನ ನ್ಯಾಯಾಲಯ ಸಂಕೀರ್ಣದಿಂದ ಮುಖ್ಯ ಜಿಲ್ಲಾ ನ್ಯಾಯಾಲಯದ ಹಿಂಭಾಗದಲ್ಲಿರುವ ಚಿಕ್ಕದೊಂದು ಕಟ್ಟಡಕ್ಕೆ ಈ ಎರಡೂ ನ್ಯಾಯಾಲಯಗಳನ್ನು ಬಲವಂತದಿಂದ ಸ್ಥಳಾಂತರಿಸಲಾಗಿದೆ. ಯಾವುದೇ ಸಮರ್ಪಕ ಮೂಲಸೌಕರ್ಯಗಳಿಲ್ಲದ ಈ ನ್ಯಾಯಾಲಯದಲ್ಲಿ ನ್ಯಾಯಾಧೀಶರು ಕುಳಿತು ನಿತ್ಯ ಸುಸೂತ್ರವಾಗಿ ನೂರಾರು ಕಾರ್ಮಿಕರ ದೂರು, ಅಹವಾಲುಗಳನ್ನು ಆಲಿಸಲು ತುಂಬಾ ತೊಂದರೆ ಆಗುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ಬಡ ಕಾರ್ಮಿಕರನ್ನು ಕಂಡರೆ ನ್ಯಾಯಾಲಯದ ಸಂಬಂಧಪಟ್ಟ ಉನ್ನತ ಮಟ್ಟದ ಅಧಿಕಾರಿಗಳಿಗೆ ಏಕೆ ತಾತ್ಸಾರವೋ ತಿಳಿದಿಲ್ಲ ಎಂದು ಜಗದೀಶ್‌ರಾವ್ ತಿಳಿಸಿದರು.

ಕಾರ್ಮಿಕ ನ್ಯಾಯಾಲಯ ಮತ್ತು ಔದ್ಯಮಿಕ ನ್ಯಾಯಾಧೀಕರಣಕ್ಕೆ ಸೂಕ್ತ ಕಟ್ಟಡ ಒದಗಿಸಿಕೊಡಲು ಜಿಲ್ಲಾ ನ್ಯಾಯಾಧೀಶರಿಗೆ ಅಧಿಕಾರವಿದೆ. ಹಾಗಾಗಿ ಕಾರ್ಮಿಕರ ಹಿತದೃಷ್ಟಿಯಿಂದ ಈ ಎರಡೂ ನ್ಯಾಯಾಲಯಗಳಿಗೆ ಮಳಲವಾಡಿಯ ನೂತನ ಕಟ್ಟಡದಲ್ಲಿ ಅವಕಾಶ ಕಲ್ಪಿಸಿಕೊಡುವಂತೆ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಐಎನ್‌ಟಿಯುಸಿಯ ಹೆಕ್ಟರ್ ಗೊನ್ಸಾಲ್‌ವೆಸ್, ರಾಜ್ಯ ದಿನಗೂಲಿ ನೌಕರರ ಸಂಘದ ಅಧ್ಯಕ್ಷ ಪ್ರಮೋದ್ ಚಿಕ್ಕಮಣ್ಣೂರ್, ಬಿ.ಎಸ್.ಸುರೇಶ್, ಗಂಗಾಧರಸ್ವಾಮಿ, ಧನಂಜಯ ಉಪಸ್ಥಿತರಿದ್ದರು.

ನಾಳೆ ನೈಪುಣ್ಯ ದಸರಾ ಪ್ರಶಸ್ತಿ ಪ್ರದಾನ

ಶಿಕ್ಷಣ ತಜ್ಞ ಡಾ.ಗುರುರಾಜ ಕರ್ಜಗಿ ಭಾಗಿ



ಮೈಸೂರು,ನ.9(ಆರ್‌ಕೆಬಿ)–ಮೈಸೂರಿನ ಆರ್.ಟಿ.ನಗರದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯ ವತಿಯಿಂದ ದಸರಾ ಸಂದರ್ಭದಲ್ಲಿ ನಡೆಸಲಾಗಿದ್ದ ಅಂತರ ಶಾಲಾ ಚಿತ್ರಕಲಾ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ ಹಾಗೂ ನೈಪುಣ್ಯ ದಸರಾ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನ.11ರಂದು ಸಂಜೆ 4.30ಕ್ಕೆ ವಿಜಯನಗರ 3ನೇ ಹಂತದಲ್ಲಿರುವ ಬಂಟ್ಸ್ ಕನ್ವೆನ್ಷನ್ ಹಾಲ್‌ನಲ್ಲಿ ನಡೆಯಲಿದೆ. ಖ್ಯಾತ ಶಿಕ್ಷಣ ತಜ್ಞ ಡಾ.ಗುರುರಾಜ ಕರ್ಜಗಿ ಕಾರ್ಯಕ್ರಮ ಉದ್ಘಾಟಿಸುವರು. ಪೋಷಕರು, ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ ಪ್ರಸ್ತುತ ಶಿಕ್ಷಣ ವ್ಯವಸ್ಥೆಯ ಕುರಿತು ಮಾತನಾಡಲಿದ್ದಾರೆ. ಕೇಂದ್ರ ಸರ್ಕಾರದ ಸಾಮರ್ಥ್ಯ ನಿರ್ಮಾಣ ಆಯೋಗದ ಸದಸ್ಯ ಡಾ.ಆರ್.ಬಾಲಸುಬ್ರಹ್ಮಣ್ಯ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಸಂಸ್ಥೆ ಅಧ್ಯಕ್ಷ ಆರ್.ರಘು ಅಧ್ಯಕ್ಷತೆ ವಹಿಸುವರು. ಇದಕ್ಕೂ ಮುನ್ನ ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

ಇಂದು, ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ನ.9–ಚೆಸ್ಕಾಂ ವತಿಯಿಂದ ನಾಳೆ (ಗುರುವಾರ) ಆಲನಹಳ್ಳಿ, ಇಡ್ಲಿಕಟ್ಟೆ, ವಸಂತನಗರ, ಶಾಂತಿಧಾಮ ಸುತ್ತಮುತ್ತ, ಗಿರಿದರ್ಶಿನಿ ಬಡಾವಣೆ, ಪೊಲೀಸ್ ಬಡಾವಣೆ 1ನೇ, 2ನೇ ಹಂತ, ನೇತಾಜಿನಗರ, ಕೆಎಸ್‌ಆರ್‌ಟಿಸಿ ಬಡಾವಣೆ, ನಂದಿನಿ ಬಡಾವಣೆ 1ನೇ ಮತ್ತು 2ನೇ ಹಂತ, ನೇತಾಜಿನಗರ, ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಸುತ್ತಮುತ್ತ ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಶುಕ್ರವಾರ ವ್ಯತ್ಯಯ: ಗೋಲ್ಡನ್ ಗ್ರಾಸ್ ಸುತ್ತಮುತ್ತ, ರಾಘವೇಂದ್ರ ಎಂಟರ್‌ಪ್ರೈಸಸ್, ಸ್ಕ್ಯಾನ್‌ರೇ, ಎಲ್&ಟಿ, ಟಿ.ಆರ್.ಸಿ ಸುತ್ತಮುತ್ತ, ಪಲ್ಲವಿ ಫಿಲ್ಟರ್ ಸುತ್ತಮುತ್ತ, ಮೆರಿಟಾರ್, ದಿವ್ಯಾ ಇಂಜಿನಿಯರಿಂಗ್ ಸುತ್ತಮುತ್ತ, ರವಿ ಫ್ಯಾಕ್ಟರಿ ಕೂರ್ಗಳ್ಳಿ ಸುತ್ತಮುತ್ತ ಬೆಳಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ನ.14ರಂದು ಕೆಡಿಪಿ ಸಭೆ

ಮೈಸೂರು,ನ.9–ಮೈಸೂರು ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ವತಿಯಿಂದ ಜಿಲ್ಲಾ ಬ್ಯಾಂಕುಗಳ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯನ್ನು ಜಿಪಂ ಮುಖ್ಯ ಸಭಾಂಗಣದಲ್ಲಿ ನ.14ರಂದು ಮಧ್ಯಾಹ್ನ 12 ಗಂಟೆಗೆ ಏರ್ಪಡಿಸಲಾಗಿದೆ. ಸಭೆಯಲ್ಲಿ ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸಪ್ರಸಾದ್, ಸುಮಲತಾ ಅಂಬರೀಷ್ ಭಾಗವಹಿಸಲಿದ್ದಾರೆ.

ಫಲಾನುಭವಿಗಳ ತಪ್ಪು ದಾರಿಗೆಳೆಯುವ ಯತ್ನ

ಕೆ.ಆರ್.ಕ್ಷೇತ್ರ ಆಶ್ರಯ ಸಮಿತಿ ವಿರುದ್ಧ ಫಲಾನುಭವಿಗಳ ಆರೋಪ



ಮೈಸೂರು,ನ.9(ಆರ್‌ಕೆಬಿ)–ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ 2003–04ನೇ ಸಾಲಿನ 822 ಫಲಾನುಭವಿಗಳಿಗೆ ತಲಾ 4.90 ಲಕ್ಷ ಹಣ ಕಟ್ಟುವಂತೆ ಪಾಲಿಕೆ ನೋಟಿಸ್ ಕಳಿಸಿದೆ. ಈ ಕುರಿತು ಪಾಲಿಕೆ ಎದುರು ಫಲಾನುಭವಿಗಳು ನಡೆಸಿದ ಪ್ರತಿಭಟನೆ ಕುರಿತು ಕೆ.ಆರ್.ಕ್ಷೇತ್ರದ ಆಶ್ರಯ ಸಮಿತಿ ಪದಾಧಿಕಾರಿಗಳು ಸಾರ್ವಜನಿಕರನ್ನು ತಪ್ಪು ಹಾದಿಗೆ ಎಳೆಯುವ ಯತ್ನ ಮಾಡಿದ್ದಾರೆ ಎಂದು ಪಾಲಿಕೆ ಮಾಜಿ ಸದಸ್ಯ ವಿ.ಮಂಜುನಾಥ್ ಆರೋಪಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶಾಸಕ ಎಸ್.ಎ.ರಾಮದಾಸ್ ಅವರೇ ಸಮಿತಿ ಅಧ್ಯಕ್ಷರೂ ಆಗಿದ್ದಾರೆ. ನಿಗಮದ ವತಿಯಿಂದ ಫಲಾನುಭವಿಗಳಿಂದ ತಲಾ 10,100 ರೂ. ಕಟ್ಟಿಸಿಕೊಂಡು 20X30 ಅಳತೆಯ ಒಂಟಿ ಮನೆಗಳನ್ನು ಚೆಕ್ಕುಬಂದಿ ಸಮೇತ ನೋಂದಾಯಿಸಿ ಕೊಡಲಾಗಿದೆ. ಅಲ್ಲದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ನಿಗಮ ಹಾಗೂ ಆಶ್ರಯ ಮನೆಗಳ ಸಾಲ ಮನ್ನಾ ಮಾಡಿದ್ದಾರೆ. ಆದ್ದರಿಂದ ಆ ಆದೇಶದಲ್ಲಿ 822 ನೊಂದ ಫಲಾನುಭವಿಗಳ ಸಾಲ ಮನ್ನಾ ಆಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಸಂಬಂಧಿಸಿದವರು ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದರು.

ಫಲಾನುಭವಿಗಳು ಹಾಗೂ ಸಾರ್ವಜನಿಕರಿಗೆ ಆಗಿರುವ ತೊಂದರೆ ನಿವಾರಿಸಲು 8ನೇ ಬ್ಲಾಕ್‌ನ 822 ಫಲಾನುಭವಿಗಳಿಗೆ ಕೂಡಲೇ ಒಂಟಿ ಮನೆ ನೀಡಬೇಕು. ಇಲ್ಲದಿದ್ದಲ್ಲಿ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಶ್ರೀಕಂಠ, ಅಶ್ವಿನಿ, ಪುಟ್ಟರಾಜು, ರವಿ, ರಮೇಶ್ ಉಪಸ್ಥಿತರಿದ್ದರು.

ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರಿದೆಯೇ... ಹೊಸದಾಗಿ ಹೆಸರು ಸೇರಿಸಬೇಕೇ... ತ್ವರೆ ಮಾಡಿ!

ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ-2023, ಕರಡು ಮತದಾರರ ಪಟ್ಟಿ ಪ್ರಕಟಣೆ-2023ರ ಕುರಿತು ಜಾಗೃತಿ ಜಾಥಾ



ಮೈಸೂರಿನ ಜೆಎಲ್‌ಬಿ ರಸ್ತೆಯ ಮಹಾರಾಣಿ ಮಹಿಳಾ ಕಾಲೇಜು ಆವರಣದಲ್ಲಿ ಬುಧವಾರ ಮತದಾರರ ಪಟ್ಟಿ ಪರಿಷ್ಕರಣೆ ಕುರಿತ ಜಾಗೃತಿ ಜಾಥಾಕ್ಕೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಹಸಿರು ನಿಶಾನೆ ತೋರಿದರು.

ಮೈಸೂರು.ನ,9.(ಪಿಎಂ)– ಬಂದಿದೆ ಮತದಾರರ ಪಟ್ಟಿ ಪರಿಷ್ಕರಣೆ... ಪಟ್ಟಿಯಲ್ಲಿ ಹೆಸರು ಪರಿಶೀಲನೆ... ಹೊಸ ನೋಂದಣಿ ನಮ್ಮ ಹೊಣೆ... ಪಟ್ಟಿಯಲ್ಲಿ ನಿಮ್ಮ ಹೆಸರನ್ನು ಪರಿಶೀಲಿಸಿ... ಯಾವುದೇ ಮತದಾರರು ಮತದಾನದಿಂದ ಹೊರಗುಳಿಯಬಾರದು... ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರು ನೋಂದಾಯಿಸಿ... ನೋಂದಾಯಿಸಲು ವಿಹೆಚ್‌ಎ ಆ್ಯಪ್ ಬಳಸಿ... ಎಂಬಿತ್ಯಾದಿ ಘೋಷವಾಕ್ಯಗಳ ಫಲಕಗಳನ್ನಿಡಿದು ಸಾವಿರಾರು ವಿದ್ಯಾರ್ಥಿನಿಯರು ಹೆಜ್ಜೆ ಹಾಕಿದರು.

ಜಿಲ್ಲಾಡಳಿತ, ಮೈಸೂರು ಮಹಾನಗರ ಪಾಲಿಕೆ ಮತ್ತು ಜಿಲ್ಲಾ ಸ್ವೀಪ್ ಸಮಿತಿ ಸಂಯುಕ್ತಾಶ್ರಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ–2023 ಹಾಗೂ ಕರಡು ಮತದಾರರ ಪಟ್ಟಿ ಪ್ರಕಟಣೆ–2023ರ ಕುರಿತು ಬುಧವಾರ ಹಮ್ಮಿಕೊಂಡಿದ್ದ ಜಾಗೃತಿ ಜಾಥಾದಲ್ಲಿ ಮಹಾರಾಣಿ ಮಹಿಳಾ ಕಲಾ ಕಾಲೇಜಿನ ವಿದ್ಯಾರ್ಥಿನಿಯರು ಹೀಗೆ ಸಹಸ್ರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಮಹಾರಾಣಿ ಮಹಿಳಾ ಕಲಾ ಕಾಲೇಜು ಆವರಣದಲ್ಲಿ ಜಾಗೃತಿ ಜಾಥಾಕ್ಕೆ ಜಿಲ್ಲಾ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಅಭಿಯಾನವು ಇಂದಿನಿಂದ ಮುಂದಿನ ಡಿ.8ರವರೆಗೆ ರಾಜ್ಯಾದ್ಯಂತ ನಡೆಯಲಿದೆ. ಅಂತೆಯೇ ಜಿಲ್ಲೆಯಲ್ಲಿಯೂ ನಡೆಯಲಿದೆ. ಮುಂಬರುವ ವಿಧಾನಸಭಾ ಚುನಾವಣೆ, ಬಳಿಕ ನಡೆಯುವ ಲೋಕಸಭಾ ಚುನಾವಣೆಗೆ ಮತದಾರರ ಮದರ್ ರೋಲ್ ಸಿದ್ಧಪಡಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಈ ಸಂಬಂಧ ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಇದರಲ್ಲಿ 18 ವರ್ಷ ತುಂಬಿರುವವರು ನೋಂದಣಿ ಮಾಡಿಕೊಳ್ಳುವುದು, ಹೆಸರಿನಲ್ಲಿ ಅಕ್ಷರ ದೋಷ, ಭಾವಚಿತ್ರ ಬದಲಾವಣೆ, ಜೊತೆಗೆ ಬೇರೆ ಬೇರೆ ಮತಗಟ್ಟೆಗಳಿಗೆ ವಿಂಗಡಣೆಯಾಗಿರುವ ಒಂದೇ ಕುಟುಂಬದವರ ಹೆಸರುಗಳನ್ನು ಒಂದೇ ಮತಗಟ್ಟೆಗೆ ತರುವುದು ಸೇರಿದಂತೆ ಮೊದಲಾದ ಕಾರ್ಯ ತಿಂಗಳ ಕಾಲ ನಡೆಯಲಿದೆ. ಇಂದು ಕರಡು ಮತದಾರರ ಪಟ್ಟಿ ಪ್ರಕಟಣೆಗೊಂಡಿದೆ. ಅಂತೆಯೇ ಎಲ್ಲಾ ರಾಜಕೀಯ ಪಕ್ಷಗಳವರಿಗೂ ಈ ಕರಡು ಮತದಾರರ ಪಟ್ಟಿ ವಿತರಣೆ ಮಾಡಲಾಗುವುದು ಎಂದರು.

ಇಂದಿನಿಂದ ಡಿ.8ರವರೆಗೆ ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಅವಕಾಶವಿದೆ. ನ.12, 20, ಡಿ.3 ಮತ್ತು 4 ಸೇರಿದಂತೆ ಈ 4 ದಿನಗಳು ವಿಶೇಷ ಅಭಿಯಾನ ನಡೆಯಲಿದ್ದು, ಈ ದಿನಗಳಲ್ಲಿ ಮಿಂಚಿನ ನೋಂದಣಿ ಪ್ರಕ್ರಿಯೆ ಜೊತೆಗೆ ಬೂತ್ ಮಟ್ಟದ ಅಧಿಕಾರಿಗಳು ಆಯಾಯ ಮತಗಟ್ಟೆಯಲ್ಲಿ ಹಾಜರಿದ್ದು, ಆಕ್ಷೇಪಣೆಗಳನ್ನು ಸ್ವೀಕರಿಸಲಿದ್ದಾರೆ. ಬಳಿಕ ಪರಿಷ್ಕರಣೆ ಅವಧಿಯಲ್ಲಿ ಅವುಗಳನ್ನು ಅನುಷ್ಠಾನ ಮಾಡಲಿದ್ದಾರೆ. ಅಂತಿಮ ಮತದಾರರ ಪಟ್ಟಿ 2023ರ ಜ.5ರಂದು ಪ್ರಕಟಣೆಗೊಳ್ಳಲಿದೆ. ಚುನಾವಣಾ ಆಯೋಗ ಮಾಡಿರುವ ಎಲ್ಲಾ ಬದಲಾವಣೆಗಳು ಜಿಲ್ಲೆಯಲ್ಲಿ ವ್ಯವಸ್ಥಿತವಾಗಿ ಆಗಬೇಕಿದೆ. ಹಾಗಾಗಿ ಪ್ರತಿಯೊಬ್ಬ ಮತದಾರರು ಸಹಕಾರ ನೀಡಬೇಕು ಎಂದು ಕೋರಿದರು.

ಕಾಲೇಜು ಆವರಣದಿಂದ ಹೊರಟ ಜಾಥಾವು, ಜೆಎಲ್‌ಬಿ ರಸ್ತೆ, ಸೀತಾವಿಲಾಸ ರಸ್ತೆ, ಸಯ್ಯಾಜಿರಾವ್ ರಸ್ತೆ, ಕೆಆರ್ ವೃತ್ತ, ಡಿ.ದೇವರಾಜ ಅರಸು ರಸ್ತೆಯಲ್ಲಿ ಸಂಚರಿಸಿ, ಮಹಾರಾಣಿ ಕಾಲೇಜು ಆವರಣಕ್ಕೆ ಹಿಂತಿರುಗಿ ಅಂತ್ಯಗೊಂಡಿತು. ಜಿಪಂ ಸಿಇಓ ಬಿ.ಆರ್.ಪೂರ್ಣಿಮ, ಎಡಿಸಿ ಡಾ.ಮಂಜುನಾಥಸ್ವಾಮಿ, ನಗರಪಾಲಿಕೆ ಆಯುಕ್ತ ಜಿ.ಎಲ್.ಲಕ್ಷ್ಮೀಕಾಂತರೆಡ್ಡಿ, ಪಾಲಿಕೆ ಉಪಆಯುಕ್ತರಾದ ಸವಿತಾ, ಡಾ.ಎಂ.ದಾಸೇಗೌಡ, ಕಾಲೇಜಿನ ಪ್ರಾಂಶುಪಾಲ ಪ್ರೊ.ಶ್ರೀನಿವಾಸ್, ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಡಾ.ಎಸ್.ಜಿ.ರಾಘವೇಂದ್ರ ಮತ್ತಿತರರು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಗಿರಾಕಿ : ನಾನು ಆರು ತಿಂಗಳ ಹಿಂದೆ ಈ ಬೆಕ್ಕು ಖರೀದಿಸಿದಾಗ ಇದು ತುಂಬಾ ಒಳ್ಳೆಯ ಬೆಕ್ಕು, ಇಲಿಗಳನ್ನು ಚೆನ್ನಾಗಿ ಹಿಡಿಯುತ್ತದೆ ಎಂದು ಹೇಳಿದ್ದೀರಿ. ಆದರೆ ಇದು ಇದುವರೆಗೂ ಒಂದು ಇಲಿಯನ್ನು ಹಿಡಿದಿಲ್ವಲ್ಲ!

ಮಾರಾಟಗಾರ : ಹಾಗೇನಿಲ್ಲ. ನಿಮ್ಮನೆ ಇಲಿಗಳಿಗೆ ಇನ್ನೂ ಕೆಟ್ಟ ಕಾಲ ಬಂದಿಲ್ಲ ಅಷ್ಟೇ.

ಮೈಸೂರು ಮಿತ್ರ

ಗುರುವಾರ, 10 ನವೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಜೀವನದಲ್ಲಿ ಎಲ್ಲಾ ಲಾಭಗಳನ್ನು ಒಮ್ಮೆಲೇ ಪಡೆಯಲು ಪ್ರಯತ್ನಿಸುವವನಿಗೆ ಏನೂ ದೊರೆಯದು –ಬೂಮ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆನೆ ಭಾರ ಆನೆಗೆ
ಸೊಳ್ಳೆ ಭಾರ ಸೊಳ್ಳೆಗೆ

ನಿಮ್ಮ ಪತ್ರಗಳು

ಪೊಲೀಸರ ಬೇಜವಾಬ್ದಾರಿಯೇ ಕಾರಣ!

ಮಾನ್ಯರೆ,

ನಿವೃತ್ತ ಐಬಿ ಅಧಿಕಾರಿ ಆರ್.ಎನ್.ಕುಲಕರ್ಣಿ ಅವರ ಕೊಲೆಗೆ ಮೈಸೂರಿನ ಪೊಲೀಸರ ಬೇಜವಾಬ್ದಾರಿಯೇ ಮುಖ್ಯ ಕಾರಣ!

ಮಾನಸಗಂಗೋತ್ರಿ ಆವರಣದಲ್ಲಿ ವಾಯುವಿಹಾರ ಮಾಡುತ್ತಿದ್ದ ಕುಲಕರ್ಣಿ ಅವರ ಮೇಲೆ ಕಾರು ಹರಿಸಿ ಕೊಲ್ಲಲಾಗಿದೆ. ಈ ಕಾರಿಗೆ ಸಂಖ್ಯಾ ಫಲಕ ಇರಲಿಲ್ಲ. ಈ ಕಾರು ಆಕಾಶದಿಂದ ಧರೆಗಿಳಿದು ಬಂದು ಕೊಲೆ ಮಾಡಲು ಸಾಧ್ಯವಿಲ್ಲ. ಈ ಕಾರು ನಂಬರ್ ಪ್ಲೇಟನ್ನು ಕಳಚಿಟ್ಟು ರಾಜಾರೋಷವಾಗಿ ಮೈಸೂರು ನಗರದ ರಸ್ತೆಯಲ್ಲಿ ಸಂಚರಿಸಿದ್ದರೂ ಸಹ ಪೊಲೀಸರ ಮತ್ತು ಸಿಸಿ ಕ್ಯಾಮರಾಗಳ ಹದ್ದಿನ ಕಣ್ಣಿಗೆ ಗೋಚರಿಸದಿರಲು ಸಾಧ್ಯವೇ?

ಮೈಸೂರು ನಗರದ ಪ್ರತಿಯೊಂದು ರಸ್ತೆಯಲ್ಲಿ ಸಂಚರಿಸುವ ವಾಹನಗಳನ್ನು ಗಮನಿಸಿದರೆ ಅವುಗಳಲ್ಲಿ ಬಹಳಷ್ಟು ದ್ವಿಚಕ್ರ ವಾಹನ, ಕಾರು, ಲಾರಿ, ಆಟೋ ರಿಕ್ಷಾ, ಟೆಂಪೋ ಮುಂತಾದ ವಾಹನಗಳು ನಂಬರ್ ಪ್ಲೇಟ್ ಇಲ್ಲದೆ ಸಂಚರಿಸುತ್ತಿರುತ್ತದೆ. ನಂಬರ್ ಪ್ಲೇಟ್ ಇಲ್ಲದ ಇಂತಹ ಹಲವಾರು ವಾಹನಗಳು ನಮ್ಮಂತಹವರ ಕಣ್ಣಿಗೆ ಬೀಳುತ್ತಲೇ ಇರುತ್ತವೆ. ಅಷ್ಟೇ ಅಲ್ಲ! ಮೈಸೂರು ಮಹಾನಗರ ಪಾಲಿಕೆಯ ಕೈಂಕರ್ಯ ಮಾಡುವ ಶೇ. 90 ರಷ್ಟು ವಾಹನಗಳಲ್ಲಿ ನಂಬರ್ ಪ್ಲೇಟುಗಳೇ ಇಲ್ಲ. ಮರಳು, ಸಿಮೆಂಟ್, ಇಟ್ಟಿಗೆ ಹಾಗೂ ಕಟ್ಟಡ ತ್ಯಾಜ್ಯಗಳನ್ನು ಸಾಗಿಸುತ್ತಾ ವೇಗವಾಗಿ ಚಲಿಸುವ ಬಹುತೇಕ ಲಾರಿಗಳ ನಂಬರ್ ಪ್ಲೇಟನ್ನು ಉದ್ದೇಶಪೂರ್ವಕವಾಗಿ ಧೂಳು ಮೆತ್ತಿ ಮರೆಮಾಚಲಾಗಿರುತ್ತದೆ!

ಮೈಸೂರಿನಾದ್ಯಂತ ಇರುವ ಸಿಸಿ ಕ್ಯಾಮರಾ ಆಧಾರದ ಮೇಲೆ ಹೆಲ್ಮೆಟ್ ಧರಿಸದ ವಾಹನ ಸವಾರರ ಮನೆಗೆ ನೋಟೀಸು ನೀಡುವ ಪೊಲೀಸರ ಕಣ್ಣಿಗೆ ಇಂತಹ ನಂಬರ್ ಪ್ಲೇಟ್ ಇಲ್ಲದ, ವಿರೂಪಗೊಂಡ ವಾಹನಗಳು ಗೋಚರಿಸಿದ್ದರೂ ಅವರು ಜಾಣ ಕುರುಡು ಪ್ರದರ್ಶಿಸುತ್ತಾರೆ. ಪೊಲೀಸರ ಬೇಜವಾಬ್ದಾರಿಯಿಂದಾಗಿಯೇ ಕುಲಕರ್ಣಿಯಂತಹ ಅಧಿಕಾರಿಯ ಕೊಲೆಯಾಗಿದೆ ಎಂದರೆ ತಪ್ಪಾಗಲಾರದು.

ಅನಾಹುತ ನಡೆದ ನಂತರ ಸಿಸಿ ಕ್ಯಾಮರಾ ದೃಶ್ಯಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವ ಬದಲಾಗಿ ಅನಾಹುತ ಸಂಭವಿಸುವ ಮುನ್ನ ಎಚ್ಚೆತ್ತುಕೊಳ್ಳುವುದು ಜಾಣತನ. ಈಗಲಾದರೂ ಮೈಸೂರಿನ ಪೊಲೀಸರು ಎಚ್ಚೆತ್ತು ನಂಬರ್ ಪ್ಲೇಟ್ ಇಲ್ಲದ ಹಾಗೂ ನಂಬರ್ ಪ್ಲೇಟ್ ವಿರೂಪಗೊಳಿಸಿ ಸಂಚರಿಸುವ ವಾಹನಗಳ ವಿರುದ್ಧ ಸಮರ ಸಾರಿ ಅನಾಹುತಗಳನ್ನು ತಡೆಗಟ್ಟಬೇಕಾಗಿದೆ.

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು

ಸುಪ್ರೀಂಕೋರ್ಟ್ ತೀರ್ಪು ಸ್ವಾಗತಾರ್ಹ

ಮಾನ್ಯರೆ,

ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಶೇಕಡ 10ರಷ್ಟು ಮೀಸಲಾತಿವೊದಗಿಸುವ ಕೇಂದ್ರ ಸರ್ಕಾರದ ಕಾನೂನಿಗೆ ಸರ್ವೋಚ್ಚ ನ್ಯಾಯಾಲಯ ಒಪ್ಪಿಗೆ ನೀಡಿರುವುದು ಸ್ವಾಗತಾರ್ಹವಾಗಿದೆ. ಈ ಮೂಲಕ ಇತರೇ ಮುಂದುವರೆದ ಜಾತಿಗಳಲ್ಲಿ ಇರುವ ಆರ್ಥಿಕ ದುರ್ಬಲರಿಗೆ ನ್ಯಾಯ ಒದಗಿಸಿದಂತಾಗಿದೆ. ಕಳೆದ ಹಲವಾರು ವರ್ಷಗಳಿಂದ ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ಕಲ್ಪಿಸಬೇಕೆಂಬ ಕೂಗು ಕೇಳಿ ಬರುತ್ತಿತ್ತು. ಈಗ ಅದು ಈಡೇರಿದಂತಾಗಿದೆ.

ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸುವ ವಿಚಾರದಲ್ಲಿ ಸರ್ವೋಚ್ಚ ನ್ಯಾಯಾಲಯ, ಒಟ್ಟು ಮೀಸಲಾತಿಯ ಪ್ರಮಾಣ ಶೇಕಡಾ 50 ರಷ್ಟು ಮೀರಬಾರದು ಎಂದು ಇಂದ್ರಾ ಸಾಹ್ನಿ ಪ್ರಕರಣದಲ್ಲಿ 1992, ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪಿಗೆ ಅನುಗುಣವಾಗಿದೆಯೇ ಎಂಬುದು ಸೇರಿದಂತೆ, ಹಲವಾರು ಆಯಾಮಗಳನ್ನು ಪರಿಶೀಲಿಸಿದೆ ಎಂದು ಹೇಳಲಾಗಿದೆ. ಐವರು ನ್ಯಾಯಮೂರ್ತಿಗಳಿದ್ದ ಪೀಠದಲ್ಲಿ ನಾಲ್ವರು ನ್ಯಾಯಮೂರ್ತಿಗಳಾದ ದಿನೇಶ್ ಮಹೇಶ್ವರಿ, ತ್ರಿವೇದಿ, ಫಾರ್ದಿವಾಲ ಮತ್ತು ಯು.ಯು.ಲಲಿತ್ ಮೀಸಲಾತಿ ಪರವಾಗಿ ತೀರ್ಪು ನೀಡಿದ್ದರೆ, ಪೀಠದ ಮತ್ತೋರ್ವ ನ್ಯಾಯಮೂರ್ತಿ ಎಸ್. ರವೀಂದ್ರ ಭಟ್ ಭಿನ್ನಮತದ ತೀರ್ಪು ನೀಡಿದ್ದಾರೆ. ಹೀಗಾಗಿ ನ್ಯಾಯಾಲಯ ಬಹುಮತದ ತೀರ್ಪನ್ನು ಪ್ರಕಟಿಸಿದೆ.

ಸಂವಿಧಾನದ 15 (6) ಮತ್ತು 16 (6) ವಿಧಿಗಳಿಗೆ ಮಾಡಲಾದ 103 ನೇ ತಿದ್ದುಪಡಿಯ ಅನ್ವಯ ಉದ್ಯೋಗ ಮತ್ತು ಶಿಕ್ಷಣದಲ್ಲಿ, ಆರ್ಥಿಕವಾಗಿ ಹಿಂದುಳಿದವರಿಗೆ ಶೇ 10 ರಷ್ಟು ಮೀಸಲಾತಿ ನೀಡಲು ಅನುವು ಮಾಡಿಕೊಡಲಾಗಿದೆ. ಈ ಹೊಸ ಮೀಸಲಾತಿ ನಿಯಮದ ಪ್ರಕಾರ, ಎಸ್‌ಸಿ, ಎಸ್‌ಟಿ ಹಾಗೂ ಒಬಿಸಿ ಪಂಗಡಗಳಿಗೆ ಸೇರದ ವರ್ಗಗಳ ಅಭ್ಯರ್ಥಿಗಳ ವಾರ್ಷಿಕ ಆದಾಯ 8,00,000ದ ಒಳಗೆ ಇದ್ದರೆ, ಈ ಮೀಸಲಾತಿ ಅವರಿಗೆ ಅನ್ವಯವಾಗುತ್ತದೆ. ಒಟ್ಟಿನಲ್ಲಿ, ಸರ್ವೋಚ್ಚ ನ್ಯಾಯಾಲಯ ಈ ತೀರ್ಪು ಬಹಳ ವರ್ಷಗಳ ನಿರೀಕ್ಷೆಯನ್ನು ಈಡೇರಿಸಿದಂತಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಕನ್ನಡ ಪಿಸಿಎಂಬಿ ಪುಸ್ತಕಗಳು ವರದಾನವೇ ಸರಿ

ಮಾನ್ಯರೆ,

ಇದೇ ಮೊದಲ ಬಾರಿಗೆ ಪ್ರಥಮ ಮತ್ತು ದ್ವಿತೀಯ ವರ್ಷದ ಪಿಯು ವಿಜ್ಞಾನ ವಿಭಾಗದ ಭೌತವಿಜ್ಞಾನ, ರಸಾಯನ ವಿಜ್ಞಾನ, ಗಣಿತ ಮತ್ತು ಜೀವವಿಜ್ಞಾನದ (ಪಿಸಿಎಂಬಿ) ಪುಸ್ತಕಗಳು ಸರಕಾರಿ ಕಾಲೇಜಿನ ಗ್ರಂಥಾಲಯ ಸೇರಿದ್ದು ಸ್ವಾಗತಾರ್ಹ. ಕನ್ನಡ ಮಾಧ್ಯಮದಲ್ಲಿ ಎಸ್ಸೆಸ್ಸೆಲ್ಸಿ ಅಭ್ಯಾಸ ಮಾಡಿ ಪಿಯು ವಿಜ್ಞಾನ ವಿಭಾಗ ಸೇರಿಕೊಂಡ ವಿದ್ಯಾರ್ಥಿಗಳಿಗೆ ಪಿಸಿಎಂಬಿ ವಿಷಯಗಳನ್ನು ಇಂಗ್ಲಿಷ್‌ನಲ್ಲಿ ಓದಲು ತೊಂದರೆ ಆಗುವುದನ್ನು ಸೂಕ್ಷ್ಮವಾಗಿ ಗಮನಿಸಿ ಅನುವಾದ ಕಾರ್ಯ ಕೈಗೊಂಡಿರುವುದು ವಿಜ್ಞಾನ ವಿದ್ಯಾರ್ಥಿಗಳಿಗೆ ವರದಾನವೇ ಸರಿ.

ಮಾತೃಭಾಷೆಯಲ್ಲೇ ವಿಜ್ಞಾನದ ವಿಷಯ ಬೋಧಿಸುವುದರಿಂದ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ವಿಷಯಗಳನ್ನು ಬೇಗನೇ ಅರ್ಥೈಸಿಕೊಳ್ಳುವರು. ಇನ್ನೊಂದೆಡೆ, ಭೌತವಿಜ್ಞಾನ, ರಸಾಯನ ವಿಜ್ಞಾನ, ಗಣಿತ ಮತ್ತು ಜೀವವಿಜ್ಞಾನ ವಿಷಯಗಳಿಗೆ ತಜ್ಞರ ಸಮಿತಿ ರಚಿಸಿ, ಎನ್‌ಸಿಇಆರ್‌ಟಿ ಪಠ್ಯವನ್ನು ಸಂಪೂರ್ಣವಾಗಿ ಕನ್ನಡಕ್ಕೆ ಭಾಷಾಂತರ ಮಾಡಿರುವುದು ಒಳ್ಳೆ ಬೆಳವಣಿಗೆ. ಎನ್‌ಸಿಇಆರ್‌ಟಿ ಪಠ್ಯ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಇರುವುದರಿಂದ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿಗಳ ಫಲಿತಾಂಶ ಉತ್ತಮವಾಗಿ ಬರುತ್ತಿದೆ. ಕನ್ನಡ ಮಾಧ್ಯಮದಲ್ಲಿ ಪಿಸಿಎಂಬಿ ಪಠ್ಯದ ಲಭ್ಯತೆಯಿಂದ ಕನ್ನಡ ಮಾಧ್ಯಮ ವಿದ್ಯಾರ್ಥಿಗಳ ಫಲಿತಾಂಶ ಇನ್ನಷ್ಟು ಸುಧಾರಿಸಲಿದೆ. ಆದರೆ, ಇವೆಲ್ಲವೂ ಅನುದಾನಿತ ಮತ್ತು ಅನುದಾನ ರಹಿತ ಕಾಲೇಜುಗಳ ಗ್ರಂಥಾಲಯಗಳಿಗೆ ಹಾಗೂ ಆಸಕ್ತರಿಗೆ ಸರ್ಕಾರಿ ಮುದ್ರಣಾಲಯದಲ್ಲಿ ಈ ಪುಸ್ತಕಗಳ ಖರೀದಿಗೆ ವ್ಯವಸ್ಥೆ ಅತೀ ಶೀಘ್ರವಾಗಿ ಆಗಬೇಕು.

–ವಿಜಯಕುಮಾರ್ ಎಚ್.ಕೆ., ರಾಯಚೂರು



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಭಾರತದಲ್ಲಿ ಕುಸಿಯುತ್ತಿದೆಯೇ ಸಾರ್ವಜನಿಕ ಆರೋಗ್ಯ ವ್ಯವಸ್ಥೆ?

ಕಳೆದ ವಾರವಷ್ಟೇ ತುಮಕೂರು ಜಿಲ್ಲಾ ಆಸ್ಪತ್ರೆಯ ವೈದ್ಯಕೀಯ ಸಿಬ್ಬಂದಿಯ ನಿರ್ಲಕ್ಷ್ಯದಿಂದ ತಾಯಿ ಮತ್ತು ಇಬ್ಬರು ನವಜಾತ ಶಿಶುಗಳು ಪ್ರಾಣವನ್ನು ಕಳೆದುಕೊಳ್ಳಲು ಕಾರಣವಾದ ಪರಿಸ್ಥಿತಿಗಳನ್ನು ವಿಶ್ಲೇಷಿಸಿದಾಗ ನಮ್ಮ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಇರುವುದು ಏತಕ್ಕಾಗಿ ಮತ್ತು ಯಾರಿಗಾಗಿ ಎಂಬ ಎರಡು ಮೂಲಭೂತ ಪ್ರಶ್ನೆಗಳು ಉದ್ಭವಿಸುತ್ತವೆ. ಪತಿಯ ಮರಣಾನಂತರ, ತನ್ನ ಆರು ವರ್ಷದ ಮಗಳೊಡನೆ ತುಮಕೂರಿನಲ್ಲಿ ಬದುಕು ಕಟ್ಟಿಕೊಳ್ಳಲು ಬಂದಿದ್ದ ಕಸ್ತೂರಿ, ಹೆರಿಗೆ ನೋವು ಬಂದಾಗ ಜಿಲ್ಲಾ ಆಸ್ಪತ್ರೆಗೆ ಹೋಗಿದ್ದಾಳೆ. ಆಕೆಯ ಬಳಿ 'ಆಧಾರ್' ಮತ್ತು 'ತಾಯಿ' ಕಾರ್ಡುಗಳು ಇಲ್ಲ ಎಂಬ ಕಾರಣಕ್ಕಾಗಿ ಆಸ್ಪತ್ರೆಯಲ್ಲಿದ್ದ ದಾದಿಯರು ಮತ್ತು ಕಾರ್ಯನಿರತ ವೈದ್ಯೆ ಆಕೆಗೆ ಅವಶ್ಯ ವೈದ್ಯಕೀಯ ನೆರವು ನೀಡಲು ನಿರಾಕರಿಸಿದ್ದಾರೆ. ಅಷ್ಟೇ ಅಲ್ಲ, ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಹೋಗಬೇಕೆಂಬ ಸಲಹೆಯನ್ನು ಬೇರೆ ನೀಡಿದ್ದಾರೆ! ಹಣವಿಲ್ಲದ ಕಾರಣ ಅಸಹಾಯಕತೆಯಿಂದ ಮನೆಗೆ ಮರಳಿದ ಕಸ್ತೂರಿ ಅವಳಿ ಮಕ್ಕಳಿಗೆ ಜನ್ಮ ನೀಡುವಾಗ ತೀವ್ರ ರಕ್ತಸ್ರಾವವಾಗಿ ತನ್ನ ಶಿಶುಗಳೊಡನೆ ಸಾವನ್ನಪ್ಪಿದ್ದಾಳೆ.

ಇಂಥ ಘಟನೆಗಳು ಸಾರ್ವಜನಿಕ ಆಕ್ರೋಶಕ್ಕೆ ಗುರಿಯಾದಾಗ ಆಡಳಿತಾರೂಢ ವ್ಯವಸ್ಥೆ ಬಹು ಕಾಲದಿಂದ ಮಾಡಿಕೊಂಡು ಬಂದಿರುವ ಹಾಗೆ ಇದಕ್ಕೆ ಕಾರಣರಾದವರನ್ನು ಸೇವೆಯಿಂದ ಅಮಾನತು ಮಾಡಿದೆ. ಆದರೆ ಕಳೆದು ಹೋದ ಜೀವಗಳನ್ನು ಮರಳಿ ತರಲಾದೀತೇ? ತನ್ನ ಪೋಷಕರನ್ನು ಕಳೆದುಕೊಂಡು ಆಶ್ರಯರಹಿತ ಸ್ಥಿತಿ ತಲುಪಿರುವ ಆ ಹೆಣ್ಣು ಮಗುವಿನ ಭವಿಷ್ಯಕ್ಕೆ ಯಾರು ಹೊಣೆ? ಪದೇ ಪದೆ ಇಂಥ ಅಮಾನವೀಯ ಘಟನೆಗಳು ನಡೆಯುತ್ತಲೇ ಹೋದರೂ ಬಡವರು ತಮ್ಮ ಜೀವಗಳು ಮತ್ತು ಜೀವನಾಧಾರಗಳನ್ನು ಕಳೆದುಕೊಳ್ಳುತ್ತಲೇ ಹೋದರೂ ನಮ್ಮ ಸಾರ್ವಜನಿಕ ಆರೋಗ್ಯ ರಕ್ಷಣಾ ವ್ಯವಸ್ಥೆ ಏಕೆ ಎಚ್ಚೆತ್ತುಕೊಂಡಿಲ್ಲ?

ಭಾರತ ಸಾರ್ವಜನಿಕ ಆರೋಗ್ಯದ ನಿರ್ವಹಣೆಗಾಗಿ ಅತ್ಯಂತ ಕಡಿಮೆ ಮಟ್ಟದಲ್ಲಿ ಹಣ ಖರ್ಚು ಮಾಡುತ್ತಿರುವ ದೇಶಗಳ ಸಾಲಿನಲ್ಲಿ ಇದೆ ಎನ್ನುವುದು ಗಂಭೀರವಾಗಿ ಪರಿಗಣಿಸಬೇಕಾದ ವಿಚಾರ. ರಾಷ್ಟ್ರೀಯ ಆರೋಗ್ಯ ಅಭಿಯಾನಕ್ಕೆ ನಿಗದಿಯಾಗಿರುವ ಆಯವ್ಯಯ, ಕಳೆದ ಆರು ವರ್ಷಗಳಲ್ಲಿ ಕಡಿಮೆಯಾಗಿದ್ದು ದೇಶೀಯ ಒಟ್ಟು ಆದಾಯದಲ್ಲಿ(ಜಿಡಿಪಿ) ಆರೋಗ್ಯ ರಕ್ಷಣೆಯ ಮೇಲೆ ಖರ್ಚಾಗುತ್ತಿರುವ ಹಣ ತೀರಾ ಕಡಿಮೆಯಾಗುತ್ತಿದೆ. ಕಳೆದ ಒಂದು ದಶಕದಲ್ಲಿ ದೇಶ ಗಮನಾರ್ಹವಾದ ಆರ್ಥಿಕ ಪ್ರಗತಿಯನ್ನು ಕಂಡಿದ್ದರೂ ಆರೋಗ್ಯ ರಕ್ಷಣಾ ಸೌಲಭ್ಯಗಳ ಗುಣಮಟ್ಟ ವಿಶ್ವಮಾನ್ಯ ಸ್ಥಿತಿಯನ್ನು ತಲುಪಿದ್ದರೂ ಇಂದಿಗೂ ಬಡವರ ಮತ್ತು ಶ್ರೀಮಂತರ ನಡುವೆ ಈ ಸೌಲಭ್ಯಗಳ ಬಳಕೆಯಲ್ಲಿ ತೀವ್ರ ಸ್ವರೂಪದ ಅಸಮಾನತೆ ಕಂಡು ಬರುತ್ತಿದೆ. ಒಂದೆಡೆ ಶಿಶು ಜನನ ಸಮಯದಲ್ಲಿ ತಾಯಂದಿರ ಮರಣ ಪ್ರಮಾಣ ಇಳಿಮುಖವಾಗುತ್ತಿದ್ದು, ಆಸ್ಪತ್ರೆಯಲ್ಲಿ ಸಂಭವಿಸುವ ಶಿಶು ಜನನಗಳ ಸಂಖ್ಯೆಯೂ ಏರುತ್ತಿದೆ. ಆದಾಗ್ಯೂ ಕಸ್ತೂರಿಗೆ ಶಿಶು ಜನನ ಸಮಯದಲ್ಲಿ ಆಸ್ಪತ್ರೆಯಿದ್ದರೂ ಅದನ್ನು ಬಳಸಿಕೊಳ್ಳಲಾಗದಿದ್ದುದು ಹಣವಿಲ್ಲ ಎಂಬ ಕಾರಣಕ್ಕಾಗಿ. ಸಾರ್ವಜನಿಕ ವ್ಯವಸ್ಥೆ ತನ್ನನ್ನು ಒಳಗೊಳ್ಳಲು ತಿರಸ್ಕರಿಸಿದಾಗ ಖಾಸಗಿ ಆಸ್ಪತ್ರೆಗೆ ಹೋಗಲು ಆಕೆಯ ಬಳಿ ಹಣವಿರಲಿಲ್ಲ. ಈ ಘಟನೆ, ಹೇಗೆ ಬಡವರು ತೀರಾ ಮೂಲಭೂತ ಆರೋಗ್ಯ ಸೇವೆಗಳಿಂದಲೂ ವಂಚಿತರಾಗಿದ್ದಾರೆ ಎನ್ನುವುದಕ್ಕೆ ಒಂದು ನಿದರ್ಶನವಷ್ಟೇ.

ಮಹಿಳೆಯರ ವಿಚಾರಕ್ಕೆ ಬಂದಾಗ ಆರೋಗ್ಯ ರಕ್ಷಣಾ ಸೇವೆಗಳು ವಿಶೇಷವಾಗಿ ತಾಯ್ತನಕ್ಕೆ ಅತಿ ಪ್ರಾಶಸ್ತ್ಯವನ್ನು ನೀಡಿ, ಹೆಣ್ಣನ್ನು ತಾಯಿಯ ಪಾತ್ರದಲ್ಲೇ ವೈಭವೀಕರಿಸುತ್ತವೆ. ತಾಯಿ ಮತ್ತು ಮಗುವಿನ ಆರೋಗ್ಯದ ಬಗ್ಗೆ ತನಗೆ ಅತ್ಯಂತ ಕಾಳಜಿ ಇದೆ ಎಂದು ತೋರಿಸಿಕೊಳ್ಳುವ ಸರ್ಕಾರಿ ಕಾರ್ಯಕ್ರಮಗಳ ಹೆಸರುಗಳನ್ನೇ ನೋಡಿ– ಜನನಿ–ಶಿಶು ಸುರಕ್ಷಾ ಕಾರ್ಯಕ್ರಮ, ಜನನಿ ಸುರಕ್ಷಾ ಯೋಜನೆ; ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ; ಸುರಕ್ಷಿತ ತಾಯಿ ಮತ್ತು ನವಜಾತ ಶಿಶುಗಳ ಆರೈಕೆಯ ಮಾರ್ಗಸೂಚಿಯನ್ನು ಅಳವಡಿಸಿಕೊಳ್ಳಲು ದಾದಿಯರು ಮತ್ತು ಇತರ ವೃತ್ತಿನಿರತ ಕಾರ್ಯಕರ್ತರಿಗೆ ತರಬೇತಿ ನೀಡುವ ದಕ್ಷತಾ ಕಾರ್ಯಕ್ರಮ; ಸಾರ್ವಜನಿಕ ಆರೋಗ್ಯ ರಕ್ಷಣಾ ಸಂಸ್ಥೆಗಳಲ್ಲಿ ಶಿಶು ಜನನ ಸಮಯದಲ್ಲಿ ಗುಣಮಟ್ಟದ ಸೇವೆಗಳನ್ನು ಒದಗಿಸಲು ರೂಪಿಸಿರುವ ಲಕ್ಷ್ಯ ಕಾರ್ಯಕ್ರಮ ಹಾಗೂ ನವಜಾತ ಶಿಶುಗಳ ತಾಯಂದಿರ ಆರೋಗ್ಯ ರಕ್ಷಣೆಯನ್ನು ಕುರಿತಂತೆ ರಾಷ್ಟ್ರೀಯ ಆರೋಗ್ಯ ಅಭಿಯಾನ ಹೊರತಂದಿರುವ ಮಾರ್ಗಸೂಚಿಗಳು–ಇವುಗಳೆಲ್ಲವೂ ಕೇಂದ್ರೀಕರಿಸುತ್ತಿರುವುದು ತಾಯಿ ಮತ್ತು ಮಕ್ಕಳ ಯೋಗಕ್ಷೇಮವನ್ನೇ!



> **ಕಳೆದ ಶತಮಾನಕ್ಕೆ ಹೋಲಿಸಿದಾಗ, ಇಂದು ಬಹುತೇಕ ಮಹಿಳೆಯರು 'ಶಿಶು ಜನನ ಅಪಾಯಕಾರಿಯಾದ ಅನುಭವ' ಎಂಬ ಪರಿಸ್ಥಿತಿಯಿಂದ ಹೊರ ಬಂದಿದ್ದಾರೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಅನೇಕ ಮಹಿಳೆಯರ ಬದುಕಿನ ಗುಣಮಟ್ಟದಲ್ಲಿ ಏರಿಕೆಯಾಗಿಲ್ಲ ಎನ್ನುವುದೂ ಸತ್ಯ ಇಂದಿಗೂ ಅವರು ರಕ್ತಹೀನತೆ, ಪೌಷ್ಟಿಕ ಆಹಾರವನ್ನು ಪಡೆಯಲು ಸಂಪನ್ಮೂಲಗಳ ಕೊರತೆ, ಸಣ್ಣ ವಯಸ್ಸಿನಲ್ಲೇ ವಿವಾಹವಾಗುವುದರಿಂದ ಪದೇ ಪದೆ ತಾಯ್ತನದ ಹೊರೆಯನ್ನು ಹೊರುವುದು, ಸುರಕ್ಷಿತ ಆರೋಗ್ಯ ರಕ್ಷಣಾ ಸೇವೆಗಳನ್ನು ಪಡೆಯಲು ಸಾಧ್ಯವಾಗದಿರುವುದು–ಇವೇ ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.**

ಈ ಕಾರ್ಯಕ್ರಮಗಳ ಪಟ್ಟಿ ನಿಜಕ್ಕೂ ಮನತಟ್ಟುವ ಹಾಗಿದೆ. ಅಷ್ಟೇ ಅಲ್ಲ, ಭಾರತದಲ್ಲಿ ಮಾತೃಮೃತ್ಯತೆ(ಶಿಶು ಜನನದ ಸಂದರ್ಭದಲ್ಲಿ ಮರಣವನ್ನಪ್ಪುವ ತಾಯಂದಿರ ಒಟ್ಟು ಸಂಖ್ಯೆ) ವರ್ಷದಿಂದ ವರ್ಷಕ್ಕೆ ಇಳಿಮುಖವಾಗುತ್ತಿದೆ. ಆದರೆ ಸಂಖ್ಯೆಗಳು ಎಲ್ಲ ಸತ್ಯಗಳನ್ನೂ ಯಾವಾಗಲೂ ಹೇಳುವುದಿಲ್ಲ. ಶಿಶು ಜನನ ಸಮಯದಲ್ಲಿ ಸಾಯುವ ತಾಯಂದಿರ ಸಂಖ್ಯೆ ಇನ್ನೂ ಒಂದು ಲಕ್ಷ ಸಜೀವ ಜನನಗಳಿಗೆ 142 ರಷ್ಟು ಇದ್ದು, 2015ರ ವೇಳೆಗೆ 'ಸಹಸ್ರಮಾನ ಅಭಿವೃದ್ಧಿ ಗುರಿಗಳು' ನಿಗದಿಪಡಿಸಿದ್ದ 109 ಗುರಿಯನ್ನು ಭಾರತ ತಲುಪಲಾಗಲಿಲ್ಲ. 2030ರ ವೇಳೆಗೆ 'ಸುಸ್ಥಿರ ಅಭಿವೃದ್ಧಿ ಗುರಿಗಳು' ಮಾತೃಮೃತ್ಯತೆ ಒಂದು ಲಕ್ಷ ಸಜೀವ ಜನನಗಳಿಗೆ 70 ಕ್ಕೂ ಕಡಿಮೆಯಿರಬೇಕು ಎಂಬ ಗುರಿಯನ್ನು ನಿಗದಿಪಡಿಸಿದೆ. ಭಾರತದ ಕೆಲ ರಾಜ್ಯಗಳಲ್ಲಿ, ಉದಾಹರಣೆಗೆ ಕೇರಳ, ತಮಿಳುನಾಡು, ದೆಹಲಿ ಈಗಾಗಲೇ ಈ ಗುರಿ ಸಾಧನೆಯಾಗಿದೆ. ಆದರೆ ಎಲ್ಲ ರಾಜ್ಯಗಳಲ್ಲಿಯೂ ಪರಿಸ್ಥಿತಿ ಏಕಪ್ರಕಾರವಾಗಿಲ್ಲ. ಇಡೀ ವಿಶ್ವದಲ್ಲಿಯೇ ಅತ್ಯಂತ ಹೆಚ್ಚಿನ ಮಾತೃಮೃತ್ಯತೆಯನ್ನು ವರದಿ ಮಾಡುತ್ತಿರುವ ದೇಶಗಳಲ್ಲಿ ನಮ್ಮ ದೇಶ ಮುಂದಿದೆ. ಶಿಶು ಜನನದಲ್ಲಿ ಸಾಯುವ ಶೇಕಡಾ 50 ರಷ್ಟು ತಾಯಂದಿರು ಇರುವ ಆರು ದೇಶಗಳಲ್ಲಿ ಭಾರತವೂ ಸೇರಿದೆ.

ಕಳೆದ ಶತಮಾನಕ್ಕೆ ಹೋಲಿಸಿದಾಗ, ಇಂದು ಬಹುತೇಕ ಮಹಿಳೆಯರು 'ಶಿಶು ಜನನ ಅಪಾಯಕಾರಿಯಾದ ಅನುಭವ' ಎಂಬ ಪರಿಸ್ಥಿತಿಯಿಂದ ಹೊರ ಬಂದಿದ್ದಾರೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಅನೇಕ ಮಹಿಳೆಯರ ಬದುಕಿನ ಗುಣಮಟ್ಟದಲ್ಲಿ ಏರಿಕೆಯಾಗಿಲ್ಲ ಎನ್ನುವುದೂ ಸತ್ಯ. ಇಂದಿಗೂ ಅವರು ರಕ್ತಹೀನತೆ, ಪೌಷ್ಟಿಕ ಆಹಾರವನ್ನು ಪಡೆಯಲು ಸಂಪನ್ಮೂಲಗಳ ಕೊರತೆ, ಸಣ್ಣ ವಯಸ್ಸಿನಲ್ಲೇ ವಿವಾಹವಾಗುವುದರಿಂದ ಪದೇ ಪದೆ ತಾಯ್ತನದ ಹೊರೆಯನ್ನು ಹೊರುವುದು, ಸುರಕ್ಷಿತ ಆರೋಗ್ಯ ರಕ್ಷಣಾ ಸೇವೆಗಳನ್ನು ಪಡೆಯಲು ಸಾಧ್ಯವಾಗದಿರುವುದು–ಇವೇ ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆರೋಗ್ಯ ಸೇವೆಗಳ ಗುಣಮಟ್ಟದಲ್ಲಿ ಎಷ್ಟೇ ಏರಿಕೆಯಾದರೂ ಅದರ ಪ್ರಯೋಜನ ಸಮಾಜದ ತಳಸ್ತರಗಳವರೆಗೂ ತಲುಪುತ್ತಿಲ್ಲ. ವ್ಯಕ್ತಿಗಳ ಆರ್ಥಿಕ ಪರಿಸ್ಥಿತಿಗಳಿಗೂ ಆರೋಗ್ಯ ರಕ್ಷಣಾ ಸೇವೆಗಳ ಲಭ್ಯತೆ–ಬಳಕೆಗೂ ನಡುವೆ ನಿಕಟ ಸಂಬಂಧವಿದೆ, ಬಡ ಕುಟುಂಬಗಳ ಮಹಿಳೆಯರೇ ಹೆಚ್ಚಾಗಿ ಶಿಶು ಜನನದ ಸಮಯದಲ್ಲಿ ಅಥವಾ ನಂತರದ ಕಾಲಘಟ್ಟದಲ್ಲಿ ಸೂಕ್ತ ಆರೈಕೆಯಿಂದ ವಂಚಿತರಾಗುವವರು ಎಂಬ ಸತ್ಯವನ್ನು ಅನೇಕ ಅಧ್ಯಯನಗಳು ಎತ್ತಿ ಹಿಡಿದಿವೆ.

ಇನ್ನು ಕಸ್ತೂರಿಯ ಸಾವಿಗೆ ಕಾರಣವಾದ ತಾಯಿ ಕಾರ್ಡಿನ ವಿಚಾರ. ಶಿಶು ಜನನದ ನಂತರ ತಾಯಿ ಹಾಗೂ ಶಿಶುವಿನ ಆರೋಗ್ಯ ರಕ್ಷಣೆಯನ್ನು ಮಾಡಿಕೊಳ್ಳಲು ಸಲಹೆ–ಸೂಚನೆಗಳನ್ನು ಒಳಗೊಂಡ ಪುಸ್ತಿಕೆಯೇ ಈ ತಾಯಿ ಕಾರ್ಡು. ಈ ಯೋಜನೆಯಡಿಯಲ್ಲಿ ಬಡತನದ ರೇಖೆಯ ಕೆಳಗೆ ಬರುವ ಕುಟುಂಬಗಳ ಮಹಿಳೆಯರು ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲೂ ಉಚಿತವಾಗಿ ಹೆರಿಗೆ ಸೌಲಭ್ಯಗಳನ್ನು ಪಡೆಯಬಹುದು. ಇತ್ತೀಚೆಗೆ ನವಜಾತ ಶಿಶುಗಳ ತಾಯಂದಿರು ಪ್ರಸವ ಪೂರ್ವದಲ್ಲಿ ಹಾಗೂ ಪ್ರಸವಾನಂತರ ಎದುರಿಸಬಹುದಾದ ಮಾನಸಿಕ ಖಿನ್ನತೆಗೆ ಕೂಡಾ ಸೂಕ್ತ ನೆರವು ಒದಗಿಸಲು ಕ್ರಮ ಕೈಗೊಳ್ಳಬೇಕೆಂಬ ಚರ್ಚೆ ಕೇಳಿ ಬರುತ್ತಿದೆ. ಈ ಕಾರ್ಡು ಇದ್ದರೆ ಜನನಿ ಸುರಕ್ಷಾ ಯೋಜನೆ, ಮಡಿಲು ಅಥವಾ ಪ್ರಸೂತಿ ಆರೈಕೆ ಕಾರ್ಯಕ್ರಮ ಮುಂತಾದುವುಗಳ ಪ್ರಯೋಜನವನ್ನು ಪಡೆಯಬಹುದು ಎಂದಿದೆಯೇ ಹೊರತು ಪ್ರಸವ ವೇದನೆಯನ್ನು ಅನುಭವಿಸುತ್ತಿರುವ ಮಹಿಳೆಯತ್ತ ಗಮನಹರಿಸಬಾರದೆಂದು ಯಾವ ಆರೋಗ್ಯ ಯೋಜನೆ ತಾನೇ ಸೂಚಿಸುತ್ತದೆ? ಕಾರ್ಡುಗಳು – ಕಾರ್ಯಕ್ರಮಗಳು ಇರುವುದು ಮಾನವ ಜೀವವನ್ನು ರಕ್ಷಿಸಲೇ ಹೊರತು ಅಂತ್ಯಗೊಳಿಸಲಲ್ಲ. ವ್ಯವಸ್ಥೆಯ ಅಲಕ್ಷ್ಯದಿಂದ ಓರ್ವ ತಾಯಿ ಸಾವನಪ್ಪಿರುವುದನ್ನು ನೋಡಿದರೆ ಏಕೆ ಬೇಕು ತಾಯ್ತನವನ್ನು ಸಂಭ್ರಮಿಸುವ ಯೋಜನೆಗಳು ಎನಿಸುವುದಿಲ್ಲವೇ?

ಆರೋಗ್ಯ ಕ್ಷೇತ್ರದಲ್ಲಿ ಭಾರತ ಸಾಧಿಸಿರುವ ಮೈಲಿಗಲ್ಲುಗಳು ಬಹುಮಟ್ಟಿಗೆ ಖಾಸಗಿ ಕ್ಷೇತ್ರಕ್ಕೆ ಸೀಮಿತವಾಗಿವೆ. ಶೇಕಡಾ 70ರಷ್ಟು ಆರೋಗ್ಯ ಮೂಲಸೌಕರ್ಯಗಳು, ಸುಸಜ್ಜಿತ ಆಸ್ಪತ್ರೆಗಳು, ಅತ್ಯಾಧುನಿಕ ತಂತ್ರಜ್ಞಾನ ಆಧಾರಿತ ಚಿಕಿತ್ಸಾ ಸೌಕರ್ಯಗಳು ಮುಂತಾದುವೆಲ್ಲ ಖಾಸಗಿ ಕ್ಷೇತ್ರದಲ್ಲಿಯೇ ಕೇಂದ್ರೀಕೃತವಾಗಿದ್ದು ಸಮಾಜದ ಅಂಚಿನಲ್ಲಿರುವ ವರ್ಗಗಳು ಸಾರ್ವಜನಿಕ ಆರೋಗ್ಯ ಸೇವೆಗಳನ್ನೇ ಅವಲಂಬಿಸಬೇಕಾಗಿದೆ. ಸುರಕ್ಷಿತ ಬದುಕು ಮೂಲಭೂತ ಮಾನವ ಹಕ್ಕು. ಅದನ್ನು ಗೌರವಿಸದ ವೈದ್ಯಕೀಯ ವ್ಯವಸ್ಥೆಯಲ್ಲಿ ಮೊದಲು ಸಾಮಾಜಿಕ ಬದ್ಧತೆಯನ್ನು ಬೆಳೆಸುವ ಅಗತ್ಯವಿದೆ. ಸಾರ್ವಜನಿಕ ಆರೋಗ್ಯ ಎಂದರೆ ಸಾಮಾಜಿಕ ನ್ಯಾಯ ಎಂಬುದನ್ನು ನಾವು ಮರೆಯಬಾರದು.

ಶಂಕರ್‌ನಾಗ್ ನೆನಪು: ಆಟೋ ಚಾಲಕರಿಗೆ ಸನ್ಮಾನ



ಮೈಸೂರು, ನ.9(ಆರ್‌ಕೆಬಿ)– ಕನ್ನಡ ರಾಜ್ಯೋತ್ಸವ ಹಾಗೂ ಕರಾಟೆ ಕಿಂಗ್ ಶಂಕರ್‌ನಾಗ್ ಜನ್ಮ ದಿನಾಚರಣೆ ಅಂಗವಾಗಿ ಜೀವಧಾರ ರಕ್ತನಿಧಿ ಕೇಂದ್ರ, ಮಂಡಿ ಮೊಹಲ್ಲಾ ನಾಗರಿಕ ವೇದಿಕೆ ಜಂಟಿಯಾಗಿ ಜೀವಧಾರ ರಕ್ತನಿಧಿ ಕೇಂದ್ರದ ಮುಂಭಾಗ ಕನ್ನಡ ಧ್ವಜ ಹಾರಿಸಿ, ಶಂಕರ್‌ನಾಗ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ನಂತರ ಹಿರಿಯ ಆಟೋ ಚಾಲಕರಾದ ಬೆಲವತ್ತದ ಆರ್.ನಾಗರಾಜ್, ಕಬೀರ್ ರಸ್ತೆಯ ಜಿ ಮಲ್ಲಯ್ಯ, ಮಂಡಿ ಮೊಹಲ್ಲಾದ ಎನ್.ವೆಂಕಟೇಶ್, ಸುಬ್ರಹ್ಮಣ್ಯ, ವೀರನಗೆರೆಯ ಕೃಷ್ಣ, ಚಾಮರಾಜ ಮೊಹಲ್ಲಾದ ರವಿ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಚಾಮರಾಜ ಕ್ಷೇತ್ರದ ಶಾಸಕ ಎಲ್. ನಾಗೇಂದ್ರ, ಕನ್ನಡ ಚಿತ್ರರಂಗದ ನಿರ್ದೇಶಕ, ನಟ, ನಿರ್ಮಾಪಕ, ಕಿರುತೆರೆ ಮೂಲಕ ಇಡೀ ಭಾರತದಲ್ಲಿ ಅಪಾರ ಕೀರ್ತಿ ಗಳಿಸಿದ ಶಂಕರ್ ನಾಗ್ ಅವರು ಕನ್ನಡದ ಅದ್ಭುತ, ಪ್ರತಿಭಾವಂತ. ಅವರ ದೂರದೃಷ್ಟಿ, ತಂತ್ರಜ್ಞಾನವನ್ನು ಕನ್ನಡ ಚಿತ್ರರಂಗ ಎಂದು ಮರೆಯಲಾಗದು. ಕನ್ನಡ ಚಿತ್ರರಂಗದ ಬೆಳವಣಿಗೆಗೆ ಅವರು ಅಪಾರ ಕೊಡುಗೆ ನೀಡಿದ್ದಾರೆ. ಅವರ ಚಿಂತನೆ, ಮೌಲ್ಯಗಳು ನಮಗೆ ಸದಾ ಆದರ್ಶವಾಗಿವೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಮೈಸೂರು ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ಶಂಕರ್‌ನಾಗ್ ದೇಶ ಕಂಡ ಅಪರೂಪದ ಕಲಾವಿದ. ಅವರ ಒಂದಾನೊಂದು ಕಾಲದಲ್ಲಿ, ಮಿಂಚಿನ ಓಟ, ಆಟೋರಾಜ, ಮಾಲ್ಗುಡಿ ಡೇಸ್ ಸಮಾಜಕ್ಕೆ ಮಹಾನ್ ಸಂದೇಶ. ಕರ್ನಾಟಕದ ಸಂಸ್ಕೃತಿ, ಸಾಹಿತ್ಯ, ಕಲೆಯನ್ನು ಮಾಲ್ಗುಡಿ ಡೇಸ್ ಮೂಲಕ ವಿಶ್ವಕ್ಕೆ ಪರಿಚಯಿಸಿದವರು ಎಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಮಂಡಿ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ವಿಶ್ವನಾಥ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೇಬಲ್ ವಿಜಿ, ಸೂರಜ್, ಚಂದ್ರು, ಸದಾಶಿವ, ಪ್ರಮೋದ್, ಅರವಿಂದ್, ಹರೀಶ್, ಶಾಂತಿ, ರವಿಕುಮಾರ್, ಶಿವಾಜಿರಾವ್ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಗಿರಿಜಾ ಕಲ್ಯಾಣ ನೃತ್ಯರೂಪಕ, 'ತಪಸ್ವಿನಿ' ನಾಟಕ

ಮೈಸೂರು, ನ.9 (ಆರ್‌ಕೆಬಿ)– ಮಕ್ಕಳು, ಮಹಿಳೆಯರಲ್ಲಿ ಅಡಗಿರುವ ಪ್ರತಿಭೆಯನ್ನು ಹೊರತರಲು ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತಿರುವ ಮೈಸೂರಿನ ಶ್ರೀ ಗುರುಕಲಾ ಶಾಲೆಯು ಅಪ್ರವರಂಬೆ ಸಹಯೋಗದಲ್ಲಿ ನ.11ರಂದು ಸಂಜೆ 4 ಗಂಟೆಗೆ ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಗಿರಿಜಾ ಕಲ್ಯಾಣ ನೃತ್ಯರೂಪಕ ಮತ್ತು ಡಾ.ಎಚ್.ಎಸ್. ರುದ್ರೇಶ್ ವಿರಚಿತ 'ತಪಸ್ವಿನಿ' ನಾಟಕ ಪ್ರದರ್ಶನ ಏರ್ಪಡಿಸಿದೆ ಎಂದು ಸಂಸ್ಥೆಯ ಕಾರ್ಯದರ್ಶಿ, ಹಿರಿಯ ರಂಗಕರ್ಮಿ ನಾ.ನಾಗಚಂದ್ರ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಂಸ್ಥೆಯು ರಾಷ್ಟ್ರೀಯ ಹಬ್ಬಗಳ ಮಹತ್ವ, ಸಾಹಿತ್ಯ, ನಾಟಕ, ಸಂಗೀತ, ಸಂಸ್ಕೃತಿ, ಪರಂಪರೆ, ಪರಿಸರ, ಭಾಷೆಯ ಬಳಕೆ, ಸಂವಹನ ಇತ್ಯಾದಿ ವಿಚಾರಗಳ ಬಗ್ಗೆ ಮಕ್ಕಳು ಮತ್ತು ಮಹಿಳೆಯರಲ್ಲಿ ಅರಿವು ಮೂಡಿಸುತ್ತಿದೆ. ಇದರ ಅಂಗವಾಗಿ ನ.11ರಂದು ನೃತ್ಯ ರೂಪಕ ಮತ್ತು ನಾಟಕ ಪ್ರದರ್ಶನ ಇರಲಿದೆ. ಸಮಾಜ ಸೇವಕ ಜೆ.ಜಯಂತ್ ಕಾರ್ಯಕ್ರಮಕ್ಕೆ ಚಾಲನೆ ನೀಡುವರು. ಶ್ರೀ ಗುರುಕಲಾ ಶಾಲೆಯ ಅಧ್ಯಕ್ಷ ಎನ್.ಧನಂಜಯ ಅಧ್ಯಕ್ಷತೆ ವಹಿಸುವರು. ಹಿರಿಯ ರಂಗಕರ್ಮಿ ನಾ.ನಾಗಚಂದ್ರ, ಡಾ.ಎಚ್.ಎಸ್.ರುದ್ರೇಶ್, ಸಂವಹನ ಪ್ರಕಾಶಕ ಡಿ.ಎನ್.ಲೋಕಪ್ಪ ಇನ್ನಿತರರು ಭಾಗವಹಿಸುವರು ಎಂದರು. ಸುದ್ದಿಗೋಷ್ಠಿಯಲ್ಲಿ ಎನ್.ಧನಂಜಯ, ಡಾ.ಎಚ್.ಎಸ್.ರುದ್ರೇಶ್, ಅರ್ಚನಾ, ಸರೋಜಿನಿ ಉಪಸ್ಥಿತರಿದ್ದರು.

ನಾಳೆಯಿಂದ ಮೂರು ದಿನ ಕಿಸಾನ್ ಸ್ವರಾಜ್ ಸಮ್ಮೇಳನ

ರಾಜವಂಶಸ್ಥ ಯದುವೀರ್, ಕೃಷಿ ಪರಿಣಿತ ಡಾ.ದೇವೇಂದ್ರ ಶರ್ಮ ಭಾಗಿ



ಮೈಸೂರು, ನ.9 (ಆರ್‌ಕೆಬಿ)– ಆಶಾ ಕಿಸಾನ್ ಸ್ವರಾಜ್ ಮತ್ತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ವತಿಯಿಂದ ಮುಕ್ತ ವಿವಿ ಆವರಣದಲ್ಲಿ ನ.11ರಿಂದ 13ರವರೆಗೆ ಮೂರು ದಿನ ಕಿಸಾನ್ ಸ್ವರಾಜ್ ಸಮ್ಮೇಳನ ಸಾವಯವ ಕೃಷಿಕರ ಮಹಾಮೇಳ ಹಮ್ಮಿಕೊಳ್ಳಲಾಗಿದೆ ಎಂದು ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇಂದಿನ ಜಾಗತಿಕ ತಾಪಮಾನ ಹೆಚ್ಚಳ, ಬಹಳಷ್ಟು ಮಂದಿ ಕೃಷಿಕರು ಕೃಷಿಯಿಂದ ವಿಮುಖರಾಗುತ್ತಿರುವುದರ ನಡುವೆ ಮತ್ತೆ ಕೃಷಿ ಪುನಶ್ಚೇತನ, ಪರಿಸರಾಧಾರಿತ ಕೃಷಿಯನ್ನು ಕೇಂದ್ರವಾಗಿರಿಸಿಕೊಂಡು ಈ ಸಮ್ಮೇಳನ ನಡೆಯುತ್ತಿದೆ. ದೇಶದಾದ್ಯಂತದಿಂದ ಸುಮಾರು ಎರಡು ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಳ್ಳುತ್ತಿದ್ದಾರೆ ಎಂದರು. ಸುಸ್ಥಿರ ಹಾಗೂ ಸಮಗ್ರ ಕೃಷಿ ಮೈತ್ರಿಕೂಟ ಆಯೋಜಿಸುತ್ತಿರುವ 5ನೇ ಕಿಸಾನ್ ಸ್ವರಾಜ್ ಸಮ್ಮೇಳನದಲ್ಲಿ ವಿವಿಧ ರಾಜ್ಯಗಳ ಸಾವಯವ ಊಟ, ಬೀಜ ಉತ್ಸವ, ಗೆಡ್ಡೆ ಗೆಣಸು ಮೇಳ, ಕೃಷಿ ಗೋಷ್ಠಿ, ಸಾವಯವ ವಸ್ತುಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮಗಳು ಇನ್ನಿತರೆ ಕಾರ್ಯಕ್ರಮಗಳು ಇರಲಿವೆ. ದೇಶದ ವಿಸ್ತಾರವಾದ ಕೃಷಿ ವೈವಿಧ್ಯತೆ ಪ್ರದರ್ಶಿಸುವ ಬಹುದೊಡ್ಡ ಬೀಜ ಮೇಳ, ನೂರಾರು ವರ್ಷಗಳ ತಳಿಗಳ ಬಾಳೆ, ಗೆಡ್ಡೆ ಗೆಣಸು ಪ್ರದರ್ಶನ ಇರುತ್ತದೆ. ಸಮ್ಮೇಳನದ ಯಶಸ್ಸಿಗೆ ಎಲ್ಲರೂ ಸಹಕರಿಸುವಂತೆ ಮನವಿ ಮಾಡಿದರು. ಸಮಿತಿ ಸದಸ್ಯ ಯು.ಎನ್. ರವಿಕುಮಾರ್ ಮಾತನಾಡಿ, ಸಮ್ಮೇಳನದಲ್ಲಿ ಪರಿಸರಾಧಾರಿತ ಕೃಷಿಯನ್ನು ಕೇಂದ್ರವಾಗಿಟ್ಟುಕೊಂಡು ಮೂರು ದಿನಗಳಲ್ಲಿ ನಡೆಯುವ ಗೋಷ್ಠಿಗಳಿವೆ. ಸಾರ್ವಜನಿಕರು ಪಾಲ್ಗೊಳ್ಳಬಹುದಾದ ಹಲವಾರು ಕಾರ್ಯಕ್ರಮಗಳಿವೆ. ನಗರ ತೋಟಗಾರಿಕೆ ಕಾರ್ಯಾಗಾರ, ಕೃಷಿ, ಉತ್ಪನ್ನಗಳನ್ನು ಬಳಸಿ ಕಲಾತ್ಮಕ ಮತ್ತು ಪರಿಸರಸ್ನೇಹಿ ವಸ್ತುಗಳ ತಯಾರಿಕೆ, ಪ್ರಾತ್ಯಕ್ಷಿಕೆ, ಸಹಜ ಬಣ್ಣ ತಯಾರಿಕಾ ಪ್ರಾತ್ಯಕ್ಷಿಕೆ, ಸಾಬೂನು ತಯಾರಿಕೆ ಮುಂತಾದವನ್ನು ಆಯೋಜಿಸಲಾಗಿದೆ. ಅಲ್ಲದೆ ಎರಡು ದಿನ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳು ಇರಲಿವೆ ಎಂದರು.

ದೇಶದ ವಿಸ್ತಾರವಾದ ಕೃಷಿ, ವೈವಿಧ್ಯತೆಯನ್ನು ಪ್ರದರ್ಶಿಸುವ ಬಹುದೊಡ್ಡ ಬೀಜ ಮೇಳ, ನೂರಾರು ತಳಿಗಳ ಬಾಳೆ, ಗೆಡ್ಡೆ–ಗೆಣಸು ಪ್ರದರ್ಶನ ಸಮ್ಮೇಳನದ ಭಾಗವಾಗಿದೆ. ಸಮ್ಮೇಳನದಲ್ಲಿ 68 ಮಳಿಗೆಗಳಿರಲಿದ್ದು, 19 ವಿವಿಧ ಗೋಷ್ಠಿಗಳು ನಡೆಯಲಿವೆ ಎಂದು ಹೇಳಿದರು.

ನ.11ರಂದು ಬೆಳಗ್ಗೆ 10 ಗಂಟೆಗೆ ಮೈಸೂರು ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಸಮ್ಮೇಳನದ ಉದ್ಘಾಟನೆ ನಡೆಯಲಿದೆ. ಇದರಲ್ಲಿ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮುಕ್ತ ವಿವಿ ಕುಲಪತಿ ಭಾಗವಹಿಸಲಿದ್ದಾರೆ. 13ರಂದು ಮಧ್ಯಾಹ್ನ ಸಮ್ಮೇಳನದ ಘೋಷಣೆ ಮತ್ತು ಸಮಾರೋಪ ನಡೆಯಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಮ್ಮೇಳನ ಅಯೋಜನ ಸಮಿತಿಯ ಕೃಷ್ಣಪ್ರಸಾದ್, ಕವಿತಾ ಶ್ರೀನಿವಾಸನ್ ರಾಷ್ಟ್ರೀಯ ಕಿಸಾನ್ ಸ್ವರಾಜ್ ಸಮ್ಮೇಳನ ಆಯೋಜನಾ ಸಮಿತಿಯ ಸದಸ್ಯ ಕಪಿಲ್ ಶಾ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮಾರಾಟಕ್ಕಿದೆ
ಅಗ್ರಹಾರ ಬಸವೇಶ್ವರ ರಸ್ತೆ, 5ನೇ ಕ್ರಾಸಿನಲ್ಲಿರುವ ಮನೆ ನಂ.2249 K-11 ಸಂಖ್ಯೆಯ ಮನೆ ಮಾರಾಟಕ್ಕಿದೆ. ಅಳತೆ 30x42 ಅಡಿ, ಸಿಂಗಲ್ ಬೆಡ್ ರೂಂನ 3 ಮನೆ, ಎರಡು ಬೆಡ್ ರೂಂನ 2 ಮನೆ. ಆಸಕ್ತರು ಸಂಪರ್ಕಿಸುವ ದೂರವಾಣಿ ಸಂಖ್ಯೆ:
9972596865 / 8494927949

WANTED
PE Teacher, NST and Hostel warden for reputed institution Send your resume through Whats App / Message.
Contact No.:
8971577685 / 9980631121

WANTED
1) Accountant
2) Graphic designer (Fresher or experienced)
3) Helper boys (Sslc, Puc, ITI pass or fail)
Contact 9448067939 9739569260

EXCELLENT TRAINING FOR DOGS ALL BREEDS

- Obedience • Nature
- Home Manners
- Guarding (Security)
- Show Training & also Boarding Dogs.

Vinod, Dog Trainer
Mob: 9148512354

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC
Sales & Service
Contact: Srinivas
9379699229

ಮನೆ ಭೋಗ್ಯಕ್ಕಿದೆ
2ಬಿಎಚ್‌ಕೆ, ಕೆಳಮಹಡಿ, ಮೊದಲನೇ ಮಹಡಿ # 694, 5ನೇ ಅಡ್ಡರಸ್ತೆ, ಶಾಂತವೇರಿಗೋಪಾಲಗೌಡ ನಗರ
ಸಂಪರ್ಕಿಸಬೇಕಾದ ಮೊಬೈಲ್
9148180180 / 9535355008

ಹೊಸಮನೆ ಮಾರಾಟಕ್ಕಿದೆ
ಮೂಡಾಸೈಟ್ 30x40, N/F, 3BHK, ಮಾನಸಿ ನಗರಕ್ಕೆ ಹೊಂದಿಕೊಂಡಂತೆ, ದೇವೇಗೌಡ ಸರ್ಕಲ್‌ಗೆ ಹತ್ತಿರ, ರೂ.92 ಲಕ್ಷಗಳು ನೆಗೋಷಿಯೇಬಲ್
ಸಂಪರ್ಕಿಸಿ
9535184616

ಮಾರುವವರು- ಕೊಳ್ಳುವವರು
18x40, 20x30, 30x40, 40x60, 50x80
ಎಲ್ಲಾ ಅಳತೆಯ ಹೊಸಮನೆ ಹಳೇಮನೆ ಸೈಟ್ ಮೈಸೂರು ನಗರದ ಎಲ್ಲಾ ಬಡಾವಣೆಗಳಲ್ಲಿ ಮಾರುವವರು ಕೊಳ್ಳುವವರು ಸಂಪರ್ಕಿಸಿ
8618495118

ಮನೆ ಮಾರಾಟಕ್ಕಿದೆ
30x40 ಡ್ಯೂಪ್ಲೆಕ್ಸ್ ಮನೆ ದಿಶಾ ಲೇಔಟ್, ವಿಜಯನಗರ 4ನೇ ಹಂತದ ಹತ್ತಿರ ಆಲ್ ಟೆಕ್, 3 ಬೆಡ್ ರೂಂ ಇಟಾಲಿಯನ್ ಕಿಚನ್. ಬೆಲೆ 86 ಲಕ್ಷ. ಸಂಪರ್ಕಿಸಿ:
9945042875

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕೆ ಹುಡುಗರು / ಹುಡುಗಿಯರು ಬೇಕಾಗಿದ್ದಾರೆ.
ಸಂಬಳ: 12,000/–
8892258814

Print Media Solution
Graphic Design Coaching Centre

WHAT YOU CAN LEARN: Concept of Design, Color Theory, DTP, Logo Design, Ads Design, Brochure Design, Leter Head Design, Flyer Design, Photo Editing
Software usec: Nudi Typing + Photoshop + Corel Draw

Contact : 0821 - 3594049
81053 63691, 93808 35891
Agrahara

ತಕ್ಷಣ ಬೇಕಾಗಿದ್ದಾರೆ
PART TIME /FULL TIME/ HOME -BASED
ecode GAS SAFE — All Taluk & Dist

EDUCATION ವಿದ್ಯಾರ್ಹತೆ	WORK TIME ಕೆಲಸದ ಸಮಯ	SALARY ಸಂಬಳ
SSLC,PUC any DEEGREE	4 HOURS 8 HOURS	8000/- UP TO 19000/-

ಮೊದಲು ಬಂದವರಿಗೆ ಆದ್ಯತೆ — ಗ್ಯಾಸ್ ಸೇಫ್ ಬಗ್ಗೆ ಮನೆಯಲ್ಲಿ ಕುಳಿತು ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ Android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226 / 7676779932

GOLD COMPANY
ಗಿರವಿ ಚಿನ್ನಾಭರಣ ಖರೀದಿ ಒಂದು ಗ್ರಾಂ ಚಿನ್ನಕ್ಕೆ 5100
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು, ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಂಡು ಉಳಿದ ಹಣ ತಕ್ಷಣಕೊಡುತ್ತೇವೆ. ಕೂಡಲೇ ಸಂಪರ್ಕಿಸಿ – (T&C)
9964522225

SITES FOR SALE
30x40 Sites
Bank Loan upto 80%, Near Gurur Bus Stop, Ramabainagar, Mysore. DTCP approved (Corporation limits) 1.5 kms from J P Nagar Ring Road.
8660105902

We are Human Resources consultants
We are Human Resources consultants, we provide Security services, Housekeeping, Gardening, technical and Non Technical, construction works, also we provide employees according to companies requirements for every sector, Please Call:
9035383823 / 9620920303

ತಕ್ಷಣ ಬೇಕಾಗಿದ್ದಾರೆ
ಮಾಲ್ ಆಫ್ ಮೈಸೂರು ಹಾಗೂ ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿರುವ (JOCKEY) ಜಾಕಿ ಶೋರೂಂನಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ಉತ್ತಮ ವೇತನ ಸೌಲಭ್ಯವಿರುತ್ತದೆ. ವಿದ್ಯಾರ್ಹತೆ: PUC ಮೇಲ್ಪಟ್ಟು, ವಯಸ್ಸಿನ ಮಿತಿ: 20 ರಿಂದ 28 ವರ್ಷ
8431588337

ಕೇರಳ ಶ್ರೀ ಭಗವತಿ ಮಹಾಮಾಂತ್ರಿಕ ಜ್ಯೋತಿಷ್ಯರು
ಪಂಡಿತ್ ಗುರುನಂದನ್
ಮೊ.: 9353250462
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ನಿಮ್ಮ ಸಮಸ್ಯೆಗಳಾದ ಪ್ರೇಮ ವಿವಾಹ, ಪತಿ–ಪತ್ನಿ ಕಲಹ, ವ್ಯಾಪಾರ, ಡೈವರ್ಸ್, ಸಾಲಬಾಧೆ, ಶತ್ರುಕಾಟ, ಲೈಂಗಿಕ ಸಮಸ್ಯೆ, ಸಂತಾನ ಫಲ, ಮದುವೆ ಕಾರ್ಯದಲ್ಲಿ ವಿಘ್ನ, ಅತ್ತೆ, ಸೊಸೆ ಕಲಹ, ನಿಮ್ಮ ಮನದಾಳದ ಯಾವುದೇ ಗುಪ್ತ ಸಮಸ್ಯೆ ಇದ್ದರೆ ಜೀವನದಲ್ಲಿ ಜಿಗುಪ್ಸೆ ಹೊಂದಿದ್ದರೆ ಕೂಡಲೇ ಸಂಪರ್ಕಿಸಿ 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ನಿಮ್ಮ ಸಮಸ್ಯೆಗಳಿಗೆ ಫೋನಿನ ಮೂಲಕ ಸಂಪರ್ಕಿಸಿ. ವಿಳಾಸ ಮೈಸೂರು

TV ಕೆಟ್ಟಿದೆಯೇ?
LCD, LED TV
ಫ್ರಿಡ್ಜ್, ವಾಷಿಂಗ್ ಮೆಷಿನ್, Micro Oven
Doorstep ಸರ್ವೀಸ್ ಮಾಡಿಕೊಡಲಾಗುತ್ತದೆ
ನುರಿತ ಸರ್ವೀಸ್ ಇಂಜಿನಿಯರ್‌ಗಳಿಂದ ಅತ್ಯಾಧುನಿಕ ಯಂತ್ರ ಬಳಸಿ LCD, LED ಪ್ಯಾನಲ್ ಬಾಂಡಿಂಗ್ ಕಡಿಮೆ ದರದಲ್ಲಿ ಮಾಡಿಕೊಡಲಾಗುತ್ತದೆ
ತೇಜು ಎಲೆಕ್ಟ್ರಾನಿಕ್ಸ್ ತ್ಯಾಗರಾಜ ರಸ್ತೆ, ಅಗ್ರಹಾರ
9342114069

ಹೊಸ ಚೀಟಿಗಳ ಪ್ರಾರಂಭ
ಸೀಐ ನರಸಿಂಹಸ್ವಾಮಿ ಚಿಟ್ಸ್ (ಹಂ) ಪ್ರೈಲಿ., ಮೈಸೂರು / ಹಾಸನ.

ಚೀಟಿ ಮೊತ್ತ	ತಿಂಗಳು	ತಿಂಗಳ ಕಂತು	3ನೇ ತಿಂಗಳಿಂದ
1 ಲಕ್ಷ	25	4000/–	3000/–
2 ಲಕ್ಷ	25	8000/–	6000/–
5 ಲಕ್ಷ	25	20,000/–	15,000/–
10 ಲಕ್ಷ	50	20,000/–	15,000/–
10 ಲಕ್ಷ	100	10,000/–	7,500/–
25 ಲಕ್ಷ	100	25,000/–	18,750/–

7892303484 / 8749077453

ಬೋಳು ತಲೆಯ ಸಮಸ್ಯೆಯೇ?

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಶಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Ankethana Road, kuvempunagar, Mysuru
MYSURU 9611028523 BANGALORE 9343142258

WANTED
Female Receptionist For CBSE School With School Working Experience and Good English Communication Skills Located In Hebbal, Mysuru
9481123959
SEND YOUR RESUME WITH PASSPORT SIZE PHOTO TO EMAIL ID : career@kncinnovativeglobalschool.com

ಬೇಕಾಗಿದ್ದಾರೆ
ಟ್ರೆಂಡ್ಸ್ ಸೆರಾಮಿಕ್ ಅಂಡ್ ಸಾನಿಟೇಷನ್ ಬೋಗಾದಿ ಮೈಸೂರು, ಶೋರೂಂನಲ್ಲಿ ಕೆಲಸ ಮಾಡಲು ಹುಡುಗ ಮತ್ತು ಹುಡುಗಿಯರು ವಿದ್ಯಾಭ್ಯಾಸ SSLC, PUC, Degree, ITI, ಆಕರ್ಷಕ ವೇತನ ನೀಡಲಾಗುವುದು. ಸಂಪರ್ಕಿಸಿ:
9448361818
9108668282

HOUSE FOR RENT
Two BHK Ground Floor, House in 'H' Block, R.K.Nagar for Veg Only.
8073049940

SITE FOR SALE @ NANJANGUD TOWN
40x60, East Facing, (Near Nestle Layout) Deveerammanahalli, Mysuru ooty Road, (opposite to JSS College Road) Expected Rs. 2500/- per SQ FT, Brokers Excuse Please. Interested, Please contact at
7795861715

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಶ್ಶಕ್ತಿ, ಶತ್ರುಬಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಬಾಧೆ, ಆರೋಗ್ಯ ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋಚರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಬಾಧೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

ಮನೆ ಮಾರಾಟಕ್ಕಿದೆ
20x30 (MUDA) ನೆಲಮಹಡಿ ಮತ್ತು ಮೊದಲನೇ ಮಹಡಿ ನಾಯ್ಡು ಸ್ಟೋರ್ ಹತ್ತಿರ, ಬಲಮುರಿ ಗಣಪತಿ ದೇವಸ್ಥಾನದ ಹಿಂಭಾಗ ರಸ್ತೆ, ಶ್ರೀರಾಂಪುರ 2ನೇ ಹಂತ, ಮೈಸೂರು
ಬೆಲೆ 70 ಲಕ್ಷ,
ಮಧ್ಯವರ್ತಿಗಳಿಗೆ ಅವಕಾಶ ಇಲ್ಲ
9019176858

ಭೋಗ್ಯಕ್ಕಿದೆ
ಚಿಕ್ಕ ಕುಟುಂಬಕ್ಕೆ ಚಿಕ್ಕ ಮನೆ (ಇಟಾಲಿಯನ್ ಕಿಚನ್) 2ನೇ ಅಂತಸ್ತು, 1 BHK ದಟ್ಟಗಳ್ಳಿಯಲ್ಲಿ 3ನೇ ಹಂತ ಪಂಚಮುಖಿ ಗಣಪತಿ ದೇವಸ್ಥಾನದ ಹತ್ತಿರ, ಮೈಸೂರು.
7892719006

HOUSE FOR LEASE OR SALE
20x40, BHK Duplex House, SE/F Door, RMPR Layout, Near Hootagalli KHB Colony, Brokers Excuse. Contact:
9353199792

REQUIRMENT
Receptionist Female /Male
call 7676691611
call After 11 AM

WANTED SITE
Bogadhi Surrounding
Call 9482883566

2 SITES FOR SALE
(30x40) @ Trimurthy Nagar, Near Acharya Vidyakula & Central St. Joseph School, Mysore-Hunsur Road 12 Lakhs Each
9538839926

BED REPAIRS
We Undertake all Kinds of beds. Cotton Bed Machine Cleaning, Foam Bed, Coir bes, Kurlon, duroflex, Sleepwell Repairs and exchange. and Window Mesh is done here Home Delivery Free
8861359392

ನಿವೃತ್ತ ನೌಕರರಿಗೆ ಉದ್ಯೋಗ
ನಿವೃತ್ತ ನೌಕರರಿಗೆ ಉದ್ಯೋಗ, ವಿದ್ಯಾರ್ಹತೆ SSLC, PUC , Degree ವೇತನ: 10,000/–, 20,000/–, 30,000/– ಸಂದರ್ಶನಕ್ಕೆ ಹಾಜರುಪಡಿಸಬೇಕಾದ ದಾಖಲೆಗಳು. 1) ವಿದ್ಯಾರ್ಹತೆ ಅಂಕ ಪತ್ರ, 2) ಆಧಾರ್ ಕಾರ್ಡ್ 3) ಪಾನ್ ಕಾರ್ಡ್ 4) ಬ್ಯಾಂಕ್ ಪಾಸ್ ಪುಸ್ತಕ 5) ಪಾಸ್ ಪೋರ್ಟ್ ಅಳತೆ ಫೋಟೋ. ಸಂಪರ್ಕಿಸಿ
6364245966

ತಕ್ಷಣ ಬೇಕಾಗಿದ್ದಾರೆ
ಮೇಟಗಳ್ಳಿ ಕುವೆಂಪುನಗರ, ಸರಸ್ವತಿಪುರಂ ಮತ್ತು ಅಪೋಲೋ ಆಸ್ಪತ್ರೆ ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC & ಮೇಲ್ಪಟ್ಟು, ಸಂಬಳ: 15,500/-, ವಯೋಮಿತಿ:– 45 ವರ್ಷದ ಒಳಗೆ, ESI, PF ಊಟ, ತಿಂಡಿ ಸೌಲಭ್ಯ ಇರುತ್ತದೆ. ಸಂಪರ್ಕಿಸ ಬೇಕಾದ ಸಂಖ್ಯೆಗಳು:
9880727819 / 9620777819

ದಿನಸಿ ಅಂಗಡಿ ಮಾರಾಟಕ್ಕಿದೆ
ಚೆನ್ನಾಗಿ ನಡೆಯುತ್ತಿರುವ (ದಿನಸಿ ಅಂಗಡಿ) ಜೈ ಮಾರುತಿ ಭಂಡಾರ್ ಪ್ರಾವಿಷನ್ ಸ್ಟೋರ್, 100/1, ಕೆ.ಆರ್.ಮೊಹಲ್ಲಾ, ತ್ಯಾಗರಾಜ ರಸ್ತೆ, ಚಿಕ್ಕಾಂಜನೇಯ ದೇವಸ್ಥಾನ ಮುಂಭಾಗ, ಮೈಸೂರು – 570004 (ಬೆಲೆ 3 ಲಕ್ಷಕ್ಕೆ)
7022135656
9538338623

ಬೇಕಾಗಿದ್ದಾರೆ
Shwetha Enterprises ITI, Fitter Electrician, Mechanical, Experience Supervisor, house Keeping, Telecaller, Boys/Girls SSLC, PUC Pass or Fail above 23, Below 30, Contact
9900191076, 9686267833

ವಾಣಿಜ್ಯ ನಿವೇಶನ ಮಾರಾಟಕ್ಕಿದೆ
ಹೆಚ್.ಡಿ.ಕೋಟೆ ತಾಲ್ಲೂಕಿನ, ಹ್ಯಾಂಡ್ ಪೋಸ್ಟ್‌ನ ಆರ್‌ಪಿ ಸರ್ಕಲ್, ಮೈಸೂರು ರಸ್ತೆಯಲ್ಲಿ, ಅಳತೆ 45x65 ಪ್ರತಿ ಚದರ ದಡಿಗೆ 6000/–(Negotiable) ಮಂಜುನಾಥ ಕಲ್ಯಾಣ ಮಂಟಪದ ಎದುರುಗಡೆ
9036936360
9483526265

ಬೇಕಾಗಿದ್ದಾರೆ
ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary + 10,000/- Incentive
8884171888

ತಕ್ಷಣ ಬೇಕಾಗಿದ್ದಾರೆ
URGENT REQUIREMENTS
ಮೈಸೂರು, ಚಾಮರಾಜನಗರ ಮತ್ತು ನಂಜನಗೂಡಿನಲ್ಲಿ ಕಾರ್ಯನಿರ್ವಹಿಸಲು ತ್ವರಿತ ನೇಮಕಾತಿಗಾಗಿ ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ವಸತಿ ಸೌಲಭ್ಯ, ಉತ್ತಮ ವೇತನ ಶ್ರೇಣಿ ಮತ್ತು ಎಲ್ಲಾ ಶಾಸನಬದ್ಧ ಸೌಲಭ್ಯಗಳು ದೊರೆಯುತ್ತದೆ. ಆಸಕ್ತ ಅಭ್ಯರ್ಥಿಗಳು ಈ ಕೆಳಕಂಡ ದೂರವಾಣಿ ಸಂಖ್ಯೆಯನ್ನು ಕೂಡಲೇ ಸಂಪರ್ಕಿಸಿ:
Mob: 6364857751, 6364857752, 6364857753

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
14/11: ಗುಜರಾತ್, ನಾಗನಾಥ್, ಸೋಮನಾಥ್, ದ್ವಾರಕ, ಮಾತೃಗಯಾ, ಸರ್ದಾರ್ ವಲ್ಲಭಭಾಯಿ ಪಟೇಲ್ ಸ್ಟ್ಯಾಚ್ಯು, 1/12: ಕೇರಳ, ಗುರುವಾಯೂರು, ಕೊಚ್ಚಿನ್, ಅಲೆಪ್ಪಿ, ತ್ರಿವೆಂಡ್ರಂ. 14/12: ಕಾಶಿ, ಗಯಾ, ಬುದ್ಧಗಯಾ, ಪ್ರಯಾಗ್‌ರಾಜ್, ಅಯೋಧ್ಯೆ. 10/12: ಪುರಿ ಜಗನ್ನಾಥ್, ಕೋನಾರ್ಕ್ ಸೂರ್ಯ ದೇವಸ್ಥಾನ, ಭುವನೇಶ್ವರ್. 13/12: ಎಂಪಿ 2 ಜ್ಯೋತಿರ್ಲಿಂಗ, ಉಜ್ಜಯಿನಿ, ಮಹಾಕಾಳೇಶ್ವರ, ಓಂಕಾರೇಶ್ವರ, ಜ್ಯೋತಿರ್ಲಿಂಗ.
9964527782, 9591017782

ತಕ್ಷಣ ಬೇಕಾಗಿದ್ದಾರೆ
ITI or Eletronics, Experience, Boys only, Daily Wages (ದಿನಕೂಲಿ)
9448546024

ಮರುಮದುವೆಗೆ ವಧು ಬೇಕು
44 ವರ್ಷದ, 5.8 ಎತ್ತರದ Diploma (CS) ಕಲಿತು, ಶಿಕ್ಷಣ ಇಲಾಖೆಯಲ್ಲಿ (ಸರಕಾರಿ) ಕೆಲಸದಲ್ಲಿರುವ ಬ್ರಾಹ್ಮಣ ವಿಚ್ಛೇದಿತ ವರನಿಗೆ, SSLC, PUC, Any Degree ಕಲಿತಿರುವ ಸ್ವಜಾತಿಯ / ಯಾವುದೇ ಲಿಂಗಾಯತ / ವಿಶ್ವಕರ್ಮ / ವಿಧವೆ / ವಿಚ್ಛೇದಿತ / ಮಕ್ಕಳಿರದ ಒಳೆಯ ಮನೆತನದ ಸಸ್ಯಹಾರಿ ವಧು ಬೇಕು. ಸಂಪರ್ಕಿಸಿ. ಮೈಸೂರು.
9591656145

ಸೈಟು ಮಾರಾಟಕ್ಕಿದೆ
30x30 - S/F, 30x50 - W/F
40x60 - N/F, 40x60 - W/F
ಹೊಸ R.T. ನಗರ ಹತ್ತಿರ
30x40 - S/F ವರಕೋಡ್ ಹತ್ತಿರ
30x50 - E/F ವರಕೋಡ್ ಹತ್ತಿರ
ಬನ್ನೂರು ರೋಡ್
Mob: 9886507555

WANTED
Marketing Executive
10 Nos. Age below 30
Salary 10,000 + TA + Incentive
Team Leaders - 05 Nos.
Salary 15,000 + TA + Incentive.
6362875416, 9620062389

CHANGE OF NAME
I, Mohammed Muzzamil, residing at #472/3, Udayagiri, Mysore-570 019, have changed my name as Mohammed Muzamil, on my own free will, in front of Notary C.R. Seetharam on 8.11.2022. I declare that I shall at all times hereafter in all records, deeds and writings and in all proceedings, dealings and transactions, private as well as upon all occasions whatsoever use and sign the name of Mohammed Muzamil.
Sd/- Mohammed Muzamil

ಪ್ರಮಾಣ ಪತ್ರ
ಮೈಸೂರು ಜಿಲ್ಲೆ, ತಿ. ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಆಲಗೂಡು ಗ್ರಾಮದಲ್ಲಿ ವಾಸವಾಗಿರುವ ಶ್ರೀ ನಂಜುಂಡ ನಾಯಕ ಬಿನ್ ಶ್ರೀ ಲೇಟ್ ಗೂಳಯ್ಯ ಆದ ನಾನು ಪ್ರಮಾಣೀಕರಿಸುವುದೇನೆಂದರೆ, ಆದಾಗಿ ನಾನು ಮೇಲ್ಕಂಡ ವಿಳಾಸದಲ್ಲಿ ಖಾಯಂ ನಿವಾಸಿಯಾಗಿದ್ದು, ನನ್ನ ಸರಿಯಾದ ಹೆಸರು ನಂಜುಂಡ ನಾಯಕ ಬಿನ್ ಲೇಟ್ ಗೂಳಯ್ಯ ಆದರೆ ಬ್ಯಾಂಕ್ ಖಾತೆಯಲ್ಲಿ ನಂಜುಂಡ ಬಿನ್ ಲೇಟ್ ಗೂಳಯ್ಯ ಎಂದು ತಪ್ಪಾಗಿ ನಮೂದಾಗಿರುತ್ತದೆ. ನಂಜುಂಡ ನಾಯಕ ಮತ್ತು ನಂಜುಂಡ ಎಂಬ ಎರಡು ಹೆಸರು ನನ್ನದೇ ಆಗಿರುತ್ತದೆ ಈ ಎರಡು ಹೆಸರನ್ನು ಹೊಂದಿರುವ ಒಬ್ಬನೇ ವ್ಯಕ್ತಿ ನಾನೇ ಆಗಿರುತ್ತೇನೆ ಎಂದು ನೋಟರಿ ರಾಮಚಂದ್ರ ರವರ ಎದುರು ದಿನಾಂಕ 18.10.2022 ರಂದು ಪ್ರಮಾಣೀಕರಿಸುತ್ತೇನೆ.
ಸಹಿ/– ನಂಜುಂಡ ನಾಯಕ

ಸೈಟು ಮಾರಾಟಕ್ಕಿದೆ
ಕೆ.ಆರ್. ನಗರದ ವಿಜಯನಗರ ಬಡಾವಣೆಯ 3ನೇ ವಾರ್ಡ್‌ನಲ್ಲಿ ಪೂರ್ವಕ್ಕೆ ರಸ್ತೆಯಿರುವ MIG 55x45 ಕಾಂಪೌಂಡ್ ಮತ್ತು ಬೋರ್‌ವೆಲ್ ಹೊಂದಿರುವ ಖಾಲಿ ನಿವೇಶನ ಮಾರಾಟಕ್ಕಿದೆ.
Mob: 9060013456

ಹೊಸ ಮನೆ ಮಾರಾಟಕ್ಕಿದೆ
1,400 ಅಡಿ ಹಾಗೂ ಸೈಟುಗಳು ಮಾರಾಟಕ್ಕಿವೆ. ಶ್ರೀರಾಂಪುರ ರಿಂಗ್ ರೋಡ್, ಮೈಸೂರು.
8050345574

ಹೊಸ ಮನೆ ಮಾರಾಟಕ್ಕಿದೆ
30x40 ಪೂರ್ವ ದಿಕ್ಕು ಲಾಲ್‌ಬಹದ್ದೂರ್ ಶಾಸ್ತ್ರಿನಗರದಲ್ಲಿ ಮೈಸೂರು. ಸಂಪರ್ಕಿಸಿ.
9986737936
8749092901

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರ ನಾಲ್ವರ ದೈವ ಚೌಡಿಕ್ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿವಾಹ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸುಬರ್ಬ್ ಬಸ್‌ಸ್ಟಾಂಡ್ ಪಕ್ಕ, ಇರ್ವಿನ್ ರೋಡ್, ಅಂದ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಿಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ವಾಹನಗಳು ಬೇಕಾಗಿವೆ
ಹೈದರಾಬಾದ್, ಚೆನ್ನೈ ಮತ್ತು ಮಂಗಳೂರು ಕಂಪನಿಗಳಿಗೆ ಮೆಟೀರಿಯಲ್ ಸರಬರಾಜು ಮಾಡಲು ಹೊಸ ಬೊಲೆರೊ ಪಿಕಪ್ ವಾಹನಗಳು ಬೇಕಾಗಿವೆ. ಕಿಲೋ ಮೀಟರ್‌ಗೆ 23/– ರೂ.ಗಳು. (ಆಫೀಸ್ ಇನ್ ಚಾರ್ಜ್ 1 ಬೇಕಾಗಿದ್ದಾರೆ.) ಆಫೀಸ್ ಹಾಸನ:
9986769789

ಬೇಕಾಗಿದ್ದಾರೆ
ಆಫೀಸ್ ಬಾಯ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಸಂಬಳ 15000/-
Ph.9380142144

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

WANTED
We require any graduate PUC Commerce and B.Com fresh Graduates, who can operate Tally.
Address: Mystech Machines #Q113, 4th Cross, 8th Main, Hebbal, Industrial Estate, Mysore - 570016
7204445679 / 8123458382

ಮನೆ ಬಾಡಿಗೆಗೆ ಇದೆ
ಸಿದ್ದಲಿಂಗೇಶ್ವರ ಬಡಾವಣೆ, 2ನೇ ಹಂತ, ಜೆ.ಪಿ.ನಗರ ರಿಂಗ್ ರೋಡ್
9845916545

ಆದಿ ಕರ್ನಾಟಕ (SC)
ವಧು–ವರರ ಮಾಹಿತಿ ಕೇಂದ್ರ
BA, B.Sc., B.Com., MA, M.Sc, MBA, MBBS, Engineers, Ph.D, B.Ed., M.Ed.
ವಿವಾಹ ನೋಂದಣಿಗೆ ಕರೆಮಾಡಿ.
Mob: 91647-43059

ಬೇಕಾಗಿದ್ದಾರೆ
ಸಂಬಳ 8000 – 10000. ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಟೀಮ್ ಲೀಡರ್ ಬೇಕಾಗಿದ್ದಾರೆ. (ಕಂಪ್ಯೂಟರ್ ಜ್ಞಾನವುಳ್ಳ) – 10000 field work ಮಾಡಲು ಬೇಕಾಗಿದ್ದಾರೆ (ಸಂಬಳ 12000.
Mob: 8150005111
ಸ್ಥಳ: ಎನ್.ಆರ್. ಮೊಹಲ್ಲಾ & ಚಾಮುಂಡಿಪುರಂ ಜಿಟಿಆರ್. ಹೋಟೆಲ್ ಹತ್ತಿರ

BRIDE / GROOMS MATCH MAKERS
ವಧು / ವರರ / ಮದುವೆ ಕೇಂದ್ರ
ಎಲ್ಲಾ ಜಾತಿಯ upto 65 years, Govt. Jobs / Private jobs / ಸ್ವಂತ ಉದ್ದಿಮೆ / ಬ್ಯುಸಿನೆಸ್ ಮೊದಲನೆ ಮದುವೆ 18000 ವಧುಗಳಿಗೆ ವರ ಬೇಕು. 28000 ವರಗಳಿಗೆ ವಧು ಬೇಕು. 2400 ಡೈವೋರ್ಸ್‌ಗಳು, ವಿದುರ, ವಿಧವೆಯರಿಗೆ ವಧುಗಳು / ವರಗಳು ಶ್ರೀಮಂತ / Govt. Jobs 68 ವರನಿಗೆ ಯಾವುದೇ ಜಾತಿಯ ವಧು ಬೇಕು. 180 ಸ್ವತಂತ್ರ ವಧುಗಳಿಗೆ ವರಗಳು ಬೇಕು. ನೇರ ಸಂಪರ್ಕಿಸಿ:
Mob: 7975728012

ಇಂದೇ ಸಂಪರ್ಕಿಸಿ
ಮೈಸೂರು, ನಂಜನಗೂಡು, ಕಡಕೊಳ, ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ ಮುಂತಾದ ಸ್ಥಳದಲ್ಲಿರುವ (ಪ್ರಸಿದ್ಧ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Diploma, Any Degree pass / fail ಆದವರಿಗೆ Packing, Helpers, Checking, Maintenance, Billing, Front Office, Telephone attender ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ; 14000 – 39000 (ESI+PF+OT). Contact:
9353753194, 9980850141

ಬೇಕಾಗಿದ್ದಾರೆ
ಚೈನೀಸ್ ಮತ್ತು ಇಂಡಿಯನ್ ಮತ್ತು ತಂದೂರಿ ಚೆಫ್ ಬೇಕಾಗಿದ್ದಾರೆ. ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್ ಮೈಸೂರ್....ಎಲ್ಲಾ ಸೌಲಭ್ಯ, ಉತ್ತಮ ಸಂಬಳ ಕೊಡಲಾಗುವುದು. ಸಂಪರ್ಕಿಸಿ:
Mob: 78990 28086

WANTED
Receptionist, (Excel Computer Knowledge Complusory) and Sales Executives Wanted Immidiately. For Ashthithva Enterprises
8861533998

ಮೈಸೂರಿನಲ್ಲಿ ಉದ್ಯೋಗ
(Consultancy ಅಲ್ಲ) ಕುವೆಂಪುನಗರದಲ್ಲಿ ನೂತನವಾಗಿ ಆರಂಭವಾಗಿರುವ AWBM ಕಂಪನಿಗೆ SSLC, PUC, ITI, JOC, Diploma, Any Degree ಆದಂತಹ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಯೋಮಿತಿ:– 18 to 31 years, ತಿಂಗಳಿಗೆ– 25,000 - 34000. (ಉಚಿತ ವಸತಿ + Promotion) ಕೂಡಲೇ ಕರೆಮಾಡಿ. ವಿಸ್ಮಯ:
9844219943 / 9900163228

ಇಂದೇ ಸಂಪರ್ಕಿಸಿ
ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ, ಸರಸ್ವತಿಪುರಂ, ನಂಜನಗೂಡು, ಎನ್.ಆರ್. ಮೊಹಲ್ಲಾ ಮುಂತಾದ ಏರಿಯಾಗಳಲ್ಲಿನ ಕಂಪನಿ, ಆಫೀಸ್, ಶೋರೂಂಗಳಿಗೆ ಕೆಲಸ ಮಾಡಲು ಯುವಕ / ಯುವತಿಯರು ಬೇಕಾಗಿದ್ದಾರೆ. Any qualification (ESI+PF+ OT) ಯೊಂದಿಗೆ ಸಂಬಳ 14,000 – 36000. ಸಂಪರ್ಕಿಸಿ:
7892878915, 9663704915

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ–ಯುವತಿಯರು ಬೇಕಾಗಿದ್ದಾರೆ. Salary: 13,000 - 21,000 + ESI, PF. ವಿದ್ಯಾರ್ಹತೆ: 10th, PUC, ITI, Diploma and Any Degree. ಇಂದೇ ಸಂಪರ್ಕಿಸಿ:
Mob: 9035734821

HOUSE FOR RENT
1st Floor, 3BHK at 12th Main, 9th Cross, Saraswathipuram
9538346330

ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ಸ್ – ಸಿದ್ಧಾರ್ಥನಗರ, ಹೂಟಗಳ್ಳಿ, ಆಲನಹಳ್ಳಿ (10th Pass / Fail) Age:- 30 yrs to 50 yrs.
2) ಗಾರ್ಡನ್ ಕೆಲಸಕ್ಕೆ – ಮೇಟಗಳ್ಳಿ, (ಮಹಿಳೆಯರು)
9739166772
9844235981

ಬೇಕಾಗಿದ್ದಾರೆ
ಪ್ರತಿಷ್ಠಿತ ಕಂಪನಿಗಳಲ್ಲಿ Loan recovery ಮಾಡಲು Collection executive ಗಳು ಚಾಮರಾಜನಗರ, ಕೊಳ್ಳೇಗಾಲ, ಗುಂಡ್ಲುಪೇಟೆ, ನಂಜನಗೂಡು, ಹೆಚ್.ಡಿ.ಕೋಟೆ, ಪಿರಿಯಾಪಟ್ಟಣ, ಹುಣಸೂರು, ಕೆ.ಆರ್.ನಗರ, ಕುಶಾಲನಗರ, ಮಡಿಕೇರಿ ಈ ಸ್ಥಳಗಳಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಸ್ವಂತ ದ್ವಿಚಕ್ರ ವಾಹನವುಳ್ಳವರು ಮತ್ತು ಎಸ್‌ಎಸ್‌ಎಲ್‌ಸಿ ಪಾಸಾದವರಿಗೆ ಆದ್ಯತೆ.
9900610534 / 9901945444
9980929313

ಬೇಕಾಗಿದ್ದಾರೆ
ತಿರುಮಲ ಸೆಕ್ಯೂರಿಟಿ ಸರ್ವೀಸ್ ಏಜನ್ಸಿ, ಮೈಸೂರು. ಮಾಲೀಕರು : ಚಂದ್ರೇಗೌಡ (Rtd. ಎಎಸ್‌ಐ ಅಧಿಕಾರಿ) ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ದೇವೇಗೌಡ ಸರ್ಕಲ್, ಬನ್ನೂರು ರಸ್ತೆ, ಮೈಸೂರು. ಓದಲು ಬರೆಯಲು ತಿಳಿದಿರಬೇಕು.
ಸಂಪರ್ಕಿಸಿ:
9606808975

ಕೇರಳ ಕೊಳ್ಳೇಗಾಲ ಜ್ಯೋತಿಷ್ಯರು
ಪಂ॥ ಮೋಹನ್ ಪೊದುವಾಳ್ (ಕೇರಳ)
ಪಂ॥ ಮೋಡಿ ಕೃಷ್ಣಪ್ಪ ಮಾಂತ್ರಿಕರು (ಕೊಳ್ಳೇಗಾಲ)
ಮೊ.: 9036984793
ಇವರು ಕೇರಳ ಮಾಂತ್ರಿಕ ಶಕ್ತಿ ಮತ್ತು ಕೊಳ್ಳೇಗಾಲದ ಮೋಡಿ ಮಾಂತ್ರಿಕ ವಿದ್ಯೆಯಿಂದ ಸ್ತ್ರೀ–ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ಬಾಧೆ, ಪ್ರೇತ ಬಾಧೆ ಇನ್ನೂ ಅನೇಕ ಗುಪ್ತ ಜಟಿಲವಾದ ಘೋರ ನಿಗೂಢ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ಶತಸಿದ್ಧ. ಖಾಯಂ ವಿಳಾಸ:– #1140, ವಿಹಾರ ಮಾರ್ಗ, ಹಳೆ ಹಾಲಿನ ಡೈರಿ ಎದುರು, ಟೆಂಪಲ್ ಟ್ರೀಸ್ ಅಪಾರ್ಟ್‌ಮೆಂಟ್ ಪಕ್ಕ, ಸಿದ್ಧಾರ್ಥನಗರ, ಮೈಸೂರು – 11.

SITE FOR SALE
JnanaBharathi Layout, 2nd Stage, Dadada Halli, Just 5 k.m. from J.P.Nagar Ring Road, East Facing Site 1163 Sq.ft. Rs.22 Lakhs. South East Corner Site 1123 Sq.ft. Rs. 23 Lakhs.
9342123373

RS CONSTRUCTIONS ENGINEERS & CONTRACTORS
ನಿಮ್ಮ ಕನಸಿನ ಮನೆಯನ್ನು ಉತ್ತಮ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿ ಕೊಡುತ್ತೇವೆ.
ದರ 1,80,000/– ಪ್ರತಿ ಚದರ
ಉಚಿತ ಪ್ಲಾನ್ ಕೂಡ ಮಾಡಿಕೊಡಲಾಗುತ್ತದೆ. ಇಂದೇ ಸಂಪರ್ಕಿಸಿ
9538575009 / 7019151884

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86,000.
9740733021 / 9535028750

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಸತೀಶ್ ಜಾರಕಿಹೊಳಿ ಬಂಧನಕ್ಕೆ ಆಗ್ರಹಿಸಿ ಬಿಜೆಪಿ ಪ್ರತಿಭಟನೆ



ಮಂಡ್ಯ,ನ.9– ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ ಅವರ ವಿರುದ್ಧ ಕಾನೂನು ರೀತಿ ಸೂಕ್ತ ಕ್ರಮ ಕೈಗೊಂಡು ಬಂಧಿಸಬೇಕು ಎಂದು ಒತ್ತಾಯಿಸಿ ಜಿಲ್ಲಾ ಬಿಜೆಪಿ ಘಟಕದ ಅಧ್ಯಕ್ಷ ಸಿ.ಪಿ.ಉಮೇಶ್ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಗರದ ಸರ್‌ಎಂವಿ ಪ್ರತಿಮೆ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು, ಸತೀಶ್ ಜಾರಕಿಹೊಳಿ ಹಾಗೂ ಕಾಂಗ್ರೆಸ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನಂತರ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು. ಈ ವೇಳೆ ಜಿಲ್ಲಾ ಬಿಜೆಪಿ ಘಟಕದ ಅಧ್ಯಕ್ಷ ಸಿ.ಪಿ.ಉಮೇಶ್ ಮಾತನಾಡಿ, ಸತೀಶ್ ಜಾರಕಿಹೊಳಿ ಸಾರ್ವತ್ರಿಕವಾಗಿ ಹಿಂದೂ ಎನ್ನುವ ಪದ ಅಶ್ಲೀಲ. ಆ ಪದದ ಅರ್ಥ ಕೇಳಿದರೆ ನಾಚಿಕೆಯಾಗುತ್ತದೆ ಎಂದು ದೇಶದ ಬಹುಸಂಖ್ಯಾತ ಭಾವನೆಗಳಿಗೆ ಧಕ್ಕೆ ತರುವಂಥ ಮಾತುಗಳನ್ನಾಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಹಿಂದೂಗಳ ವಿರುದ್ಧ ಮಾತನಾಡುವ ಈ ಮಾನಸಿಕತೆಯನ್ನು ಕಾಂಗ್ರೆಸ್ ಪಕ್ಷ ಮೊದಲಿನಿಂದಲೂ ಅನುಸರಿಸಿಕೊಂಡು ಬಂದಿದೆ.ಹಿಂದೂಗಳನ್ನು ಅವಮಾನಿಸುವುದು, ಕಡೆಗಣಿಸುವುದು ಸೇರಿದಂತೆ ಇನ್ನಿತರೆ ಕಾರ್ಯಸೂಚಿಗಳನ್ನು ಕಾಂಗ್ರೆಸ್ ವ್ಯಕ್ತಿಯನ್ನಾಗಿಸಿಕೊಂಡಿದೆ ಎಂದು ಕಿಡಿಕಾರಿದರು.

ಸತೀಶ್ ಜಾರಕಿಹೊಳಿ ವಿರುದ್ಧ ಕೂಡಲೇ ಕಾಂಗ್ರೆಸ್ ಪಕ್ಷ ಕ್ರಮಕೈಗೊಳ್ಳಬೇಕು. ಕಾಂಗ್ರೆಸ್ ಪಕ್ಷದಿಂದ ವಜಾ ಮಾಡಬೇಕು. ಇಲ್ಲದಿದ್ದರೆ ಕಾಂಗ್ರೆಸ್ ನಾಯಕರೇ ಅವರಿಗೆ ಹೇಳಿಕೊಟ್ಟು ಕುಮ್ಮಕ್ಕು ನೀಡುತ್ತಿದ್ದಾರೆ ಎಂದು ಭಾವಿಸಬೇಕಾಗುತ್ತದೆ. ಅಲ್ಲದೆ, ಪೊಲೀಸ್ ಇಲಾಖೆ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ಬಂಧಿಸಬೇಕು ಎಂದು ಆಗ್ರಹಿಸಿದರು.

ಸರ್ವೋಚ್ಚ ನ್ಯಾಯಾಲಯವು ಹಿಂದೂ ಎಂಬುದು ಭಾರತದ ಜೀವನ ಪದ್ಧತಿ ಎಂದು ತೀರ್ಪು ನೀಡಿದೆ.ಅಲ್ಲದೆ, ರಾಷ್ಟ್ರಗೀತೆಯ ಕಡೆ ಸಾಲಿನಲ್ಲಿ ಜೈ ಹಿಂದ್ ಎನ್ನುವ ಪದವೂ ಇದೆ. ಹೀಗಿರುವಾಗ ದೇಶದಲ್ಲಿ ವಾಸ ಮಾಡುವ ಬಹುಸಂಖ್ಯಾತ ಹಿಂದೂಗಳಿಗೆ ಭಾವನಾತ್ಮಕ ಹಾಗೂ ಮಾನಸಿಕವಾಗಿ ನೋವುಂಟು ಮಾಡುವಂಥ ಹೇಳಿಕೆ ನೀಡುವ ಮೂಲಕ ರಾಷ್ಟ್ರಗೀತೆಗೆ ಹಾಗೂ ರಾಷ್ಟ್ರದ ಬಹುಸಂಖ್ಯಾತರಿಗೆ ಅವಮಾನ ಮಾಡಿದಂತಾಗಿದೆ. ಈ ಕೂಡಲೇ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಹಿಂದೂ ವಿರೋಧಿ ನೀತಿ ಹೊಂದಿರುವ ವಿದೇಶಿಗರಿಂದ ಅಪಾರವಾದ ಹಣವನ್ನು ತಂದು ಇಲ್ಲಿನ ಹಿಂದೂ ವಿರೋಧಿ ಹೇಳಿಕೆ ನೀಡುವವರಿಗೆ ಕೊಡಲಾಗುತ್ತಿದೆ ಎಂಬ ಅನುಮಾನವಿದ್ದು, ಕೂಡಲೇ ರಾಷ್ಟ್ರದ ಹಿತದೃಷ್ಟಿಯಿಂದ ಇಂಥ ಹೇಳಿಕೆ ನೀಡಿರುವ ಸತೀಶ್ ಜಾರಕಿಹೊಳಿ ಸೇರಿದಂತೆ ಇತರರ ಮೇಲೂ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಜಿ.ಪಂ. ಮಾಜಿ ಸದಸ್ಯ ಚಂದಗಾಲು ಶಿವಣ್ಣ, ನಗರಸಭೆ ಮಾಜಿ ಅಧ್ಯಕ್ಷ ಎಚ್.ಆರ್.ಅರವಿಂದ್, ಮಾಧ್ಯಮ ವಕ್ತಾರ ಸಿ.ಟಿ.ಮಂಜುನಾಥ್, ನಗರಾಧ್ಯಕ್ಷ ವಿವೇಕ್, ಮುಖಂಡರಾದ ಜವರಾಜು ನಾಗಣ್ಣ ಮಲ್ಲಪ್ಪ ಸಿದ್ದರಾಜುಗೌಡ, ಕೇಶವಮೂರ್ತಿ, ಹೊಸಹಳ್ಳಿ ಶಿವು, ಎಸ್.ಶಿವಕುಮಾರ್ ಆರಾಧ್ಯ, ಎಚ್.ಕೆ.ರವಿ, ಅಶೋಕ್, ಮಾದರಾಜುಅರಸು, ವಸಂತ್‌ಕುಮಾರ್, ಪುಟ್ಟಸ್ವಾಮಿ ಸೇರಿದಂತೆ ಮತ್ತಿತರರಿದ್ದರು.

ಕೈದಿಗಳ ಹಕ್ಕಿನ ಬಗ್ಗೆ ವಿವಿಧ ಜಾಗೃತಿ ಕಾರ್ಯಕ್ರಮ



ಮಂಡ್ಯ,ನ.9– ಕೈದಿಗಳಿಗೂ ಸಹ ಹಕ್ಕುಗಳಿವೆ. ಕೈದಿಗಳ ಹಕ್ಕಿನ ಬಗ್ಗೆ ಜಾಗೃತಿ ಮೂಡಿಸಲು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶ ಬಿ.ಜಿ.ರಮಾ ತಿಳಿಸಿದರು.

ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಕೀಲರ ಸಂಘ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ, ಜಿಲ್ಲಾ ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆ, ಆರೋಗ್ಯ ಇಲಾಖೆ ಹಾಗೂ ಶಿಕ್ಷಣ ಇಲಾಖೆ ಹಾಗೂ ಇತರೆ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಕಾನೂನು ಅರಿವು ಕಾರ್ಯಕ್ರಮ ಹಾಗೂ ಕಾನೂನು ಅರಿವಿನ ಮೂಲಕ ನಾಗರಿಕರ ಸಬಲೀಕರಣ ಹಾಗೂ ಜಾಥಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರತಿ ವರ್ಷ ನವೆಂಬರ್ 9 ರಂದು ಕಾನೂನು ಸೇವೆಗಳ ದಿನಾಚರಣೆಯನ್ನು ಆಚರಣೆ ಮಾಡುತ್ತೇವೆ. ಸಾರ್ವಜನಿಕರಲ್ಲಿ ಕಾನೂನಿನ ಬಗ್ಗೆ ಅರಿವು ಮೂಡಿಸುವುದು ಕಾನೂನು ಸೇವೆಗಳ ದಿನಾಚರಣೆಯ ಮುಖ್ಯ ಉದ್ದೇಶವಾಗಿದೆ. ಕಾನೂನಿನ ಅರಿವು ಪ್ರತಿ ಹಳ್ಳಿಯ ಜನರಿಗೂ ಸಹ ತಿಳಿಯಬೇಕು ಎಂಬ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ ಎಂದರು.

ಜೈಲಿನಲ್ಲಿರುವ ಕೈದಿಗಳ ಹಕ್ಕುಗಳ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವುದು, ಅವರ ಹಕ್ಕುಗಳು ರಕ್ಷಣೆ ಅಥವಾ ಉಲ್ಲಂಘನೆ ಆಗುತ್ತಿರುವುದೇ ಎಂಬುದನ್ನು ಅರಿವು ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನಳಿನಿ ಕುಮಾರಿ, ಜಿಲ್ಲಾಧಿಕಾರಿ ಗೋಪಾಲಕೃಷ್ಣ ಜಿ.ಪಂ. ಸಿ.ಇ.ಓ. ಶಾಂತಾಎಲ್ ಹುಲ್ಮನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್‌ಎನ್, ಮಿಮ್ಸ್ ನಿರ್ದೇಶಕ ಡಾ. ಮಹೇಂದ್ರ, ವಕೀಲರ ಸಂಘದ ಅಧ್ಯಕ್ಷ ರಾಜೇಂದ್ರ, ಕಾರ್ಯದರ್ಶಿ ಸಿದ್ದರಾಜು, ಖಜಾಂಚಿ ಬಿ.ಎಂ.ಮಹೇಶ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಕರಡು ಮತದಾರರ ಪಟ್ಟಿ ಪ್ರಕಟ; ಮತದಾರರು ಪರಿಶೀಲಿಸಿಕೊಳ್ಳಲು ಸೂಚನೆ



ಮಂಡ್ಯ,ನ.9– ಜಿಲ್ಲಾಚುನಾವಣಾ ವತಿಯಿಂದ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ–2023ನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ ಹಾಗೂ ತಹಶೀಲ್ದಾರ್ ಕಚೇರಿಗಳಲ್ಲಿ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು. ಮತದಾರರು ತಮ್ಮ ಹೆಸರನ್ನು ಪರಿಶೀಲಿಸಿಕೊಳ್ಳುವಂತೆ ಜಿಲ್ಲಾಧಿಕಾರಿ ಡಾ.ಎಚ್.ಎನ್.ಗೋಪಾಲಕೃಷ್ಣ ತಿಳಿಸಿದರು.

ಬುಧವಾರ ಮತದಾರರ ಪಟ್ಟಿ ಪರಿಷ್ಕರಣೆ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಸೈಕಲ್ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮತದಾರರು ಪಟ್ಟಿಯಲ್ಲಿ ತಮ್ಮ ಹೆಸರು ಇರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು. ಮತದಾರರ ಹೆಸರು ಬಿಟ್ಟು ಹೋಗಿದ್ದಲ್ಲಿ ಸೇರ್ಪಡೆ, ಮೊಬೈಲ್ ಸಂಖ್ಯೆ ಬದಲಾವಣೆ, ವಿಳಾಸ ಬದಲಾವಣೆ, ಹೊರದಾರಿ ಹೆಸರು ಸೇರ್ಪಡೆಗೆ ಒಂದು ತಿಂಗಳು ಕಾಲ ಅವಕಾಶವಿದ್ದು, ಬಿ.ಎಲ್.ಒ ಗಳಿಗೆ ನಿಗದಿತ ಅರ್ಜಿ ಸಲ್ಲಿಸಿ ಎಂದರು.

ಮಂಡ್ಯ ಜಿಲ್ಲೆಯಲ್ಲಿ 14,77, 951 ಮತದಾರರಿದ್ದಾರೆ, ಅವರಲ್ಲಿ 735082 ಪುರುಷ ಹಾಗೂ 742869 ಮಹಿಳಾ ಮತದಾರರಿದ್ದಾರೆ. 1–1–2023ಕ್ಕೆ ಅರ್ಹ ಮತದಾರರನ್ನು ಸೇರ್ಪಡೆ ಮಾಡುವ ಪ್ರಕ್ರಿಯೆ ನಡೆಯುತ್ತಿದೆ. ಚುನಾವಣಾ ಆಯೋಗದ ನಿರ್ದೇಶನದಂತೆ 17 ವರ್ಷ ತುಂಬಿರುವವರು ಸಹ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗಾಗಿ ಅರ್ಜಿ ಸಲ್ಲಿಸಬಹುದು. ಅರ್ಜಿಗಳನ್ನು ಪರಿಶೀಲಿಸಿ ಅರ್ಹರನ್ನು ಮತದಾರರ ಪಟ್ಟಿಗೆ ಸೇರಿಸಲಾಗುವುದು ಎಂದು ತಿಳಿಸಿದರು.ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಾಂತಾ ಎಲ್. ಹುಲ್ಮನಿ ಮಾತನಾಡಿ, ಪ್ರತಿ ಮತವೂ ಅಮೂಲ್ಯ. ಯಾವುದೇ ಮತದಾರರು ಮತದಾನದ ಪ್ರಕ್ರಿಯೆಯಿಂದ ಹೊರಗೆ ಉಳಿಯಬಾರದು ಎಂದು ಜಾಗೃತಿ ಹಾಗೂ ಜಾಥಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಕಸ ಸಂಗ್ರಹಣೆಯ ಸ್ವಚ್ಛತಾ ವಾಹನಗಳ ಮೂಲಕ ಗ್ರಾಮ, ವಾರ್ಡ್‌ಗಳ ಮನೆ ಮನೆಗಳಿಗೂ ಮತದಾನದ ಮಹತ್ವದ ಮಾಹಿತಿಯನ್ನು ತಲುಪಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್, ಉಪ ವಿಭಾಗಾಧಿಕಾರಿ ಕೀರ್ತನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ನಾಗರಾಜು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ನಿರ್ಮಲಾ, ತಹಶೀಲ್ದಾರ್ ಅಹಮದ್, ತಾ.ಪಂ. ಕಾರ್ಯ ನಿರ್ವಾಹಕ ಅಧಿಕಾರಿ ವೇಣುಗೋಪಾಲ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.



ಕೆ.ಆರ್.ಪೇಟೆ ತಾಲೂಕಿನ ಚಿಲ್ಲದಹಳ್ಳಿ ಗ್ರಾಮದೇವತೆ ಶ್ರೀ ಮಾಯಮ್ಮ ದೇವಾಲಯದ ಪುನರ್‌ನಿರ್ಮಾಣ ಕಾಮಗಾರಿಗೆ ಸಮಾಜ ಸೇವಕ ಆರ್.ಟಿ.ಓ ಮಲ್ಲಿಕಾರ್ಜುನ್ ದೇವಾಲಯದ ಸಮಿತಿ ಅಧ್ಯಕ್ಷ ಪಟೇಲ್ ನಾಗೇಗೌಡ ಅವರಿಗೆ ಆರ್ಥಿಕ ನೆರವು ನೀಡಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷ ವೆಂಕಟೇಶ್, ಪ್ರಧಾನ ಕಾರ್ಯದರ್ಶಿ ಜಯರಾಮೇಗೌಡ, ಖಜಾಂಚಿ ಮಹೇಂದ್ರ, ಜವರಣ್ಣನ ರಮೇಶ್, ನಾಗೇಗೌಡ, ಗ್ರಾಮ ಪಂಚಾಯಿತಿ ಸದಸ್ಯ ಆರ್.ಶ್ರೀನಿವಾಸ್, ಅರ್ಚಕರಾದ ಕೃಷ್ಣೇಗೌಡ, ಆನಂದ್, ಮುಖಂಡರಾದ ಶಶಿಧರ್, ಪ್ರಭಾಕರ್, ಉಮೇಶ್ ಸೇರಿದಂತೆ ನೂರಾರು ಗ್ರಾಮಸ್ಥರು ಉಪಸ್ಥಿತರಿದ್ದರು.

ಸೈನಿಕ ಶಾಲೆಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮಂಡ್ಯ,ನ.9– ಭಾರತದಾದ್ಯಂತ ಸೈನಿಕ ಶಾಲೆಗಳ ಪ್ರವೇಶ ಪರೀಕ್ಷೆ(AISSEE)ಗೆ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. 6ನೇ ತರಗತಿಗೆ ಪ್ರವೇಶ ಬಯಸುವ ಅಭ್ಯರ್ಥಿಗಳು 1 ಏಪ್ರಿಲ್ 2011 ಮತ್ತು 31 ಮಾರ್ಚ್ 2013ರ ನಡುವೆ ಜನಿಸಿರಬೇಕು, 8ನೇ ತರಗತಿಗೆ ಪ್ರವೇಶ ಬಯಸುವ ಅಭ್ಯರ್ಥಿಗಳು 1 ಏಪ್ರಿಲ್2008 ಮತ್ತು 31 ಮಾರ್ಚ್ 2010ರ ನಡುವೆ ಜನಿಸಿರಬೇಕು (8ನೇ ತರಗತಿಗೆ ಬಾಲಕಿಯರಿಗೆ ಪ್ರವೇಶವು ಮುಕ್ತವಾಗಿಲ್ಲ). ಆಸಕ್ತ ಅಭ್ಯರ್ಥಿಗಳು ಇಲಾಖೆಯ ವೆಬ್‌ಸೈಟ್ www.nta.ac.in/https://aissee.nta.nic. ಮೂಲಕ ನ.30ರೊಳಗಾಗಿ ಅರ್ಜಿಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ 08276–278963 ಅಥವಾ 08276–278965 ಸಂಪರ್ಕಿಸಬಹುದಾಗಿದೆ.

ರಸ್ತೆ ದುರಸ್ತಿ, ಸಮರ್ಪಕ ನೀರು ಪೂರೈಕೆಗೆ ಆಗ್ರಹ



ಶ್ರೀರಂಗಪಟ್ಟಣ, ನ.9– ಪಟ್ಟಣದಲ್ಲಿ ರಸ್ತೆಗಳು ಹಾಳಾಗಿದ್ದು, ದುರಸ್ತಿ ಸೇರಿದಂತೆ ಸ್ವಚ್ಛತೆ ಹಾಗೂ ಕುಡಿಯುವ ನೀರು ಸಮರ್ಪಕ ಪೂರೈಕೆಗೆ ಪುರಸಭೆ ಸದಸ್ಯರು ಒತ್ತಾಯಿಸಿದರು.

ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಪುರಸಭೆ ಅಧ್ಯಕ್ಷೆ ನಿರ್ಮಲಾ ವೇಣುಗೋಪಾಲ್ ಹಾಗೂ ಸ್ಥಾಯಿ ಸಮಿತಿ ಅಧ್ಯಕ್ಷ ಶ್ರೀನಿವಾಸ್ ನೇತೃತ್ವದಲ್ಲಿ ಸರ್ವ ಸದಸ್ಯರ ವಿಶೇಷ ಸಭೆ ನಡೆಯಿತು.

ವಿವಿಧ ಅಭಿವೃದ್ಧಿ ಕಾಮಗಾರಿ ಹಾಗೂ ಟೆಂಡರ್ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ 23 ಕೋಟಿ ರೂ. ವೆಚ್ಚದ 24X7 ಯೋಜನೆಯಡಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ತಟಸ್ಥವಾಗಿದ್ದು, 6ನೇ ವಾರ್ಡ್ ಸೇರಿದಂತೆ ಇತರೆಡೆ ನೀರಿನ ಪೂರೈಕೆ ಸಮರ್ಪಕವಾಗುತ್ತಿಲ್ಲ. ಈ ಬಗ್ಗೆ ತ್ವರಿತ ಕ್ರಮ ಕೈಗೊಳ್ಳಬೇಕು ಎಂಬಿತ್ಯಾದಿ ಎಂದು ಆಗ್ರಹಿಸಿದರು.

ಪಟ್ಟಣದ ಅಯ್ಯಪ್ಪ ಸ್ವಾಮಿ ದೇವಾಲಯದ ಹಿಂಭಾಗ 1998 ರಲ್ಲಿ ಲೈಬ್ರರಿ ನಿರ್ಮಾಣಕ್ಕೆ ಪುರಸಭೆ ಉಚಿತವಾಗಿ 60X40 ಅಳತೆಯ ನಿವೇಶನ ಮಂಜೂರು ಮಾಡಿದ್ದು, 6 ತಿಂಗಳೊಳಗೆ ತಮ್ಮ ಹೆಸರಿಗೆ ವರ್ಗಾವಣೆ ಮಾಡಿಕೊಳ್ಳದ ಕಾರಣ ಅದೇ ಜಾಗವನ್ನು 2016ರ ಆ.16 ರಲ್ಲಿ ಕಟ್ಟಡ ಕಾರ್ಮಿಕ ಸಂಘಕ್ಕೆ ನೀಡಲಾಗಿದೆ. ಇದೀಗ ಅದೇ ಜಾಗವನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಲೈಬ್ರರಿಗೆ ನೀಡಬೇಕೆಂದು ಕೆಲ ಸದಸ್ಯರು ತಿಳಿಸಿದರೆ, ಮತ್ತೆ ಕೆಲ ಸದಸ್ಯರು ಇರುವ ಜಾಗವನ್ನು ಅಳತೆ ಮಾಡಿ ಸೌಹಾರ್ದಯುತವಾಗಿ ಇಬ್ಬರಿಗೂ ನೀಡಬೇಕೆಂದು ಒತ್ತಾಯ ಕೇಳಿ ಬಂತು.

ಪಟ್ಟಣದ ಸ್ನಾನಘಟ್ಟ ಪಶ್ಚಿಮವಾಹಿನಿ, ಗೋಸಾಯಿಘಾಟ್ ಸೇರಿದಂತೆ ಹಲವೆಡೆ ಅಸ್ತಿ ವಿಸರ್ಜಿಸಲು ಟೆಂಡರ್ ಕರೆಯಬೇಕೆಂಬ ವಿಷಯಕ್ಕೆ ಕೆಲ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು. ಇದುವರೆಗೂ ಅಸ್ತಿ ವಿಸರ್ಜಿಸಲು 100 ರೂ. ಗಳನ್ನು ಪಡೆಯಲಾಗುತ್ತಿದ್ದು, ಅದರ ವಿವರವನ್ನು ಸಭೆಗೆ ತಂದು ಸಾಮಾನ್ಯ ಸಭೆಯಲ್ಲಿ ಚರ್ಚಿಸುವಂತೆ ಒತ್ತಾಯಗಳು ಕೇಳಿ ಬಂದವು.

ಇದೇ ವೇಳೆ ವಿವಿಧ ಕಾಮಗಾರಿಗಳು ಹಾಗೂ ಅಭಿವೃದ್ಧಿ ಟೆಂಡರ್ ಸಂಬಂಧ ಚರ್ಚೆ ನಡೆಸಿ ಸದಸ್ಯರು ಒಪ್ಪಿಗೆ ಸೂಚಿಸಿದರು. ಪುರಸಭೆ ಮುಖ್ಯಾಧಿಕಾರಿ ಸಂದೀಪ್ ಸೇರಿದಂತೆ ಸದಸ್ಯರುಗಳು ಹಾಗೂ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ದುರ್ವಾಸನೆಗೆ ಮುಕ್ತಿ

15 ದಿನದೊಳಗೆ ಶೆಡ್ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳಲಿದೆ. ನವೆಂಬರ್ ಅಂತ್ಯದೊಳಗೆ ಯಂತ್ರಗಳ ಜೋಡಣೆ, ವಿದ್ಯುತ್ ಸಂಪರ್ಕ, ರಸ್ತೆ ಸಂಪರ್ಕ ಕಲ್ಪಿಸಲು ಸೂಚನೆ ನೀಡಲಾಗುತ್ತದೆ. ಡಿಸೆಂಬರ್ ಅಂತ್ಯದ ವೇಳೆಗೆ ರಾಯನಕೆರೆ ಘಟಕದಲ್ಲಿ ಪ್ರಾಯೋಗಿಕ ಕಾರ್ಯ ಪೂರ್ಣಗೊಳಿಸಿ, 2023ರ ಜನವರಿ ಎರಡನೇ ವಾರದಲ್ಲಿ ಉದ್ಘಾಟಿಸಲಾಗುವುದು ಎಂದರು. ಕೆಸರೆ ಹಾಗೂ ರಾಯನಕೆರೆಯ ಘನತ್ಯಾಜ್ಯ ವಿಲೇವಾರಿ ಘಟಕ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುವುದರಿಂದ ಜನವರಿ ಎರಡನೇ ವಾರದಿಂದ ವಿದ್ಯಾರಣ್ಯಪುರಂನಲ್ಲಿನ ಸಿವೇಜ್ ಫಾರಂಗೆ ಕಸ ಸಾಗಣೆ ನಿಲ್ಲಿಸಲಾಗುತ್ತದೆ. ಮೈಸೂರು ನಗರದ 65 ವಾರ್ಡ್‌ಗಳಲ್ಲಿ ಸಂಗ್ರಹ ವಾಗುವ ಕಸವನ್ನು ಪ್ರತ್ಯೇಕಿಸಿ, ಕೆಸರೆ ಹಾಗೂ ರಾಯನಕೆರೆ ಘಟಕಕ್ಕೆ ರವಾನಿಸಲಾಗುವುದು. ಇದರಿಂದ ಸಿವೇಜ್ ಫಾರಂ ಮೇಲಿನ ಒತ್ತಡ ನಿವಾರಣೆಯಾಗುತ್ತದೆ ಎಂದು ತಿಳಿಸಿದರು.

ಈ ಎರಡು ಹೊಸ ಘಟಕಗಳು ಕಾರ್ಯಾರಂಭ ಮಾಡಿದ ನಂತರ ಸಿವೇಜ್ ಫಾರಂನಲ್ಲಿರುವ ಸಂಗ್ರಹವಾಗಿರುವ 7 ಲಕ್ಷ ಟನ್ ತ್ಯಾಜ್ಯವನ್ನು ವಿಲೇವಾರಿ ಮಾಡುವ ಕಾರ್ಯ ಆರಂಭಿಸಲಾಗುತದೆ. ಪೂರ್ಣ ಪ್ರಮಾಣದಲ್ಲಿ ಕಸ ವಿಲೇವಾರಿಯಾದ ಬಳಿಕ ಸಿವೇಜ್ ಫಾರಂ ಜಾಗವನ್ನು ಯಾವ ಉದ್ದೇಶಕ್ಕೆ ಬಳಸಬೇಕು ಎಂದು ಪಾಲಿಕೆಯಲ್ಲಿ ಚರ್ಚಿಸಿ, ನಿರ್ಧರಿಸಲಾಗುತ್ತದೆ. ಮುಂದಿನ ಕೆಲ ವರ್ಷಗಳಲ್ಲಿ ಸಿವೇಜ್ ಫಾರಂ ಸಮಸ್ಯೆಯಿಂದ ಸ್ಥಳೀಯರು ಶಾಶ್ವತವಾಗಿ ಪಾರಾಗಲಿದ್ದಾರೆ ಎಂದು ವಿವರಿಸಿದರು. ಸ್ವಚ್ಛ ಸರ್ವೇಕ್ಷಣೆಯಲ್ಲಿ ಸ್ವಚ್ಛನಗರ ಪ್ರಶಸ್ತಿಗೆ ಇಂಧೋರ್ ಸೇರಿದಂತೆ ದೇಶದ ವಿವಿಧ ಮಹಾನಗರಗಳು ಸ್ಪರ್ಧೆಯೊಡ್ಡುತ್ತಿವೆ. ಮೈಸೂರು ನಗರ ಮತ್ತೆ ದೇಶದ ನಂಬರ್ ಒನ್ ಸ್ವಚ್ಛ ನಗರವಾಗಬೇಕು ಎಂಬುದು ನಮ್ಮ ಮಹಾ ಉದ್ದೇಶ. ಇದಕ್ಕಾಗಿ ಎರಡು ಹೊಸ ಘನತ್ಯಾಜ್ಯ ವಿಲೇವಾರಿ ಘಟಕಗಳ ಸೇವೆ ಪ್ರಮುಖ ಪಾತ್ರ ವಹಿಸುತ್ತದೆ. ಕ್ಲೀನ್ ಸಿಟಿ ಪರಿಕಲ್ಪನೆಯೊಂದಿಗೆ ಕೆಲಸ ಮಾಡಲಾಗುತ್ತಿದೆ ಎಂದರು. ಮನೆ ಮನೆ ಕಸವನ್ನೂ ಲಾಭದಾಯಕವಾಗಿಸಬಹುದು ಎಂದು ತೋರಿಸಿಕೊಟ್ಟಿದ್ದೇ ಮೈಸೂರು ಮಹಾನಗರ ಪಾಲಿಕೆ. ಕಸದಿಂದ ಕಾಂಪೋಸ್ಟ್ ಗೊಬ್ಬರ ಮಾಡಿ ಲಾಭ ಗಳಿಸುವ ಪ್ರಯತ್ನ ಇದಾಗಿದೆ. ಕಸವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ರೀತಿಯಲ್ಲಿ ಕೆಲಸ ನಡೆಯುತ್ತಿದೆ. ಜನರ ಮಧ್ಯೆ ಕಸ ಇರಬಾರದು ಎಂಬುದು ನಮ್ಮ ನಿಲುವು. ಆ ಮೂಲಕ ಮತ್ತೊಮ್ಮೆ ಮೈಸೂರು ಸ್ವಚ್ಛನಗರ ಪಟ್ಟ ಪಡೆಯಬೇಕೆಂಬ ಆಸೆ ಇಟ್ಟುಕೊಂಡು ಈ ಕೆಲಸ ಮಾಡುತ್ತಿದ್ದೇವೆ ಎಂದರು. ಈ ಸಂದರ್ಭದಲ್ಲಿ ಮೇಯರ್ ಶಿವಕುಮಾರ್, ಉಪಮೇಯರ್ ಡಾ.ಜಿ.ರೂಪ, ಪಾಲಿಕೆ ಕಾರ್ಯಪಾಲಕ ಅಭಿಯಂತರರಾದ ರಂಜಿತ್ ಕುಮಾರ್, ಮಧುಸೂದನ್, ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಸತ್ಯಮೂರ್ತಿ, ಮೋಹನ್, ಕವನ್ ಇನ್ನಿತರರು ಹಾಜರಿದ್ದರು.

ಕೇಂದ್ರ ಉದ್ಘಾಟನೆ

ರಾಯನಕೆರೆ ಬಳಿಯ ಈ ಜಾಗದಲ್ಲಿ ಕಾಂಪೌಂಡ್ ನಿರ್ಮಿಸಲಾಗಿದ್ದು, ಅದಕ್ಕೆ ಬೇಕಾದ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದೆ ಎಂದರು. ಈ ಪುನರ್ವಸತಿ ಕೇಂದ್ರದಲ್ಲಿ ಸರ್ಕಾರದೊಂದಿಗೆ ಶ್ವಾನ ಪ್ರಿಯರು ನೆರವು ನೀಡಬಹುದಾಗಿದೆ. ಹುಟ್ಟುಹಬ್ಬ ಆಚರಣೆ ಅಂಗವಾಗಿ ಶ್ವಾನಗಳಿಗೆ ಏನನ್ನಾದರೂ ನೀಡಲು ಬಯಸಿದರೆ ಅಂತಹವರಿಗೆ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಆರೋಗ್ಯವಂತ, ಅನಾರೋಗ್ಯಕ್ಕೀಡಾದ, ಚಿಕಿತ್ಸೆಗೀಡಾಗಿರುವ ಶ್ವಾನ ಹಾಗೂ ಮರಿಗಳಿಗೆ ಪ್ರತ್ಯೇಕ ವಿಭಾಗ ಮಾಡಿ ಅವುಗಳನ್ನು ಆರೈಕೆ ಮಾಡಲಾಗುತ್ತದೆ. ಶ್ವಾನ ಪ್ರಿಯರೊಂದಿಗೆ ಬರುವ ಮಕ್ಕಳು ನಾಯಿಮರಿಗಳೊಂದಿಗೆ ಆಟವಾಡಲು ಪಾರ್ಕ್‌ವೊಂದನ್ನು ನಿರ್ಮಿಸಲು ನಿರ್ಧರಿಸಲಾಗಿದೆ. ಸ್ಥಳದಲ್ಲಿ ಶ್ವಾನ ಪಾಲಕರು ಹಾಗೂ ವೈದ್ಯಕೀಯ ಸೌಲಭ್ಯ ದೊರಕಿಸಿಕೊಡುವವರಿಗೂ ವ್ಯವಸ್ಥೆ ಮಾಡಲಾಗುತ್ತದೆ. ಈ ಸಂದರ್ಭದಲ್ಲಿ ಮೇಯರ್ ಶಿವಕುಮಾರ್, ಉಪಮೇಯರ್ ಡಾ.ರೂಪ, ಪಶು ಸಂಗೋಪನಾ ಉಪನಿರ್ದೇಶಕ ಡಾ.ಷಡಕ್ಷರಮೂರ್ತಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

'ಹಿಂದೂ' ಪದದ ಅಶ್ಲೀಲ ಅರ್ಥ: ಕೊನೆಗೂ ವಿಷಾದ ವ್ಯಕ್ತಪಡಿಸಿದ ಸತೀಶ್ ಜಾರಕಿಹೊಳಿ



ಬೆಂಗಳೂರು: ಹಿಂದೂ ಪದ ಪರ್ಷಿಯನ್ ಪದ, ಅದು ಅಶ್ಲೀಲ. ಹಿಂದೂ ಪದಕ್ಕೆ ಶಬ್ದಕೋಶದಲ್ಲಿ ಅಶ್ಲೀಲ ಎಂಬ ಅರ್ಥವಿದೆ ಎಂದು ವಿವಾದಿತ ಹೇಳಿಕೆ ನೀಡಿ ತೀವ್ರ ಟೀಕೆಗೆ ಗುರಿಯಾಗಿದ್ದ ಕಾಂಗ್ರೆಸ್ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ ಇದೀಗ ತಮ್ಮ ಹೇಳಿಕೆಯನ್ನು ಹಿಂಪಡೆದು, ವಿಷಾದ ವ್ಯಕ್ತಪಡಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ.

ಹಿಂದೂ ಪದದ ಬಗ್ಗೆ ನೀಡಿರುವ ತಮ್ಮ ಹೇಳಿಕೆ ಬಗ್ಗೆ ತಂಡ ರಚನೆ ಮಾಡಿ ತನಿಖೆ ಮಾಡುವಂತೆ ಪತ್ರದಲ್ಲಿ ಮನವಿ ಮಾಡಿರುವ ಅವರು, ಅಲ್ಲದೇ ಸಾರ್ವಜನಿಕರಲ್ಲಿ ಗೊಂದಲ ಸೃಷ್ಟಿಯಾಗಬಾರದು ಎಂಬ ಸದುದ್ದೇಶದಿಂದ ಅಂದು ನಾನು ನೀಡಿದ ಆ ಹೇಳಿಕೆಯನ್ನು ಹಿಂಪಡೆಯುತ್ತಿದ್ದೇನೆ. ಮತ್ತು ಈ ಹೇಳಿಕೆಯಿಂದ ಯಾರಿಗಾದರೂ ಮನಸ್ಸಿಗೆ ನೋವಾಗಿದ್ದಲ್ಲಿ ವಿಷಾದಿಸುತ್ತೇನೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ನಿಪ್ಪಾಣಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ್ದ ನಾನು, ಹಿಂದೂ ಶಬ್ದ ಪರ್ಷಿಯನ್ ಭಾಷೆಯಿಂದ ಬಂದಿದೆ. ಅದು ಭಾರತ ದೇಶಕ್ಕೆ ಹೇಗೆ ಬಂತು, ಹಲವಾರು ಲೇಖನಗಳಲ್ಲಿ ಹಿಂದೂ ಎಂಬ ಪದದ ಅರ್ಥ ಕೆಟ್ಟದಾಗಿದೆ ಎಂದು ಬರೆದಿರುತ್ತಾರೆ ಎಂದು ನಾನು ಹೇಳಿದ್ದೇನೆ ಮತ್ತು ಇದು ಸಾರ್ವಜನಿಕವಾಗಿ ಚರ್ಚೆಯಾಗಬೇಕಾಗಿರುವುದು ಬಹಳ ಅವಶ್ಯಕತೆ ಎಂದೂ ಸಹ ಹೇಳಿದ್ದೇನೆ. ವಿಕಿಪೀಡಿಯಾ, ಪುಸ್ತಕಗಳು, ಶಬ್ದಕೋಶಗಳು ಮತ್ತು ಇತಿಹಾಸಕಾರರ ಬರಹಗಳ ಉಲ್ಲೇಖದ ಮೇಲೆ ನನ್ನ ಭಾಷಣ ಆಧರಿತವಾಗಿರುತ್ತದೆ. ಕೆಲವು ಪಟ್ಟಭದ್ರ ಹಿತಾಸಕ್ತಿಗಳು ನನ್ನನ್ನು ಹಿಂದೂ ವಿರೋಧಿ ಎಂದು ಬಿಂಬಿಸಲು ಹಾಗೂ ನನ್ನ ತೇಜೋವಧೆ ಮಾಡಲು ವ್ಯವಸ್ಥಿತ ಪಿತೂರಿ ನಡೆಸುತ್ತಿದ್ದಾರೆ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಲು ಮತ್ತು ನೈಜ ಸ್ಥಿತಿಯನ್ನು ವಿವರಿಸದೆ ಅವಾಂತರ ಸೃಷ್ಟಿಸಿದವರ ಮೇಲೆ ತನಿಖೆ ಮಾಡುವಂತೆ ಮುಖ್ಯಮಂತ್ರಿಗಳನ್ನು ಸತೀಶ್ ಜಾರಕಿಹೊಳಿಯವರು, ವಿನಂತಿಸಿದ್ದಾರೆ. ಅಕ್ಟೋಬರ್ 6ರಂದು ನಿಪ್ಪಾಣಿಯಲ್ಲಿ ಜರುಗಿದ ಮಾನವ ಬಂಧುತ್ವ ವೇದಿಕೆ ಕರ್ನಾಟಕ ಇದರ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಸತೀಶ್ ಜಾರಕಿಹೊಳಿ ಅವರು, ಹಿಂದೂ ಪದದ ಬಗ್ಗೆ ವಿವಾದಿತ ಹೇಳಿಕೆ ನೀಡಿದ್ದರು. ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲಾ ಅವರು ಅದೇ ದಿನ ಸತೀಶ್ ಜಾರಕಿಹೊಳಿಯವರ ಹೇಳಿಕೆಯನ್ನು ಖಂಡಿಸಿದ್ದರು.

ಅದೇ ವೇಳೆ ಬಿಜೆಪಿ ಸತೀಶ್ ಜಾರಕಿಹೊಳಿ ಮತ್ತು ಕಾಂಗ್ರೆಸ್ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆ ತೀವ್ರಗೊಳಿಸಿತ್ತು. ಇಂದು (ಬುಧವಾರ) ರಾಜ್ಯಾದ್ಯಂತ ಜಾರಕಿಹೊಳಿ ಹೇಳಿಕೆ ವಿರುದ್ಧ ಪ್ರತಿಭಟನೆ ನಡೆಸುವಂತೆ ತನ್ನ ಸಂಸದರು, ಶಾಸಕರು ಹಾಗೂ ಕಾರ್ಯಕರ್ತರಿಗೆ ಸೂಚನೆ ನೀಡಿತ್ತು. ಪ್ರತಿಭಟನೆ ವೇಳೆ ಗಾಂಧಿ ಕುಟುಂಬದ ಉಪನಾಮದ ವಿಷಯ, ಮುಖ್ಯಮಂತ್ರಿಯಾಗಿದ್ದಾಗ ಸಿದ್ದರಾಮಯ್ಯ ಟಿಪ್ಪು ಜಯಂತಿ ಆಚರಿಸಿದ ವಿಚಾರ ಹಾಗೂ ಡಿ.ಕೆ. ಶಿವಕುಮಾರ್ ಯೇಸು ಪ್ರತಿಮೆ ಸ್ಥಾಪನೆಗೆ ಮುಂದಾದ ವಿಷಯಗಳನ್ನು ಪ್ರಸ್ತಾಪಿಸಲು ಸೂಚಿಸಿತ್ತು. ಅಲ್ಲದೇ ಸತೀಶ್ ಜಾರಕಿ ಹೊಳಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಪ್ರತಿಭಟನೆ ನಂತರ ಜಿಲ್ಲಾಧಿಕಾರಿಗಳಿಗೆ ಮನವಿ ನೀಡಬೇಕು ಎಂದು ರಾಜ್ಯ ಬಿಜೆಪಿ ಘಟಕದಿಂದ ಸೂಚನೆ ನೀಡಲಾಗಿತ್ತು. ಈ ಹಿನ್ನೆಲೆಯಲ್ಲಿ ಇಂದು ರಾಜ್ಯಾದ್ಯಂತ ಹಲವೆಡೆ ಸತೀಶ್ ಜಾರಕಿಹೊಳಿ ವಿರುದ್ಧ ಪ್ರತಿಭಟನೆಗಳು ನಡೆದವು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ನ.12, ಜಿಲ್ಲಾ ನ್ಯಾಯಾಲಯದ ನೂತನ ಕಟ್ಟಡ ಉದ್ಘಾಟನೆ

ಮಡಿಕೇರಿ,ನ.9– ಮಡಿಕೇರಿಯಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಜಿಲ್ಲಾ ನ್ಯಾಯಾಲಯದ ಸಂಕೀರ್ಣ ನ.12ರಂದು ಉದ್ಘಾಟನೆಗೊಳ್ಳಲಿದ್ದು, ನ.14ರಿಂದ ಕಾರ್ಯ, ಕಲಾಪಗಳು ಆರಂಭಗೊಳ್ಳಲಿವೆ ಎಂದು ಬಾರ್ ಅಸೋಸಿಯೇಷನ್ ಅಧ್ಯಕ್ಷ, ವಕೀಲ ಕೆ.ಡಿ.ದಯಾನಂದ್ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ನ್ಯಾಯಾಂಗ, ಕೊಡಗು–ಮಡಿಕೇರಿ ಲೋಕೋಪಯೋಗಿ ಇಲಾಖೆ ಮತ್ತು ಕೊಡಗು ಜಿಲ್ಲಾ ಬಾರ್ ಅಸೋಸಿಯೇಷನ್ ಸಂಯುಕ್ತಾಶ್ರಯದಲ್ಲಿ ಮಡಿಕೇರಿಯ ವಿದ್ಯಾನಗರದಲ್ಲಿ ನೂತನವಾಗಿ ನಿರ್ಮಿಸಲಾದ ಜಿಲ್ಲಾ ನ್ಯಾಯಾಲಯ ಸಂಕೀರ್ಣವನ್ನು ಭಾರತ ಸರ್ವೋಚ್ಚ ನ್ಯಾಯಾಲಯ ನ್ಯಾಯಮೂರ್ತಿಗಳಾದ ನ್ಯಾಯಮೂರ್ತಿ ಎ.ಎಸ್.ಬೋಪಣ್ಣ ಉದ್ಘಾಟಿಸಲಿದ್ದಾರೆ.

ಅಧ್ಯಕ್ಷತೆಯನ್ನು ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ.ವರಾಳೆ ವಹಿಸಲಿದ್ದು, ವಿಶೇಷ ಆಹ್ವಾನಿತರಾಗಿ ಕರ್ನಾಟಕ ಹೈಕೋರ್ಟ್ ಮತ್ತು ಆಡಳಿತಾತ್ಮಕ ನ್ಯಾಯಾಧೀಶ ಈ.ಎಸ್.ಇಂದಿರೇಶ್, ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಎಂ.ಜಿ.ಶುಕುರೆ ಕಮಲ್, ಸಿ.ಎಂ.ಪೂಣಚ್ಚ, ಕೊಡಗು ಜಿಲ್ಲಾ ಉಸ್ತುವಾರಿ ಹಾಗೂ ಶಿಕ್ಷಣ ಸಚಿವ ಬಿ.ಸಿ.

ನ.14ರಿಂದ ಕಾರ್ಯ–ಕಲಾಪಗಳು ಆರಂಭ



ನಾಗೇಶ್, ಕಾನೂನು ಸಂಸದೀಯ ಹಾಗೂ ಸಣ್ಣ ನೀರಾವರಿ ಸಚಿವ ಜೆ.ಸಿ ಮಾಧುಸ್ವಾಮಿ, ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ್ ಪಾಲ್ಗೊಳ್ಳಲಿದ್ದಾರೆ.

ಅತಿಥಿಗಳಾಗಿ ವಿರಾಜಪೇಟೆ ವಿಧಾನ ಸಭಾ ಕ್ಷೇತ್ರದ ಶಾಸಕ ಕೆ.ಜಿ.ಬೋಪಯ್ಯ, ಕೊಡಗು–ಮೈಸೂರು ಸಂಸದ ಪ್ರತಾಪ್ ಸಿಂಹ, ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್, ಕರ್ನಾಟಕ ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್ ಮುರಳೀಧರ ಪೈ ಭಾಗವಹಿಸಲಿದ್ದಾರೆ ಎಂದು ಕೆ.ಡಿ.ದಯಾನಂದ್ ತಿಳಿಸಿದರು.

36.6 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಿರುವ ಈ ಸಂಕೀರ್ಣಕ್ಕೆ 2012ರಲ್ಲಿ ಜಾಗ ಮಂಜೂರಾಗಿದ್ದು, 2014ರಲ್ಲಿ ಕಾಮಗಾರಿ ಪ್ರಾರಂಭವಾಗಿದೆ. ಇದೀಗ ಉದ್ಘಾಟನೆಗೆ ಸಜ್ಜಾಗಿದ್ದು, ಇದೇ ದಿನ ಕಾನೂನು ಸೇವಾ ಪ್ರಾಧಿಕಾರದ ಕಟ್ಟಡವು ಉದ್ಘಾಟನೆಗೊಳ್ಳಲಿದೆ ಎಂದರು.

ಬಸ್ ವ್ಯವಸ್ಥೆ: ನೂತನ ಕಟ್ಟಡ ಮಡಿಕೇರಿಯ ಮುಖ್ಯಕೇಂದ್ರದಿಂದ 3 ಕಿ.ಮೀ ದೂರದಲ್ಲಿರುವುದರಿಂದ ವಕೀಲರಿಗೆ ಹಾಗೂ ಕಕ್ಷಿದಾರರಿಗೆ ತೆರಳಲು ಬಸ್ ವ್ಯವಸ್ಥೆ ಕಲ್ಪಿಸುವಂತೆ ಹಾಗೂ ಸುಗಮ ಸಂಚಾರಕ್ಕೆ ಕಿರಿದಾದ ರಸ್ತೆಯನ್ನು ವಿಸ್ತರಿಸುವಂತೆ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದ್ದು, ವ್ಯವಸ್ಥೆ ಕಲ್ಪಿಸುವುದಾಗಿ ಭರವಸೆ ನೀಡಿದ್ದಾರೆ ಎಂದರು.

ಈಗಾಗಲೇ ನ್ಯಾಯಾಧೀಶರಿಗೆ ವಾಹನ, ಕಕ್ಷಿದಾರರಿಗಾಗಿ ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ವಕೀಲರ ವಾಹನ ನಿಲುಗಡೆಗಾಗಿ 36 ಲಕ್ಷ ರೂ. ವೆಚ್ಚದಲ್ಲಿ ನೂತನ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗುತ್ತಿದ್ದು, ಸದ್ಯದಲ್ಲೇ ಪೂರ್ಣಗೊಳ್ಳಲಿದೆ ಎಂದರು.

ಹಳೆ ಕಟ್ಟಡಕ್ಕೆ ಕೃತಜ್ಞತೆ: 1971ರಲ್ಲಿ ನಗರದ ಕೋಟೆ ಆವರಣದಲ್ಲಿ ಪ್ರಾರಂಭವಾದ ಕಟ್ಟಡದೊಂದಿಗೆ ಹಲವು ವಕೀಲರು, ಪೋಲೀಸ್ ಅಧಿಕಾರಿ, ಸಿಬ್ಬಂದಿಗಳಿಗೆ ಭಾವನಾತ್ಮಕ ಸಂಬಂಧ ಹೊಂದಿದ್ದು, ಈ ಕೃತಜ್ಞತೆಯೊಂದಿಗೆ, ಪೋಲೀಸ್ ಇಲಾಖೆ ಸಿಬ್ಬಂದಿಗಳಿಂದ ಚಪ್ಪಾಳೆ ತಟ್ಟುವ ಮೂಲಕ ಕೃತಜ್ಞತೆ ಸಲ್ಲಿಸಲಾಗಿದೆ ಎಂದರು.

ಸಂಘದ ಉಪಾಧ್ಯಕ್ಷ ರತನ್ ತಮ್ಮಯ್ಯ ಮಾತನಾಡಿ, ನೂತನ ಕಟ್ಟಡದಲ್ಲಿ 9 ಸ್ಥಾನಗಳಿದ್ದು 5 ಕೋರ್ಟ್‌ಗಳಲ್ಲಿ ನಿರಂತರ ಕಾರ್ಯಭಾರ ನಡೆಯಲಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಕಾರ್ಯದರ್ಶಿ ಅರುಣ್ ಕುಮಾರ್, ಜಂಟಿ ಕಾರ್ಯದರ್ಶಿ ಸಂಜಯ್ ರಾಜ್ ಉಪಸ್ಥಿತರಿದ್ದರು.

ಕರಡು ಮತದಾರರ ಪಟ್ಟಿ ಪ್ರಕಟ

ಮತದಾರ ಪಟ್ಟಿ ಸೇರ್ಪಡೆ, ತಿದ್ದುಪಡಿ, ತೆಗೆಯುವುದು



ಮಡಿಕೇರಿ, ನ.9– ಭಾರತ ಚುನಾವಣಾ ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆಯನ್ನು ಚುನಾವಣಾ ಆಯೋಗದ ನಿರ್ದೇಶನದಂತೆ ಈಗಾಗಲೇ ಕೈಗೊಳ್ಳಲಾಗಿದ್ದು, ಈ ಸಂಬಂಧ ಕರಡು ಮತದಾರರ ಪಟ್ಟಿಯನ್ನು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಬುಧವಾರ ಪ್ರಕಟಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ವಿವಿಧ ರಾಜಕೀಯ ಪಕ್ಷಗಳ ಪ್ರಮುಖರ ಜೊತೆ ನಡೆದ ಸಭೆಯ ಸಂದರ್ಭದಲ್ಲಿ ಕರಡು ಮತದಾರರ ಪಟ್ಟಿ ಬಿಡುಗಡೆ ಮಾಡಿ ಮಾತನಾಡಿದರು.

ಭಾರತ ಚುನಾವಣಾ ಆಯೋಗವು ಪ್ರತೀ ವರ್ಷದಂತೆ ಈ ವರ್ಷವೂ 18 ವರ್ಷ ಪೂರ್ಣಗೊಂಡವರನ್ನು ಮತದಾರರ ಪಟ್ಟಿಗೆ ನೋಂದಣಿ ಮಾಡಲು ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣಾ ಕಾರ್ಯ ಕೈಗೊಂಡಿದ್ದು, ಈ ಸಂಬಂಧ ಕರಡು ಮತದಾರರ ಪಟ್ಟಿ ಪ್ರಕಟಿಸಲಾಗಿದೆ. ಆ ದಿಸೆಯಲ್ಲಿ ಡಿ.8 ರವರೆಗೆ ಆಕ್ಷೇಪಣೆ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾಧಿಕಾರಿ ಅವರು ತಿಳಿಸಿದರು.

ಭಾರತ ಚುನಾವಣಾ ಆಯೋಗವು ಮತದಾರರ ಪಟ್ಟಿಗೆ ಹೆಸರು ನೋಂದಾಯಿಸಲು ಅರ್ಹರಿಗೆ ಅವಕಾಶ ಮಾಡಿದೆ. ಆ ನಿಟ್ಟಿನಲ್ಲಿ ಜನವರಿ, ಏಪ್ರಿಲ್, ಜುಲೈ ಮತ್ತು ಅಕ್ಟೋಬರ್ 1 ರಂದು 18 ವರ್ಷ ಪೂರ್ಣಗೊಳ್ಳುವ ಯುವ ಜನರು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಹೇಳಿದರು.

ಜನವರಿ, ಏಪ್ರಿಲ್, ಜುಲೈ ಮತ್ತು ಅಕ್ಟೋಬರ್ 1, 2023ಕ್ಕೆ 18 ವರ್ಷ ಪೂರ್ಣಗೊಳ್ಳುವ ಯುವಕ ಮತ್ತು ಯುವತಿಯರು ಹಾಗೂ 18 ವರ್ಷ ಮೇಲ್ಪಟ್ಟವರು ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗದೆ ಇದ್ದಲ್ಲಿ ಮತದಾರರ ಪಟ್ಟಿಗೆ ಹೆಸರು ಸೇರಿಸಲು ನಮೂನೆ–6 ರಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಅವರು ಹೇಳಿದರು.

ಈಗಾಗಲೇ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗಿರುವ ಮತದಾರರು ಮೃತ ಪಟ್ಟಿದ್ದಲ್ಲಿ, ಸ್ಥಳಾಂತರ ಗೊಂಡಿದ್ದಲ್ಲಿ ಅಥವಾ ಪುನರಾವರ್ತನೆ ಆಗಿದ್ದಲ್ಲಿ ನಮೂನೆ 7 ರಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಆ ನಿಟ್ಟಿನಲ್ಲಿ ವಿವಿಧ ಪಕ್ಷಗಳ ಪ್ರಮುಖರು ತಮ್ಮ ತಮ್ಮ ವಾರ್ಡ್ ಮತ್ತು ಗ್ರಾಮಗಳಲ್ಲಿ ಈ ಬಗ್ಗೆ ಗಮನಹರಿಸಬೇಕಿದೆ ಎಂದು ಜಿಲ್ಲಾಧಿಕಾರಿ ಅವರು ಕೋರಿದರು.

ಮತದಾರರ ನಿವಾಸ ಬದಲಾವಣೆ, ಪ್ರಸ್ತುತ ಮತದಾರರ ಪಟ್ಟಿಯಲ್ಲಿ ನಮೂದುಗಳ ತಿದ್ದುಪಡಿಗಾಗಿ, ಬದಲಿ ಮತದಾರರ ಗುರುತಿನ ಚೀಟಿ ನೀಡುವುದು ಮತ್ತು ವಿಕಲಚೇತನರ ಗುರುತಿಸುವುದಕ್ಕೆ ನಮೂನೆ 8 ರಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಹಾಗೆಯೇ ಅನಿವಾಸಿ ಭಾರತೀಯರು ಮತದಾರರ ಪಟ್ಟಿಗೆ ಹೆಸರು ಸೇರಿಸಲು ನಮೂನೆ 6ರಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು. ನವೆಂಬರ್ 9 ರಿಂದ ಡಿಸೆಂಬರ್ 8 ರವರೆಗೆ ಆಯಾಯ ಮತಗಟ್ಟೆಯ ಬೂತ್ ಮಟ್ಟದ ಅಧಿಕಾರಿಗಳಿಗೆ ಮತ್ತು ಸಂಬಂಧಪಟ್ಟ ತಾಲೂಕು ಕಚೇರಿಗಳಿಗೆ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಅಲ್ಲದೇ ಮತದಾರರು https://www.nvsp.in ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಮತ್ತು https://voterportal.eci.gov.in ಮತ್ತು ವಿಎಚ್‌ಎ ಮೊಬೈಲ್ ಆಪ್ ಮೂಲಕ ನಮೂನೆ 6ಎ, ನಮೂನೆ 7 ಮತ್ತು ನಮೂನೆ 8ನ್ನು ಸಲ್ಲಿಸಬಹುದಾಗಿದೆ ಎಂದರು. ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ ಸಂಬಂಧ ಇದೇ ನ.12, 20, ಡಿ.3 ಮತ್ತು 4 ರಂದು ಜಿಲ್ಲೆಯ 542 ಮತಗಟ್ಟೆ ಗಳಲ್ಲಿ ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, 18 ವರ್ಷ ಮೇಲ್ಪಟ್ಟವರೆಲ್ಲರೂ ಇದರ ಸದುಪಯೋಗ ಪಡೆದುಕೊಳ್ಳುವಂತೆ ಅವರು ಕೋರಿದರು.

ಸರ್ವೇಗೆಂದು ತೆರಳಿದ್ದ ಅರಣ್ಯ ವೀಕ್ಷಕ ಆಕಸ್ಮಿಕ ಹೊಳೆಗೆ ಬಿದ್ದು ಸಾವು

ಮಡಿಕೇರಿ,ನ.9– ಸರ್ವೇಗೆಂದು ತೆರಳಿದ್ದ ಅರಣ್ಯ ಸಿಬ್ಬಂದಿಯೊಬ್ಬರು ಆಕಸ್ಮಿಕವಾಗಿ ಹೊಳೆಗೆ ಬಿದ್ದು ಮೃತಪಟ್ಟಿರುವ ಘಟನೆ ಸುಳ್ಯ ತಾಲೂಕಿನ ತೊಡಿಕಾನ ಸಮೀಪದ ಮಾವಿನಕಟ್ಟೆ ನರುವೋಳು ಎಂಬಲ್ಲಿ ನಡೆದಿದೆ.



ಭಾಗಮಂಡಲ ವಲಯ ತೊಡಿಕಾನ ಶಾಖೆಯಲ್ಲಿ ಅರಣ್ಯ ವೀಕ್ಷಕರಾಗಿದ್ದ ಚಿಣ್ಣಪ್ಪ(57) ಮೃತ ದುರ್ದೈವಿ. ಮಂಗಳವಾರ ಸಂಜೆ ಈ ಘಟನೆ ನಡೆದಿದ್ದು, ಇಂದು ಹೊಳೆಯಲ್ಲಿ ಮೃತದೇಹ ದೊರೆತಿದೆ.

ಅರಣ್ಯ ಇಲಾಖೆಯ ಕೊಡಗು ವೃತ್ತದಿಂದ ಭೂಮಿಯ ಸರ್ವೇಗೆಂದು ತೊಡಿಕಾನಕ್ಕೆ ಹೋದ ಸಂದರ್ಭ ಆಕಸ್ಮಿಕವಾಗಿ ಹೊಳೆಗೆ ಬಿದ್ದಿರಬಹುದೆಂದು ಅಂದಾಜಿಸಲಾಗಿದೆ. ಸ್ಥಳಕ್ಕೆ ಭಾಗಮಂಡಲ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಸವಲತ್ತು ಪಡೆಯಲು ಕಟ್ಟಡ, ಇತರೆ ನಿರ್ಮಾಣ ಕಾರ್ಮಿಕರಿಗೆ ಕರೆ

ವಿರಾಜಪೇಟೆ, ನ.9– ಕಾರ್ಮಿಕರಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಯೋಜನೆಯಡಿ ನೋಂದಣಿಯಾದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಲು ಮುಂದಾಗಬೇಕು ಎಂದು ವಿರಾಜಪೇಟೆ ಹಿರಿಯ ಕಾರ್ಮಿಕ ನಿರೀಕ್ಷಕ ಎಂ.ಸಿ.ಮಾದಪ್ಪ ತಿಳಿಸಿದ್ದಾರೆ.

ವಿರಾಜಪೇಟೆ ಪಟ್ಟಣ ಸಹಕಾರ ಬ್ಯಾಂಕ್ ಸಭಾಂಗಣದಲ್ಲಿ ಆಯೋಜಿಸಿದ್ದ 'ಕೊಡಗು ಡಿಸ್ಟ್ರಿಕ್ಟ್ ಬಿಲ್ಡಿಂಗ್ ವರ್ಕರ್ಸ್ ಯೂನಿಯನ್ ಸಂಘಟನೆಯ 18ನೇ ವರ್ಷದ ವಾರ್ಷಿಕ ಮಹಾಸಭೆ' ಹಾಗೂ ಗುರುತಿನ ಚೀಟಿ ವಿತರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, 2022ರ ಸಾಲಿನ ಪ್ರಕಾರ ನೋಂದಣಿ ಪಡೆದ ಕಾರ್ಮಿಕರ ಮಕ್ಕಳಿಗೆ ಎಲ್‌ಕೆಜಿಯಿಂದ ಉನ್ನತ ಶಿಕ್ಷಣದವರೆಗೆ ಧನ ಸಹಾಯ ನೀಡುತ್ತಿದ್ದು, ಕಾರ್ಮಿಕರು ಈ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಂಡು ತಮ್ಮ ಮಕ್ಕಳನ್ನು ವಿದ್ಯಾವಂತರಾಗಿ ಮಾಡಬೇಕು ಎಂದರು.



ಬಿಲ್ಡಿಂಗ್ ವರ್ಕರ್ಸ್ ಯೂನಿಯನ್ ಸಂಘಟನೆಯ ಕಾನೂನು ಸಲಹೆಗಾರ ವಕೀಲ ಟಿ.ಪಿ. ಕೃಷ್ಣ ಅವರು ಮಾತನಾಡಿ, ಸಂಘಟನೆಯೊಂದಿಗೆ ಕಾರ್ಮಿಕರು ಹೊಂದಾಣಿಕೆಯಿಂದ ಉತ್ತಮ ರೀತಿ ಸಮಸ್ಯೆಗಳು ಬಾರದಂತೆ ನಡೆದುಕೊಳ್ಳುವುದರೊಂದಿಗೆ ಸಂಘಟನೆ ಮೂಲಕ ಕಾರ್ಮಿಕರು ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಪಡೆದುಕೊಳ್ಳಲು ಮುಂದಾಗಬೇಕು ಎಂದರು.

ಮಡಿಕೇರಿ ಕಾರ್ಮಿಕ ಇಲಾಖೆಯ ಸಹಾಯಕ ಅಧಿಕಾರಿ ಪ್ರಸನ್ನ ಕುಮಾರ್ ಮಾತನಾಡಿ, ಕಾರ್ಮಿಕ ಇಲಾಖೆ ಮೂಲಕ ಸರ್ಕಾರ ಕೋವಿಡ್ ಸಂದರ್ಭದಲ್ಲಿ ಕಾರ್ಮಿಕರ ಖಾತೆಗೆ 5 ಸಾವಿರ ರೂ. ಹಾಗೂ ಎರಡನೇ ಸಂದರ್ಭ 3 ಸಾವಿರ ರೂ.ಗಳನ್ನು ಧನ ಸಹಾಯ ಹಾಗೂ ಕಾರ್ಪೆಂಟಿಂಗ್, ಗಾರೆ ಕೆಲಸಗಾರರು, ಪ್ಲಂಬಿಂಗ್, ಎಲೆಕ್ಟ್ರಿಷಿಯನ್, ಬಾರ್‌ಬೆಂಡಿಗ್, ಪೇಂಟಿಂಗ್ ಕೆಲಸ ಮಾಡುವ ಕಾರ್ಮಿಕರಿಗೂ ಅಹಾರ ಕಿಟ್‌ಗಳನ್ನು ವಿತರಿಸಲಾಗಿದೆ ಎಂದರು.

ಕಟ್ಟಡ ಕಾರ್ಮಿಕರ ಸಂಘದ ಜಿಲ್ಲಾ ಅಧ್ಯಕ್ಷ ಸಿ.ಜಿ.ವರ್ಗಿಸ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ 18 ವರ್ಷಗಳಿಂದ ಯಾವುದೇ ಸಮಸ್ಯೆಗಳಿಲ್ಲದೆ ಸಂಘಟನೆಯನ್ನು ನಡೆಸಿಕೊಂಡು ಬಂದಿದ್ದು ಈ ಎಲ್ಲಾ ಸೌಲಭ್ಯಗಳನ್ನು ಒದಗಿಸಿ ಕೊಟ್ಟಂತ ಸರ್ಕಾರ, ಕಾರ್ಮಿಕ ಇಲಾಖೆ ಮುಂದೆಯೂ ಸಹಕಾರ ನೀಡುವಂತಾಗಲಿ ಎಂದರು

ವಿರಾಜಪೇಟೆ ತಾಲೂಕು ಬ್ಯಾಡ್‌ಮಿಂಟನ್ ಅಸೋಸಿಯೇಷನ್‌ನ ಪಿ.ಜಿ.ಸುಮೇಶ್, ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಕೆ.ಪವಿತ್ರನ್, ಖಜಾಂಚಿ ಪಿ.ಆರ್.ಮುರುಗೇಶ್, ಎಂ.ಕೆ ಬಾಬು, ಕಾರ್ಮಿಕ ಇಲಾಖೆಯ ಸಹಾಯಕ ಅಧಿಕಾರಿ ಎಸ್.ನವೀನ್ ಉಪಸ್ಥಿತರಿದ್ದರು ಸಂಘದ ಅಂತೋಣಿ ಮ್ಯಾಥ್ಯು ಸ್ವಾಗತಿಸಿ ನಿರೂಪಿಸಿದರು.

ಸಭೆಯಲ್ಲಿ ಈ–ಶ್ರಾಮ್ ಕಾರ್ಡ್, ಬಸ್ ಪಾಸ್ ಮತ್ತು ಗುರುತಿನ ಚೀಟಿಯನ್ನು ಅತಿಥಿಗಳು ವಿತರಿಸಿದರು.

ಶ್ರೀ ಓಂಕಾರೇಶ್ವರ ದೇವಾಲಯದಲ್ಲಿ ಕಾರ್ತಿಕ ಹುಣ್ಣಿಮೆ ತೆಪ್ಪೋತ್ಸವ

ಮಡಿಕೇರಿ,ನ.9– ಮಡಿಕೇರಿಯ ಇತಿಹಾಸ ಪ್ರಸಿದ್ಧ ಶ್ರೀ ಓಂಕಾರೇಶ್ವರ ದೇವಾಲಯದಲ್ಲಿ ಕಾರ್ತಿಕ ಹುಣ್ಣಿಮೆ ಅಂಗವಾಗಿ ಶ್ರದ್ಧಾಭಕ್ತಿಯಿಂದ ತೆಪ್ಪೋತ್ಸವ ನಡೆಯಿತು.

ದೇವಾಲಯದ ಆವರಣದಲ್ಲಿರುವ ಕಲ್ಯಾಣಿಯಲ್ಲಿ ಪುಷ್ಪಾಲಂಕೃತ ತೆಪ್ಪದ ಮೇಲೆ ಬೆಳ್ಳಿ ಮೂರ್ತಿಯನ್ನು ಕೂರಿಸಿ ತೆಪ್ಪೋತ್ಸವ ಮಾಡಲಾಯಿತು. ಇದಕ್ಕೂ ಮೊದಲು ದೇವಾಲಯದಲ್ಲಿ ವಿವಿಧ ಪೂಜೆ ಪುನಸ್ಕಾರಗಳನ್ನು ನೆರವೇರಿಸಲಾಯಿತು. ಪಲ್ಲಕ್ಕಿಯಲ್ಲಿ ಕೂರಿಸಿ ದೇವಾಲಯದ ಆವರಣದಲ್ಲೇ ಉತ್ಸವ ಮಾಡಲಾಯಿತು. ನಂತರ ಅದೇ ಪಲ್ಲಕ್ಕಿಯಲ್ಲಿ ಈಶ್ವರನ್ನು ಕರೆತಂದು ತೆಪ್ಪದಲ್ಲಿ ಕೂರಿಸಿ ಕಲ್ಯಾಣಿಯಲ್ಲಿ ಉತ್ಸವ ಮಾಡಲಾಯಿತು. ಬೃಹತ್ ಕಲ್ಯಾಣಿಯಲ್ಲಿ ಮೂರು ಸುತ್ತು ತೆಪ್ಪೋತ್ಸವ ಮಾಡಲಾಯಿತು. ವರ್ಷಕ್ಕೊಮ್ಮೆ ನಡೆಯುವ ಈ ತೆಪ್ಪೋತ್ಸವಕ್ಕೆ ನೂರಾರು ಭಕ್ತರು ಆಗಮಿಸಿ ತೆಪ್ಪೋತ್ಸವವನ್ನು ಕಣ್ತುಂಬಿಕೊಂಡರು.

ಚಾಮರಾಜನಗರ ಜಿಲ್ಲಾ ಬೆಳ್ಳಿಹಬ್ಬ ಮಹೋತ್ಸವ

ರಾಜಕೀಯ ನಿವೃತ್ತಿ ಹೊಂದುತ್ತೇನೆ: ಶ್ರೀನಿವಾಸಪ್ರಸಾದ್ ಪುನರುಚ್ಚಾರ

ಚಾಮರಾಜನಗರ, ನ.9– ರಾಜಕೀಯ ನಿವೃತ್ತಿ ತೆಗೆದುಕೊಳ್ಳುವುದಾಗಿ ಸಂಸದ ವಿ. ಶ್ರೀನಿವಾಸಪ್ರಸಾದ್ ಪುನರುಚ್ಚರಿಸಿದರು.



ನಗರದ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾ ರಾಜ್ಯ ಘಟಕದ ವತಿಯಿಂದ ಆಯೋಜಿಸಿದ್ದ ಚಾಮರಾಜನಗರ ಜಿಲ್ಲಾ ಬೆಳ್ಳಿಹಬ್ಬ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ಲೋಕಸಭಾ ಚುನಾವಣೆಯಲ್ಲಿ 14 ಬಾರಿ ಸ್ಪರ್ಧಿಸಿದ್ದು 9 ಬಾರಿ ಸಂಸದರಾಗಿ ಸಾಕಷ್ಟು ಏಳುಬೀಳು ಕಂಡಿದ್ದೇನೆ. ನನ್ನ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಆರೋಗ್ಯ ಸಮಸ್ಯೆಯಿಂದಾಗಿ ರಾಜಕೀಯ ನಿವೃತ್ತಿ ಬಯಸಿದ್ದೇನೆ. ಮುಂಬರುವ ಚುನಾವಣೆ ಯಾರಾದರೂ ಸ್ಪರ್ಧಿಸಿ ಗೆದ್ದು ಕ್ಷೇತ್ರವನ್ನು ಮುನ್ನಡೆಸಲಿ ಎಂದರು.

ಸಮಸ್ತ ಕನ್ನಡಿಗರ ಧ್ವನಿ ವಾಟಾಳ್ ನಾಗರಾಜ್: ಚಾಮರಾಜನಗರವನ್ನು ಜಿಲ್ಲೆ ಮಾಡುವಲ್ಲಿ ವಾಟಾಳ್ ನಾಗರಾಜ್ ಅವರ ಪರಿಶ್ರಮ ಅಪಾರವಾಗಿದೆ. ಮೈಸೂರು, ಪ್ರಾಂತ್ಯದಲ್ಲಿ 9 ಜಿಲ್ಲೆಗಳಿದ್ದು, ವಿಂಗಡನೆಯಾಗಿದ್ದ ಕರ್ನಾಟಕವನ್ನು ಅಂದಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರು ಒಪ್ಪಿಗೆ ನೀಡಿದ್ದರಿಂದ ಕರ್ನಾಟಕ ಏಕೀಕರಣವಾಯಿತು. ಇಲ್ಲದಿದ್ದರೆ ಆಗುತ್ತಿರಲಿಲ್ಲ. ಆಡಳಿತಾತ್ಮಕವಾಗಿ ಹೆಚ್ಚು ಜಿಲ್ಲೆ ಮಾಡುವಂತೆ ಹೋರಾಟಗಳು ನಡೆಯುತ್ತಿತ್ತು. ಸಮಿತಿಗಳನ್ನು ರಚನೆ ಮಾಡಲಾಯಿತು. ಚಾಮರಾಜನಗರ ಜಿಲ್ಲೆ ಮಾಡುವ ಸಂದರ್ಭದಲ್ಲಿ ಸರ್ಕಾರದಲ್ಲಿ ಚಾಮರಾಜನಗರ ಮತ್ತು ಕೊಳ್ಳೇಗಾಲ ಜಿಲ್ಲೆ ಮಾಡುವಂತೆ ಸರ್ಕಾರ ಶೈತ್ಯಾಗಾರದಲ್ಲಿ ಕಡತ ಇತ್ತು. ಆಗ ನಾನೂ ಚಾಮರಾಜನಗರವನ್ನು ಜಿಲ್ಲೆಮಾಡುವಂತೆ ಸಲಹೆ, ಸೂಚನೆ ಕೊಟ್ಟಿರುತ್ತೇನೆ. ಈ ಕಾರ್ಯಕ್ರಮದಲ್ಲಿ ವಾಟಾಳ್ ನಾಗರಾಜ್ ಅವರನ್ನು ಸನ್ಮಾನಿಸಿರುವುದು ಬಹಳ ಅರ್ಥಪೂರ್ಣ, ಪ್ರಸ್ತುತವಾಗಿದೆ ಎಂದರು.

ಶ್ರೀನಿವಾಸಪ್ರಸಾದ್ ಅವರನ್ನು ರಾಜ್ಯ ಸಭಾ ಸದಸ್ಯರಾಗಿ ನೇಮಿಸಲಿ: ಸನ್ಮಾನ ಸ್ವೀಕರಿಸಿದ ವಾಟಾಳ್ ನಾಗರಾಜ್ ಮಾತನಾಡಿ, ವಿ.ಶ್ರೀನಿವಾಸಪ್ರಸಾದ್ ಅವರೇ ಲೋಕಸಭೆಗೆ ಸ್ಪರ್ಧಿಸುವುದಿಲ್ಲ ಎಂದು ಹೇಳಿದ್ದೀರಿ. ಆದರೆ ಯಾವುದೇ ಪಕ್ಷ ಇರಲಿ, ರಾಜಕಾರಣ ಇರಲಿ, ಸರ್ಕಾರ ಇರಲಿ ನಿಮ್ಮನ್ನು ರಾಜ್ಯಸಭಾ ಸದಸ್ಯರಾಗಿ ಮಾಡುವ ಮೂಲಕ ನೀನು ರಾಜ್ಯಸಭೆಯಲ್ಲಿ ಇದ್ದರೆ ಅದಕ್ಕೊಂದು ಶಕ್ತಿ, ಒಂದು ಗೌರವ ಬರುತ್ತದೆ. ಇದನ್ನು ನಮ್ಮ ರಾಜ್ಯ, ದೇಶದಲ್ಲಿ ಅಧಿಕಾರದಲ್ಲಿರುವ ಪಕ್ಷ ಮಾಡಬೇಕಿದೆ ಎಂದರು.

ಶ್ರೀನಿವಾಸಪ್ರಸಾದ್ ಅವರಂತಹ ಅದ್ಭುತ ವ್ಯಕ್ತಿ ರಾಜಕೀಯ ನಿವೃತ್ತಿಯಾದರೇ ಅವರ ಪಕ್ಷಕ್ಕೆ ನಷ್ಟ. ಅ ಪಕ್ಷದಲ್ಲಿ ಏನೆಲ್ಲ ನಡೆಯುತ್ತದೆ. ಶ್ರೀನಿವಾಸಪ್ರಸಾದ್ ಅಲ್ಲಿ ಇದ್ದರೆ ಒಂದು ಶಕ್ತಿ ಬರುತ್ತದೆ ಎಂದರು. ನಿಮ್ಮನ್ನು ರಾಜ್ಯಸಭಾಗೆ ತರುವಂತೆ ಹೇಳಲು ಸಿದ್ಧವಿದ್ದೇನೆ. ನೀವು ರಾಜ್ಯಸಭಾಗೆ ಬರಬೇಕು ಮೈಸೂರಿನ ಮನೆಯಲ್ಲಿ ಮಲಗಬಾರದು, ಹೊರಗಡೆ ಓಡಾಡಬೇಕು. ದೆಹಲಿಗೆ ಹೋಗಲೇಬೇಕು, ಕರ್ನಾಟಕಕ್ಕೆ ಬರಲೇಬೇಕು ಎಂದರು.

ಶ್ರೀನಿವಾಸಗೌಡ ಮತ್ತು ತಂಡ ಇಂದು ಜಿಲ್ಲಾ ಬೆಳ್ಳಿಹಬ್ಬ ಮಹೋತ್ಸವ ಮಾಡಿರುವುದು ತುಂಬಾ ಸಂತೋಷ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಮಾತನಾಡಿ, ಚಾಮರಾಜನಗರ ಜಿಲ್ಲೆಯಾಗಿ 25 ವರ್ಷಗಳಾಗಿದ್ದು ಹಂತ ಹಂತವಾಗಿ ಅಭಿವೃದ್ಧಿಯಾಗುತ್ತಿದೆ ಎಂದರು.

ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಪ್ರಾಸ್ತಾವಿಕವಾಗಿ ಮಾತನಾಡಿ, 1969 ರಲ್ಲಿ ತಾಳವಾಡಿ ಮಹಾಜನ ವರದಿ ಪ್ರಕಾರ ಕರ್ನಾಟಕಕ್ಕೆ ಸೇರಿಸಬೇಕೆಂಬ ಹೋರಾಟದ ಫಲವಾಗಿ ಜಿಲ್ಲೆಯಲ್ಲಿ ಅನೇಕ ಕನ್ನಡಪರ ಸಂಘಟನೆಗಳ ಹೋರಾಟ ಪರಿಣಾಮ ಗಡಿಜಿಲ್ಲೆಯಲ್ಲಿ ಕನ್ನಡ ಗಟ್ಟಿಯಾಗಿದೆ.

ವಾಟಾಳ್ ನಾಗರಾಜ್ ಅವರು ಚಾಮರಾಜನಗರದ ಶಾಸಕರಾಗಿ ಇಲ್ಲದೆ ಹೋದರೆ ಚಾಮರಾಜನಗರ ಜಿಲ್ಲೆಯಾಗುತ್ತಿರಲಿಲ್ಲ. ಜಿಲ್ಲೆಗಾಗಿ ದಶಕಗಳ ಹೋರಾಟ ನಡೆಯಿತು. ರಾಮಸಮುದ್ರ ಮಹದೇವನಾಯಕ ಅವರನ್ನು ಅವರ ನೇತೃತ್ವದಲ್ಲಿ ಜಿಲ್ಲಾ ಹೋರಾಟ ಸಮಿತಿ ರಚಿಸಿಕೊಂಡು ಹೋರಾಟ ಮಾಡಲಾಯಿತು. ಸರ್ಕಾರ ಬೆಳ್ಳಿಹಬ್ಬದ ಮಾಡದೇ ನಿರ್ಲಕ್ಷ್ಯ ವಹಿಸಿದ್ದರಿಂದ ನಮ್ಮ ಸಂಘಟನೆ ವತಿಯಿಂದ ಚಾಮರಾಜನಗರ ಜಿಲ್ಲಾ ಬೆಳ್ಳಿಹಬ್ಬ ಮಹೋತ್ಸವ ಆಯೋಜಿಸಲಾಗಿದೆ ಎಂದರು.

ಸಂಸದ ಶ್ರೀನಿವಾಸಪ್ರಸಾದ್ ಅವರು 6 ಬಾರಿ ಸಂಸದರಾಗಿದ್ದು, ಸಚಿವರಾಗಿ ಸೇವೆ ಸಲ್ಲಿಸುವ ಮೂಲಕ ಆದರ್ಶ ರಾಜಕಾರಣಿಯಾಗಿದ್ದಾರೆ ಎಂದರು.

ಬೆಳ್ಳಿರಥದಲ್ಲಿ ವಾಟಾಳ್ ನಾಗರಾಜ್ ಮೆರವಣಿಗೆ

ಚಾಮರಾಜನಗರ, ನ.9– ಚಾಮರಾಜನಗರವನ್ನು ಜಿಲ್ಲೆಯನ್ನಾಗಿ ಮಾಡುವಲ್ಲಿ ಶ್ರಮವಹಿಸಿದ ಕನ್ನಡ ಚಳವಳಿಗಾರ ವಾಟಾಳ್ ನಾಗರಾಜ್ ಅವರನ್ನು ಸೂರ್ಯ ಬೆಳ್ಳಿರಥದಲ್ಲಿ ಕಲಾತಂಡಗಳೊಂದಿಗೆ ಮೆರವಣಿಗೆ ಮಾಡಲಾಯಿತು.

ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದಿಂದ ಜೆ.ಎಚ್.ಪಟೇಲ್ ಸಭಾಂಗಣವರೆಗೆ ಸಾಂಸ್ಕೃತಿಕ ಕಲಾತಂಡಗಳು, ಕನ್ನಡ ಬಾವುಟ ರಾರಾಜಿಸುವ ಮೂಲಕ ಬೆಳ್ಳಿರಥದಲ್ಲಿ ವಾಟಾಳ್ ನಾಗರಾಜ್ ಅವರನ್ನು ಮೆರವಣಿಗೆ ಮೂಲಕ ವೇದಿಕೆ ಕಾರ್ಯಕ್ರಮಕ್ಕೆ ಕರೆದೊಯ್ಯಲಾಯಿತು.

ವಾಟಾಳ್ ತಿ.ನರಸೀಪುರ ಸೂರ್ಯ ಸಿಂಹಾಸನ ಮಠದ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ಶ್ರೀ ಸಿದ್ದಮಲ್ಲೇಶ್ವರ ವಿರಕ್ತಮಠ ಚೆನ್ನಬಸವಸ್ವಾಮೀಜಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಮುಖಂಡರಾದ ಉಡಿಗಾಲ ಕುಮಾರಸ್ವಾಮಿ, ಜಿ.ಎಂ.ಗಾಡ್ಕರ್, ರೈತ ಮುಖಂಡ ಹೊನ್ನೂರು ಪ್ರಕಾಶ್, ಅಖಿಲ ಕರ್ನಾಟಕ ಕನ್ನಡ ಮಹಾಸಭಾ ಗೌರವ ಅಧ್ಯಕ್ಷ ಶಾ.ಮುರಳಿ, ಪ್ರಧಾನ ಕಾರ್ಯದರ್ಶಿ ಚಾ.ವೆಂ. ರಾಜಗೋಪಾಲ್, ಸಹ ಕಾರ್ಯದರ್ಶಿ ಪಣ್ಯದಹುಂಡಿ ರಾಜು, ಸಂಘಟನಾ ಕಾರ್ಯದರ್ಶಿ ಅರುಣ್ ಕುಮಾರ್‌ಗೌಡ, ಜಿಲ್ಲಾಧ್ಯಕ್ಷ ಸಾಗರ್‌ರಾವತ್, ನಿಜಧ್ವನಿ ಗೋವಿಂದರಾಜು, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಶೈಲಕುಮಾರ್, ಗಡಿನಾಡು ಕನ್ನಡ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಚಾ.ರಾ.ಕುಮಾರ್, ಶ್ರೀಗಂಧ ಕನ್ನಡ ಯುವ ವೇದಿಕೆ ಜಿಲ್ಲಾಧ್ಯಕ್ಷ ರವಿಚಂದ್ರ ಪ್ರಸಾದ್ ಕಹಳೆ ಇತರರು ಹಾಜರಿದ್ದರು. ವಿವಿಧ ಕ್ಷೇತ್ರದ ಸಾಧಕರುಗಳನ್ನು ಸನ್ಮಾನಿಸಲಾಯಿತು.

ಸತೀಶ್ ಜಾರಕಿಹೊಳಿ ವಿರುದ್ಧ ಬಿಜೆಪಿ ಪ್ರತಿಭಟನೆ



ಚಾಮರಾಜನಗರ, ನ.9– ಹಿಂದೂ ಪದ ಕುರಿತು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ನೀಡಿದ ಹೇಳಿಕೆ ಖಂಡಿಸಿ ನಗರದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಇಲ್ಲಿನ ಭುವನೇಶ್ವರಿ ವೃತ್ತದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು ಸತೀಶ್ ಜಾರಕಿಹೊಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಹಿಂದೂ ಎಂಬ ಶಬ್ದದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವುದು ಖಂಡನೀಯವಾಗಿದೆ. ಹಿಂದೂ ಎಂಬುದು ಜೀವನ ಪದ್ಧತಿ ಎಂದು ಸುಪ್ರೀಂ ಕೋರ್ಟ್ ಅಭಿಮತ ವ್ಯಕ್ತಪಡಿಸಿದೆ. ಮಹಾತ್ಮಗಾಂಧಿಯವರು ನಾನು ಹಿಂದೂ ಎನ್ನಲು ಅಭಿಮಾನ ಪಡುವೆ. ಏಕೆಂದರೆ ಹಿಂದೂ ಧರ್ಮ ಜಗತ್ತಿನಲ್ಲಿ ಮನುಷ್ಯರು ಬಾಳಲು ಉತ್ತಮ ವಾತಾವರಣ ಸೃಷ್ಟಿಸಿದೆ ಎಂದು ತಮ್ಮ ಬರಹಗಳಲ್ಲಿ ಉಲ್ಲೇಖಿಸಿದ್ದಾರೆ ಎಂದರು.

ಸತೀಶ್ ಜಾರಕಿಹೊಳಿ ಹಿಂದೂ ಪದದ ಬಗ್ಗೆ ನೀಡಿರುವ ಹೇಳಿಕೆ ದೇಶದ ಸಂಸ್ಕೃತಿ, ದೇಶದ ಜನರ ಜೀವನ ಪದ್ಧತಿ ಮತ್ತು ನಮ್ಮ ಸಂಸ್ಕೃತಿ ಪರಂಪರೆಯ ಜೀವನಧಾರಿತ ಪದ್ಧತಿಯಲ್ಲಿ ಸಾಗುತ್ತಿರುವ ಅಪಾರ ಹಿಂದೂ ಬಾಂಧವರ ಮನಸ್ಸಿಗೆ ನೋವು ಉಂಟಾಗಿದೆ. ಅಲ್ಲದೇ ಇವರ ಹೇಳಿಕೆಯಿಂದ ಸುಪ್ರೀಂಕೋರ್ಟ್ ಅಭಿಪ್ರಾಯವನ್ನು ವಿರೋಧಿಸಿದಂತಾಗಿದೆ ಎಂದರು.

ಸತೀಶ್ ಜಾರಕಿಹೊಳಿ ವಿರುದ್ಧ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಆರ್.ಸುಂದರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಿ.ನಾರಾಯಣಪ್ರಸಾದ್, ಮಂಗಲ ಶಿವಕುಮಾರ್, ನಾಗಶ್ರೀ ಪ್ರತಾಪ್, ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು, ನಗರಸಭೆ ಅಧ್ಯಕ್ಷ ಆಶಾ ನಟರಾಜು, ಮುಖಂಡರಾದ ಮಹದೇವಯ್ಯ, ಕೆಲ್ಲಂಬಳ್ಳಿ ಸೋಮನಾಯಕ, ಮೂಡ್ಲುಪುರ ನಂದೀಶ್, ಪ್ರಕಾಶ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಜಿಲ್ಲಾಧಿಕಾರಿಗಳಿಂದ ಸಾರ್ವಜನಿಕರ ಅಹವಾಲು ಆಲಿಕೆ

ಚಿಕ್ಕರಂಗನಾಥ ಕೆರೆ ಅತಿಕ್ರಮ ತೆರವಿಗೆ ತಹಸೀಲ್ದಾರ್‌ಗೆ ನಿರ್ದೇಶನ

ಕೊಳ್ಳೇಗಾಲ,ನ.9– ನಗರದ ಹೃದಯ ಭಾಗದಲ್ಲಿರುವ ಚಿಕ್ಕರಂಗನಾಥನ ಕೆರೆ ಒತ್ತುವರಿ ತೆರವುಗೊಳಿಸಿ ಕೈಗೊಂಡ ಕ್ರಮದ ಬಗ್ಗೆ ಕೂಡಲೇ ವರದಿ ನೀಡುವಂತೆ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ತಹಸಿಲ್ದಾರ್ ಮಂಜುಳಾ ರವರಿಗೆ ನಿರ್ದೇಶನ ನೀಡಿದರು.



ಅಹವಾಲು ಸ್ವೀಕರಿಸುವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜಿಲ್ಲಾಧಿಕಾರಿಗಳಿಗೆ ಗುಂಡಾಲ್ ಅಚ್ಚುಕಟ್ಟು ಹಿತರಕ್ಷಣಾ ಸಮಿತಿಯ ಅಧ್ಯಕ್ಷ ದಶರಥ್ ಹಾಗೂ ಪದಾಧಿಕಾರಿಗಳು ದೂರು ನೀಡಿ ಕೊಂಗಳ ಕೆರೆ, ತಟ್ಟೆಕೆರೆ ಹಾಗೂ ಚಿಕ್ಕರಂಗನಾಥ ಕರೆ ಅಭಿವೃದ್ಧಿಗೆ ಹಣ ಬಿಡುಗಡೆಯಾಗಿದ್ದು ಕರೆ ಒತ್ತುವರಿ ತೆರವುಗೊಳಿಸುವ ಕಾರ್ಯ ಮಾಡದೆ ಅಭಿವೃದ್ಧಿ ಮಾಡುವುದು ಸರಿಯಲ್ಲ, ಕೆರೆ ಒತ್ತುವರಿ ತೆರವುಗೊಳಿಸುವಂತೆ ಮನವಿ ಮಾಡಿದರು, ರೈತರ ದೂರಿಗೆ ಸ್ಪಂದಿಸಿದ ಡಿಸಿ ಮೊದಲ ಹಂತವಾಗಿ ಚಿಕ್ಕರಂಗನಾಥ ಕೆರೆ ಒತ್ತುವರಿ ತೆರವುಗೊಳಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಬಡವರಿಗೆ ನಿವೇಶನ ಹಂಚಿಕೆ ಮಾಡಲು ನೀಡಿರುವ ಭೂಮಿಗೆ ಸರ್ವೆ ನಂಬರ್ ನಮೂದಿಸದೆ ಬರಿ ಎಕರೆ ಹಾಗೂ ಸೆಂಟ್‌ಗಳಷ್ಟೆ ನಮೂದಿಸಲಾಗಿದೆ. ಸರ್ವೇ ನಂಬರ್ ನಮೂದಿಸದೆ ಮಂಜೂರು ಮಾಡುವ ಕ್ರಮ ಸರಿಯಲ್ಲ, ಜಮೀನಿನ ಸರ್ವೇ ನಂಬರ್ ಇದ್ದರೆ ಜಮೀನಿನ ವಿವರ ದೊರೆಯುತ್ತದೆ. ಸರಕಾರಿ ಜಮೀನು, ಗೋಮಾಳ ಇದ್ದರೆ ಕ್ರಮ ಕೈಗೊಳ್ಳಲು ಸುಲಭವಾಗುತ್ತದೆ, ಬಡವರಿಗೆ ನಿವೇಶನ ಕೊಟ್ಟು ಅವರನ್ನು ಕೋರ್ಟ್, ಕಚೇರಿಗೆ ಅಲೆಯುವಂತೆ ಮಾಡಬೇಡಿ ಎಂದು ಅಚ್ಚುಕಟ್ಟು ಹಿತರಕ್ಷಣಾ ಸಮಿತಿಯವರು ಕೋರಿದರು, ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸುವಂತೆ ಉಪ ವಿಭಾಗಾಧಿಕಾರಿ ಹಾಗೂ ತಹಸಿಲ್ದಾರ್ ಅವರಿಗೆ ಸೂಚಿಸಿದರು.

ಕಬ್ಬು ಕಟಾವು ಮಾಡಲು ಅವಕಾಶ ಮಾಡಿಕೊಡಿ: ರೈತ ಮುಖಂಡ ನರಸಿಂಹನ್ ಜಿಲ್ಲಾಧಿಕಾರಿಗಳಿಗೆ ಅಹವಾಲು ಸಲ್ಲಿಸಿ, ಕುಂತೂರು ಸಕ್ಕರೆ ಕಾರ್ಖಾನೆಯವರು 12 ತಿಂಗಳಿಗೆ ಕಟಾವು ಮಾಡಬೇಕಾಗಿದ್ದ ಕಬ್ಬನ್ನು 15 ರಿಂದ 18 ತಿಂಗಳಾದರು ಕಟಾವು ಮಾಡುತ್ತಿಲ್ಲ, ಮೂರು ವರ್ಷಕ್ಕೆ ಮೂರು ಬೆಳೆ ಬೆಳೆಯಬೇಕಾದ ರೈತ 3 ವರ್ಷದಲ್ಲಿ ಎರಡು ಬೆಳೆ ಬೆಳೆಯಬೇಕಾದ ಪರಿಸ್ಥಿತಿ ಇದೆ.

ಜಿಲ್ಲಾಧಿಕಾರಿಗಳು, ಆಹಾರ ಇಲಾಖೆ ಉಪ ನಿರ್ದೇಶಕರ ಸಮ್ಮುಖದಲ್ಲಿ ಸಭೆ ನಡೆದರು ಪ್ರಯೋಜನ ಆಗಿಲ್ಲ, ಉಸ್ತುವಾರಿ ಸಚಿವರು ಹಾಗೂ ಶಾಸಕರುಗಳ ಗಮನಕ್ಕೆ ತಂದರು ಪ್ರಯೋಜನ ಆಗಿಲ್ಲ, ಯಾರಿಗೆ ದೂರು ನೀಡಬೇಕೆಂಬುದೆ ಯಕ್ಷ ಪ್ರಶ್ನೆಯಾಗಿದೆ ಎಂದರು, ಈಸಂಬಂಧ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು ನಾನು ಈ ಬಗ್ಗೆ ಕ್ರಮ ವಹಿಸುತ್ತೇನೆ ಎಂದು ಭರವಸೆ ನೀಡಿದರು

ಇದೆ ವೇಳೆ ಇಸ್ತತ್ತು, ಬಂಡಿದಾರಿ ಸಮಸ್ಯೆ, ಕೆರೆ ಅತಿಕ್ರಮ ಸೇರಿದಂತೆ 36 ದೂರುಗಳನ್ನು ಸಾರ್ವಜನಿಕರು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದರು. ಕೊಂಗರಹಳ್ಳಿ ಗ್ರಾಮದ ಸರ್ವೆ ನಂ 183ರಲ್ಲಿರುವ ಕೆರೆ ಅತಿಕ್ರಮವಾಗಿದ್ದು ತೆರವುಗೊಳಿಸುವ ಕುರಿತು ಗ್ರಾಮಸ್ಥರಾದ ಪರಶಿವಮೂರ್ತಿ ದೂರಿದ್ದಾರೆ, ಉತ್ತಂಬಳ್ಳಿ ಗ್ರಾಮದ ಮಹದೇವಶೆಟ್ಟಿ ಇಸ್ತತ್ತು ಮಾಡಿಸಿಕೊಡುವ ಕುರಿತು ಅರ್ಜಿ ಸಲ್ಲಿಸಿದ್ದಾರೆ. ಚನ್ನಿಪುರದೊಡ್ಡಿಯ ಕುಮಾರ್ ಎಂಬುವರು ಭೂಮಿ ಮಾರಾಟ ಮಾಡಲು ಅನುಮತಿ ನೀಡಲು ವಿಳಂಬ ಮಾಡುತ್ತಿರುವ ಕುರಿತು ದೂರಿದ್ದಾರೆ, ಕೆಂಪನಪಾಳ್ಯದ ಕುಮಾರ ಎಂಬುವರು ತಾಲೂಕು ಅಧಿಕಾರಿಗಳು ಜಿಲ್ಲಾಧಿಕಾರಿಗಳ ಪತ್ರವನ್ನು ನಿರ್ಲಕ್ಷ್ಯ ಮಾಡುತ್ತಿದ್ದಾರೆ ಎಂಬ ಆರೋಪಿಸಿ ದೂರಿದ್ದಾರೆ. ಉಪ ವಿಭಾಗಾಧಿಕಾರಿ ಗೀತಾ ಹುಡೇದ್, ತಹಸಿಲ್ದಾರ್ ಮಂಜುಳ ಇದ್ದರು.

ನಾಳೆ ಕನಕದಾಸರ ಜಯಂತಿ

ಚಾಮರಾಜನಗರ, ನ.9– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ದಾಸಶ್ರೇಷ್ಠ ಶ್ರೀ ಕನಕದಾಸ ಜಯಂತೋತ್ಸವ ಸಮಿತಿ ಮತ್ತು ಜಿಲ್ಲೆಯ ವಿವಿಧ ಸಂಸ್ಥೆಗಳ ಸಹಕಾರದೊಂದಿಗೆ ದಾಸಶ್ರೇಷ್ಠ ಶ್ರೀ ಕನಕದಾಸರ ಜಯಂತಿ ಕಾರ್ಯಕ್ರಮವನ್ನು ನವೆಂಬರ್ 11ರಂದು ನಗರದಲ್ಲಿ ಆಯೋಜಿಸಲಾಗಿದೆ.

ಅಂದು ಬೆಳಗ್ಗೆ 9.30 ಗಂಟೆಗೆ ನಗರದ ಪ್ರವಾಸಿಮಂದಿರದಲ್ಲಿ ವಿವಿಧ ಕಲಾತಂಡಗಳೊಡನೆ ನಡೆಯಲಿರುವ ಕನಕದಾಸರ ಭಾವಚಿತ್ರದ ಮೆರವಣಿಗೆಗೆ ಚಾಲನೆ ನೀಡಲಾಗುತ್ತದೆ. ಬೆಳಗ್ಗೆ 11 ಗಂಟೆಗೆ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ.

ಕೆ.ಆರ್. ನಗರದ ಕಾಗಿನೆಲೆ ಕನಕ ಗುರುಪೀಠದ ಶ್ರೀ ಶಿವಾನಂದಪುರಿ ಸ್ವಾಮಿಯವರು ದಿವ್ಯ ಸಾನ್ನಿಧ್ಯ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ. ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು.

ಸುಪ್ರೀಂಕೋರ್ಟ್ 50ನೇ ಮುಖ್ಯ ನ್ಯಾಯಮೂರ್ತಿಯಾಗಿ ಡಿ.ವೈ. ಚಂದ್ರಚೂಡ್ ಅಧಿಕಾರ ಸ್ವೀಕಾರ

ನವದೆಹಲಿ: ಸುಪ್ರೀಂಕೋರ್ಟ್ ನ್ಯಾಯ ಮೂರ್ತಿ ಡಿ.ವೈ ಚಂದ್ರಚೂಡ್ ಅವರು ಭಾರತದ 50ನೇ ಮುಖ್ಯ ನ್ಯಾಯ ಮೂರ್ತಿಯಾಗಿ ಬುಧವಾರ ಅಧಿಕಾರ ಸ್ವೀಕರಿಸಿದ್ದಾರೆ. ಇಂದು ಬೆಳಗ್ಗೆ 10 ಗಂಟೆಗೆ ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನೂತನ ಮುಖ್ಯ ನ್ಯಾಯಮೂರ್ತಿಗಳಿಗೆ ಪ್ರಮಾಣ ವಚನ ಬೋಧಿಸಿದರು.



ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಾಗಿ ಅಧಿಕಾರ ಸ್ವೀಕರಿಸಿದ ಡಿ.ವೈ.ಚಂದ್ರಚೂಡ್ ಅವರು ಪತ್ನಿಯೊಂದಿಗೆ ರಾಷ್ಟ್ರಧ್ವಜಕ್ಕೆ ಗೌರವ ಸಲ್ಲಿಸುತ್ತಿರುವುದು.

ಚಂದ್ರಚೂಡ್ ಅವರು ನವೆಂಬರ್ 10, 2024ರವರೆಗೆ ಅಧಿಕಾರಾವಧಿ ಹೊಂದಿರುತ್ತಾರೆ. ಸುಪ್ರೀಂಕೋರ್ಟ್ ನ್ಯಾಯಾಧೀಶರು 65ನೇ ವಯಸ್ಸಿನಲ್ಲಿ ನಿವೃತ್ತ ರಾಗುತ್ತಾರೆ. ನ್ಯಾ.ಚಂದ್ರಚೂಡ್ ಅವರು ಸುಪ್ರೀಂಕೋರ್ಟ್‌ನ 2ನೇ ಅತ್ಯಂತ ಹಿರಿಯ ನ್ಯಾಯಾಧೀಶರಾಗಿದ್ದಾರೆ. ಅವರ ತಂದೆ ನ್ಯಾ. ವೈ.ವಿ ಚಂದ್ರಚೂಡ್ ಅವರು ಫೆಬ್ರವರಿ 2, 1978 ರಿಂದ ಜುಲೈ 11, 1985ರವರೆಗೆ ಭಾರತದ 16ನೇ ಮುಖ್ಯ ನ್ಯಾಯಮೂರ್ತಿಯಾಗಿದ್ದರು. ನ.11, 1959ರಂದು ಜನಿಸಿದ ನ್ಯಾ.ಚಂದ್ರಚೂಡ್ ಅವರು ಮೇ 13, 2016ರಂದು ಸುಪ್ರೀಂಕೋರ್ಟ್‌ನ ನ್ಯಾಯಾಧೀಶರಾಗಿ ನೇಮಕಗೊಂಡರು. ಅವರು ಅ.31, 2013ರಿಂದ ಸುಪ್ರೀಂ ಕೋರ್ಟ್‌ಗೆ ನೇಮಕಗೊಳ್ಳುವವರೆಗೆ ಅಲಹಾಬಾದ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದರು.

ಒಂದನೇ ಪುಟದಿಂದ

'ಪಾಲಿಕೆ ಅದಾಲತ್'

ಕಚೇರಿಗಳು ಅಥವಾ ಪಾಲಿಕೆಯ ಮುಖ್ಯ ಕಚೇರಿಯಲ್ಲಿ ಯಾವುದೇ ನಾಗರಿಕ ಸನ್ನದು ಅಥವಾ ಸಾರ್ವಜನಿಕ ಸೇವಾ ಸೌಲಭ್ಯಗಳನ್ನು ಕೋರಿ ಈ ಹಿಂದೆಯೇ ಅರ್ಜಿದಾರರು ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿ, ಈ ಸೇವೆ ಪಡೆಯಲು ಪಾಲಿಕೆ ಅಧಿಕಾರಿ/ಸಿಬ್ಬಂದಿಗಳಿಂದ ಅನಗತ್ಯ ವಿಳಂಬವಾಗಿದ್ದಲ್ಲಿ ಅಥವಾ ಹೊಸ ಸಾರ್ವಜನಿಕ ಸಮಸ್ಯೆಗಳು ಮತ್ತು ದೂರುಗಳೇನಾದರೂ ಇದ್ದಲ್ಲಿ ಮಾತ್ರ ಅಗತ್ಯ ದಾಖಲಾತಿಗಳೊಂದಿಗೆ 'ಪಾಲಿಕೆ ಅದಾಲತ್'ಗೆ ನಾಗರಿಕರು ಅರ್ಜಿ ಸಲ್ಲಿಸಬಹುದಾಗಿರುತ್ತದೆ ಎಂದು ಮಾಹಿತಿ ನೀಡಿದರು.

ನ.14ರಿಂದ ನ.19ರೊಳಗೆ ಸಲ್ಲಿಕೆಯಾಗುವ ಅರ್ಜಿಗಳನ್ನು ಪರಿಶೀಲಿಸಿ, ಅಂತಹ ಅರ್ಜಿಗಳನ್ನು ನ.27ರೊಳಗಾಗಿ ಇತ್ಯರ್ಥಪಡಿಸಲಾಗುವುದು. ತಿರಸ್ಕಾರವಾಗುವ ಅರ್ಜಿಗಳಿಗೆ ಅಗತ್ಯ ಕಾರಣ ನೀಡಿ ಹಿಂಬರಹ ನೀಡಲಾಗುವುದು. ಈ ಅದಾಲತ್‌ನಲ್ಲಿ ಅರ್ಜಿದಾರರಿಗೆ ತಮ್ಮ ಅರ್ಜಿ ವಸ್ತುಸ್ಥಿತಿ ಕುರಿತು ಯಾವುದೇ ಮಾಹಿತಿ ನ.27ರಂದು ಲಭ್ಯವಾಗದಿದ್ದಲ್ಲಿ. ಅಂತಹ ನಾಗರಿಕರು ನ.30ರಂದು ನಡೆಯುವ 'ಅಂತಿಮ ಅದಾಲತ್' ಕಾರ್ಯಕ್ರಮಕ್ಕೆ ಸ್ವೀಕೃತಿಯೊಂದಿಗೆ ಹಾಜರಾಗಿ, ಕಾರಣ ತಿಳಿದುಕೊಳ್ಳಬಹುದು ಎಂದು ತಿಳಿಸಿದರು. ಈ ವೇಳೆ ಮೈಸೂರು ನಗರ ಪಾಲಿಕೆ ಉಪಮೇಯರ್ ರೂಪ, ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಮತ್ತು ಒಂಬತ್ತು ವಲಯ ಕಚೇರಿ ಅಧಿಕಾರಿಗಳು ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ವಿಶೇಷ ಸೂಚನೆ: ಮೇಲ್ಕಂಡ ಪ್ರಕರಣಗಳಿಗೆ ಈಗಾಗಲೇ ಸಂಬಂಧಪಟ್ಟ ವಲಯಕಚೇರಿ ಹಾಗೂ ಮುಖ್ಯ ಕಚೇರಿಯಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಿ ವಿಳಂಬವಾಗಿರುವ ಪ್ರಕರಣಗಳಲ್ಲಿ ಮಾತ್ರ ಅರ್ಜಿ ಸ್ವೀಕೃತಿ ಮತ್ತು ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಸಾರ್ವಜನಿಕರು ಸದರಿ ಅದಾಲತ್ ಕಾರ್ಯಕ್ರಮಗಳನ್ನು ಸದುಪಯೋಗಪಡಿಸಿಕೊಳ್ಳುವಂತೆ ಮೇಯರ್ ಶಿವಕುಮಾರ್ ಮನವಿ ಮಾಡಿದರಲ್ಲದೆ ಮೈಸೂರಿನಲ್ಲಿ ಶಿಥಿಲಗೊಂಡಿರುವ ಪಾರಂಪರಿಕ ಕಟ್ಟಡಗಳ ನವೀಕರಣಕ್ಕೆ ವಿಶೇಷ ಅನುದಾನ ಬಿಡುಗಡೆಗಾಗಿ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದರು.

ಆರ್.ಎನ್.ಕುಲಕರ್ಣಿ ಮನೆ ಪಕ್ಕದ ಅಕ್ರಮ ಕಟ್ಟಡ ತೆರವಿಗೆ ನ.12ರ ಗಡಿವು

ನಿವೃತ್ತ ಐಬಿ ಅಧಿಕಾರಿ ಆರ್.ಎನ್.ಕುಲಕರ್ಣಿ ಅವರ ಮನೆಯ ಪಕ್ಕದಲ್ಲಿ ಅಕ್ರಮವಾಗಿ ನಿರ್ಮಾಣವಾಗುತ್ತಿದ್ದ ಕಟ್ಟಡ ತೆರವಿಗೆ ಪಾಲಿಕೆಯಿಂದ 2 ನೋಟೀಸ್ ನೀಡಲಾಗಿದ್ದು, ಈ ನೋಟೀಸ್ ಅವಧಿ ನ.12ಕ್ಕೆ ಮುಕ್ತಾಯವಾಗಲಿದೆ. ಈ ಅವಧಿಯೊಳಗೆ ನೋಟೀಸ್ ಪಡೆದ ಮಾಲೀಕರು ಅಕ್ರಮ ಕಟ್ಟಡ ತೆರವುಗೊಳಿಸದಿದ್ದರೆ ಪಾಲಿಕೆ ವತಿಯಿಂದ ತೆರವುಗೊಳಿಸಲಾಗುವುದು ಎಂದು ಮೈಸೂರು ನಗರ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ, ಪತ್ರಕರ್ತರ ಪ್ರಶ್ನೆಗೆ ಸ್ಪಷ್ಟಪಡಿಸಿದರು. ಕುಲಕರ್ಣಿ ಅವರ ಮನೆ ಪಕ್ಕದ ನಿವೇಶನದಾರರು, ಸೆಟ್ ಬ್ಯಾಕ್ ಬಿಡದೇ ಕಟ್ಟಡ ನಿರ್ಮಿಸುತ್ತಿರುವ ಕುರಿತು ಆರ್.ಎನ್.ಕುಲಕರ್ಣಿ ನೀಡಿದ ದೂರಿನ ಮೇರೆಗೆ ನ.2ರಂದು ಅಂತಿಮ ನೋಟಿಸ್ ನೀಡಿ 10 ದಿನದೊಳಗೆ ತೆರವುಗೊಳಿಸುವಂತೆ ಸೂಚನೆ ನೀಡಲಾಗಿತ್ತು. ನ. 12 ರೊಳಗೆ ಸ್ವತಃ ಕಟ್ಟಡ ಮಾಲೀಕರೇ ಅಕ್ರಮ ಕಟ್ಟಡ ತೆರವು ಗೊಳಿಸದಿದ್ದರೆ ಪಾಲಿಕೆ ವತಿಯಿಂದ ಕಾರ್ಯಾಚರಣೆ ನಡೆಸಿ, ಕಟ್ಟಡವನ್ನು ತೆರವುಗೊಳಿಸಿ, ಅದರ ಸಂಪೂರ್ಣ ವೆಚ್ಚವನ್ನು ಆ ಮಾಲೀಕರೇ ಭರಿಸುವಂತೆ ಮಾಹಿತಿ ನೀಡಲಾಗುವುದು ಎಂದು ತಿಳಿಸಿದರು.

ಒತ್ತುವರಿ ತೆರವಿಗೆ ಕ್ರಮ: ನಗರದ ಹೃದಯ ಭಾಗದಲ್ಲಿ ಫುಟ್‌ಪಾತ್ ಒತ್ತುವರಿ ಮಾಡಿ, ಪಾದಚಾರಿಗಳ ಓಡಾಟಕ್ಕೆ ತೊಂದರೆಯಾಗುತ್ತಿರುವ ಕುರಿತು ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಆಯುಕ್ತರು, ನಗರದ ಹೃದಯ ಭಾಗದಲ್ಲಿ ಫುಟ್‌ಪಾತ್ ಒತ್ತುವರಿ ಮಾಡಿಕೊಂಡಿರುವ ಬೀದಿಬದಿ ವ್ಯಾಪಾರಿಗಳನ್ನು ಗುರುತಿಸಿ ತೆರವುಗೊಳಿಸುವ ಕಾರ್ಯ ಮುಂದುವರೆದಿದೆ. ಸಯ್ಯಾಜಿರಾವ್ ರಸ್ತೆಯ ಕೆ.ಆರ್.ವೃತ್ತದ ಬಳಿ ಬೀದಿಬದಿ ವ್ಯಾಪಾರಿಗಳು, ಫುಟ್‌ಪಾತ್ ಅನ್ನು ಸಂಪೂರ್ಣ ಒತ್ತುವರಿ ಮಾಡಿ, ವ್ಯಾಪಾರ ಮಾಡುವ ಬಗ್ಗೆ ಸಾರ್ವಜನಿಕರಿಂದ ಅನೇಕ ದೂರುಗಳು ಬಂದಿವೆ. ಈ ಸಮಸ್ಯೆಗೆ ಪೊಲೀಸ್ ಅಧಿಕಾರಿ ಗಳೊಂದಿಗೆ ಮಾತುಕತೆ ನಡೆಸಿ, ಶಾಶ್ವತ ಪರಿಹಾರ ಕಂಡುಕೊಳ್ಳಲಾಗುವುದು ಎಂದು ತಿಳಿಸಿದರು.

14 ಕೋಟಿ ರೂ. ಸಾಲ ಪಡೆದ ಭೂಗಳ್ಳರು!

ಆರೋಪಿಸಿದ್ದಾರೆ. ಈ ಸಂಬಂಧ ಸ್ವತ್ತಿನ ಮೇಲೆ ಸಾಲ ಪಡೆಯುವಾಗ ಸಲ್ಲಿಸಲಾಗಿದ್ದ ನಿವೇಶನದ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಒದಗಿಸುವಂತೆ ತಾವು ಬ್ಯಾಂಕ್ ಆಫ್ ಬರೋಡಾ, ಹಾಸನ ಶಾಖಾ ಮ್ಯಾನೇಜರ್‌ಗೆ 2022ರ ಜನವರಿ 13ರಿಂದ ಅಕ್ಟೋಬರ್ 25ರವರೆಗೆ 4 ಬಾರಿ ಪತ್ರ ಬರೆದಿದ್ದರೂ ಅವರಿಂದ ಈವರೆವಿಗೂ ಉತ್ತರ ಬಂದಿಲ್ಲ ಎಂದು ಅವರು ತಿಳಿಸಿದ್ದಾರೆ. ಅಲ್ಲದೇ ನಿವೇಶನ ಸಂಖ್ಯೆ 36/ಎ ಸಂಬಂಧ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು, ನಿವೇಶನವನ್ನು ಬ್ಯಾಂಕ್‌ನಲ್ಲಿ ಅಡಮಾನ ಇಟ್ಟಿದ್ದಲ್ಲದೇ, ನಂತರ ನಂಜಪ್ಪ ಎಂಬುವರು ಹೇಮಂತಕುಮಾರ್ ಎಂಬುವರಿಗೆ ದಾನಪತ್ರ ಮಾಡಿದ್ದಾರೆ. ಆ ಸಂದರ್ಭ ನೋಂದಾಯಿತವಲ್ಲದ ವಿಲ್ ಯಾ ಮರಣ ಶಾಸನ ಪತ್ರವನ್ನೂ ಸಲ್ಲಿಸಿದ್ದಾರೆಂಬುದು ಆರ್‌ಟಿಐ ಕಾರ್ಯಕರ್ತ ನಾಗೇಂದ್ರ ಸಲ್ಲಿಸಿರುವ ದಾಖಲೆಗಳಿಂದ ತಿಳಿದುಬಂದಿದೆ ಎಂದು ವಿಶೇಷ ತಹಸೀಲ್ದಾರ್ ಮಂಜುನಾಥ್ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಪ್ರಾಧಿಕಾರದ ಸುಮಾರು 25 ಕೋಟಿ ರೂ. ಬೆಲೆ ಬಾಳುವ ನಿವೇಶನವನ್ನು ಬ್ಯಾಂಕ್‌ಗೆ ಅಡಮಾನವಿರಿಸಿ ಸಾಲ ಪಡೆದಿರುವ ಬಗ್ಗೆ ಡಿಜಿಟಲ್ ಸಹಿ ಮಾಡಿದ ಆನ್‌ಲೈನ್ ದಾಖಲೆಗಳನ್ನು ಉಪ ನೋಂದಣಾಧಿಕಾರಿಗಳ ಕಚೇರಿಯಿಂದ ಪಡೆಯಲಾಗಿದೆ. ಪ್ರಾಧಿಕಾರದ ಆಸ್ತಿ ಕಬಳಿಸಲು ನಕಲಿ ದಾಖಲೆಗಳನ್ನು ಸೃಷ್ಟಿಸಿ ಸಂಚು ನಡೆಸಿರುವವರ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳುವಂತೆ ದೂರುದಾರರು ಕೋರಿದ ಹಿನ್ನೆಲೆಯಲ್ಲಿ ನಿನ್ನೆ (ಮಂಗಳವಾರ) ನಾಲ್ವರ ವಿರುದ್ಧ ಪ್ರಕರಣ ದಾಖಲಾಗಿದೆ. ಆದರೆ, 2018ರಲ್ಲೇ ಕೋಟ್ಯಾಂತರ ರೂ. ಬೆಲೆ ಬಾಳುವ ಪ್ರಾಧಿಕಾರದ ಸ್ವತ್ತಿನ ಮೇಲೆ ನಕಲಿ ದಾಖಲೆ ಸೃಷ್ಟಿಸಿ ಬ್ಯಾಂಕ್‌ನಲ್ಲಿ 14 ಕೋಟಿ ಸಾಲ ಪಡೆದಿದ್ದರೂ, ನಂತರ ಅದನ್ನು ದಾನಪತ್ರದ ಮೂಲಕ ಪರಭಾರೆ ಮಾಡಿದ್ದರೂ, ಆರ್‌ಟಿಐ ಕಾರ್ಯಕರ್ತ ಬಿ.ಎನ್. ನಾಗೇಂದ್ರ 2022ರ ಅಕ್ಟೋಬರ್ 11ರಲ್ಲಿ ಅರ್ಜಿ ಸಲ್ಲಿಸುವವರೆಗೆ ಮುಡಾ ಅಧಿಕಾರಿಗಳು ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಮುಂದಾಗದಿರುವುದು ಭಾರೀ ಸಂಶಯ ಮೂಡಿಸಿದೆ.

ಸಾಲ ನೀಡಿದ ಬ್ಯಾಂಕ್ ಅಧಿಕಾರಿಗಳಾದರೂ, ಸದರಿ ನಿವೇಶನದ ನೈಜತೆ ಬಗ್ಗೆ ಮುಡಾದಿಂದ ದೃಢೀಕರಣ ಪತ್ರ ಪಡೆಯದೇ, ಕಾನೂನು ಅಭಿಪ್ರಾಯ (Legal Openion) ಪಡೆಯದೇ ಯಾವ ಆಧಾರದ ಮೇಲೆ 14 ಕೋಟಿ ರೂ. ಕೊಟ್ಟರು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅಲ್ಲದೇ ಅಡಮಾನ ಪತ್ರ ನೋಂದಾಯಿಸಿರುವ ಉಪನೋಂದಣಾಧಿಕಾರಿಗಳೂ ಸ್ವತ್ತಿನ ಮಾಲೀಕರು ಯಾರು ಎಂಬುದರ ಬಗ್ಗೆ ದಾಖಲೆಗಳನ್ನು ಪರಿಶೀಲಿಸದಿರುವುದು ಹಲವು ಸಂಶಯಗಳಿಗೆ ಕಾರಣವಾಗಿದೆ.

ಸಿದ್ದರಾಮಯ್ಯ ರಾಜಕೀಯ ಅಲೆಮಾರಿ

ಎಂಟು ಲಕ್ಷ ಮೈಸೂರು ಪಾಕ್ ಮಾಡ್ಕೊಂಡು ದಾವಣಗೆರೆಯಲ್ಲಿ ಹುಟ್ಟುಹಬ್ಬ ಮಾಡ್ಕೊಂಡರು. ವಿರೋಧ ಪಕ್ಷದ ನಾಯಕರಾಗಿದ್ದಾರೆ. ಐದು ವರ್ಷ ಸಿಎಂ ಆಗಿದ್ದರು. ಹಿರಿಯ ರಾಜಕಾರಣಿ. ಇಂಥ ಕಡೆ ಚುನಾವಣೆಗೆ ನಿಲ್ಲುತ್ತೇನೆ ಎಂದು ಹೇಳೋಕೆ ಧೈರ್ಯ ಇಲ್ಲ ಎಂದು ಮತ್ತೊಮ್ಮೆ ಸಿದ್ದರಾಮಯ್ಯ ಅವರ ವಿರುದ್ಧ ಹರಿಹಾಯ್ದರು. ಸತೀಶ್ ಜಾರಕಿಹೊಳಿ ಹಿಂದೂ ಪದ ಕುರಿತು ವಿವಾದಾತ್ಮಕ ಹೇಳಿಕೆ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ವಿ. ಶ್ರೀನಿವಾಸಪ್ರಸಾದ್, ತಮ್ಮ ಹೇಳಿಕೆ ಕುರಿತು ಕ್ಷಮೆ ಕೇಳುವುದಿಲ್ಲ ಎಂದು ಜಾರಕಿಹೊಳಿ ಹೇಳಿದ್ದಾರೆ. ಬೇಕಾದ್ರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡ್ತೀನಿ ಎಂದಿದ್ದಾರೆ. ಅವರ ಬಗ್ಗೆ ಮಾತನಾಡುವುದು ಎಷ್ಟು ಸರಿ. ಪಕ್ಷಾತೀತವಾಗಿ ಎಲ್ಲರೂ ಈ ಬಗ್ಗೆ ಹೇಳಿಕೆ ಕೊಟ್ಟಿದ್ದಾರೆ ಎಂದರು.

ಹತ್ಯೆಗೀಡಾದ ನಿವೃತ್ತ ಐಬಿ ಅಧಿಕಾರಿ ಆರ್.ಎನ್.ಕುಲಕರ್ಣಿ ಅವರ ಮನೆಗೆ ಗೃಹ ಸಚಿವ ಆರಗ ಜ್ಞಾನೇಂದ್ರ ಭೇಟಿ

● ಕುಟುಂಬ ಸದಸ್ಯರಿಗೆ ಸಾಂತ್ವನ ● ಸೂಕ್ತ ಭದ್ರತೆ ಒದಗಿಸಲು ಪೊಲೀಸರಿಗೆ ಸ್ಥಳದಲ್ಲೇ ಸೂಚನೆ



ಮೈಸೂರಿನ ಟಿ.ಕೆ.ಲೇಔಟ್‌ನಲ್ಲಿರುವ ಕುಲಕರ್ಣಿ ನಿವಾಸಕ್ಕೆ ಬುಧವಾರ ಸಂಜೆ ಗೃಹ ಸಚಿವ ಆರಗ ಜ್ಞಾನೇಂದ್ರ ಭೇಟಿ ನೀಡಿ, ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು. ಈ ವೇಳೆ ಶಾಸಕ ಎಸ್.ಎ.ರಾಮದಾಸ್, ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಇದ್ದರು.



ಕುಲಕರ್ಣಿ ಅವರ ಮನೆಯ ಪಕ್ಕದಲ್ಲಿ ಅಕ್ರಮವಾಗಿ ನಿರ್ಮಾಣವಾಗುತ್ತಿರುವ ಕಟ್ಟಡವನ್ನು ಗೃಹ ಸಚಿವ ಆರಗ ಜ್ಞಾನೇಂದ್ರ ಪರಿಶೀಲಿಸಿದರು.

ಮೈಸೂರು, ನ.9(ಜಿಎ)– ನಿವೃತ್ತ ಐಬಿ(ಗುಪ್ತಚರ ಇಲಾಖೆ)ಅಧಿಕಾರಿ ಆರ್.ಎನ್.ಕುಲಕರ್ಣಿ ಅವರ ಹೋರಾಟದ ದನಿ ನಿಷ್ಪ್ರಯೋಜಕವಾಗಲು ಬಿಡುವುದಿಲ್ಲ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಮೈಸೂರಿನ ಪ್ರವಾಸದಲ್ಲಿರುವ ಗೃಹ ಸಚಿವರು ಇತ್ತೀಚೆಗೆ ಹತ್ಯೆಗೀಡಾದ ಆರ್.ಎನ್. ಕುಲಕರ್ಣಿ ಅವರ ಟಿ.ಕೆ. ಬಡಾವಣೆ ನಿವಾಸಕ್ಕೆ ಬುಧವಾರ ಸಂಜೆ ಭೇಟಿ ನೀಡಿ, ಅವರ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು. ಅಲ್ಲದೆ ಕುಟುಂಬಕ್ಕೆ ಅಗತ್ಯ ರಕ್ಷಣೆ ನೀಡುವಂತೆ ಸ್ಥಳದಲ್ಲಿದ್ದ ಪೊಲೀಸ್ ಆಯುಕ್ತರಿಗೆ ಸೂಚನೆ ನೀಡಿದರು.

ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಗೃಹ ಸಚಿವರು, ಕುಲಕರ್ಣಿ ಅವರು ಕೇಂದ್ರ ಗುಪ್ತಚರ ಇಲಾಖೆಯಲ್ಲಿ ಸೇವೆ ಸಲ್ಲಿಸಿ, ನಿವೃತ್ತರಾಗಿ ಮೈಸೂರಿನಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದರು. ಅವರ ಮಕ್ಕಳು ಅಮೇರಿಕಾದಲ್ಲಿದ್ದರು. ವಾಕ್ ಹೋಗಿದ್ದಾಗ ಕಾರು ಹರಿಸಿ ಕೊಲೆ ಮಾಡಿ, ಅದನ್ನು ಅಪಘಾತ ಎಂದು ಬಿಂಬಿಸಿದ್ದರು. ಆದರೆ ಮೈಸೂರು ಪೊಲೀಸರು ತನಿಖೆ ನಡೆಸಿ ಕೊಲೆ ಪ್ರಕರಣ ಬಯಲು ಮಾಡಿದ್ದಾರೆ. ಅವರಿಗೆ ಅಭಿನಂದನೆಗಳು ಎಂದು ಪೊಲೀಸರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರು ಶಾಂತಿಯುತ ನಗರ. ಬಹುತೇಕರು ತಮ್ಮ ನಿವೃತ್ತಿ ಜೀವನಕ್ಕಾಗಿ ಇಲ್ಲಿಗೆ ಬರುತ್ತಾರೆ. ಅಂತಹ ಅನೇಕ ಹಿರಿಯರು ಇಲ್ಲಿ ನೆಲೆಸಿದ್ದಾರೆ. ಅನ್ಯಾಯದ ವಿರುದ್ಧ ಹೋರಾಡಿದ ಕುಲಕರ್ಣಿ ಅವರ ಸಾವಿನ ಪ್ರಕರಣದಿಂದ ಸಮಾಜಕ್ಕೆ ಕೆಟ್ಟ ಸಂದೇಶ ಹೋಗಬಾರದು. ಆದ್ದರಿಂದ ಇಂತಹ ವಿವಾದಗಳನ್ನು ಮೂಲದಲ್ಲಿಯೇ ಪತ್ತೆ ಹಚ್ಚಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಲು ಪೊಲೀಸರಿಗೆ ಸೂಚನೆ ನೀಡಲಾಗುವುದು. ಕುಲಕರ್ಣಿ ಅವರ ಅಂತ್ಯ ಈ ರೀತಿ ಆಗಿರುವುದು ಬೇಸರದ ವಿಚಾರ ಎಂದರು.

ಕುಲಕರ್ಣಿ ಅವರ ಹೋರಾಟದ ದನಿ ನಿಷ್ಪ್ರಯೋಜಕವಾಗಲು ಬಿಡುವುದಿಲ್ಲ. ಆರೋಪಿಗಳಿಗೆ ತಕ್ಕ ಶಿಕ್ಷೆ ಕೊಡಿಸಲು ಪೊಲೀಸರು ಅಗತ್ಯ ಕ್ರಮ ವಹಿಸುತ್ತಾರೆ. ಕುಟುಂಬದವರಿಗೆ ಸೂಕ್ತ ನ್ಯಾಯ ಕೊಡಿಸಲಾಗುವುದು. ಈ ಮನೆಯ ಬಳಿ ಸೂಕ್ತ ಬಂದೋಬಸ್ತ್ ಕೈಗೊಂಡು ಕುಟುಂಬದವರಿಗೆ ರಕ್ಷಣೆ ನೀಡಲಾಗುವುದು. ಜಾಗದ ವಿವಾದ ಕೋರ್ಟ್‌ನಲ್ಲಿತ್ತು. ಈ ಸಂದರ್ಭದಲ್ಲಿಯೇ ಕುಲಕರ್ಣಿ ಅವರು ನನಗೆ ಜೀವ ಬೆದರಿಕೆ ಇದೆ ಎಂದು ದೂರು ನೀಡಿದ ನಂತರ ಪೊಲೀಸರು ಸಹ ಇಬ್ಬರನ್ನು ಕರೆಯಿಸಿ, ಅವರ ವಿಚಾರಣೆ ನಡೆಸಿ, ಮುಚ್ಚಳಿಕೆ ಬರೆಯಿಸಿಕೊಂಡು, ಏನೇ ವಿವಾದವಿದ್ದರು, ಅದನ್ನು ಕೋರ್ಟ್ ಮೂಲಕ ಬಗೆಹರಿಸಿಕೊಳ್ಳಿ ಎಂದು ತಿಳಿಸಿದ್ದಾರೆ. ಆದರೂ ಈ ವಿಚಾರಕ್ಕೆ ಕೊಲೆ ನಡೆದಿದೆ. ಹೀಗೇ ಆದರೆ ಭೂಮಿಯ ಮೇಲೆ ಯಾರೂ ಉಳಿಯುವುದಿಲ್ಲ. ಇಂತಹ ಘಟನೆ ನಡೆಯಬಾರದು. ಸ್ಥಳೀಯ ಸಂಸ್ಥೆಗಳು ಕ್ರಮ ವಹಿಸಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಶಾಸಕ ಎಸ್.ಎ.ರಾಮದಾಸ್, ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಇದ್ದರು.

> "ಹಿಂದೂ ಧರ್ಮದ ಅವಹೇಳನದಿಂದ ಅಲ್ಪಸಂಖ್ಯಾತರ ಮತವನ್ನು ಗಳಿಸಿ ಶಾಶ್ವತವಾಗಿ ಕುರ್ಚಿಯ ಮೇಲೆ ಕೂರಬಹುದು ಎಂದು ಕಾಂಗ್ರೆಸಿಗರು ನಂಬಿದ್ದಾರೆ. ಇನ್ನು ಕಾಂಗ್ರೆಸ್‌ನ ಆಟ ನಡೆಯುವುದಿಲ್ಲ. ಆಗಲೇ ಜನರು ಕಾಂಗ್ರೆಸ್ ಅನ್ನು ಸಿಂಹಾಸನದಿಂದ ದೂರ ಮಾಡುವ ಕೆಲಸ ಮಾಡಿದ್ದಾರೆ. ಆದರೆ, ಕಾಂಗ್ರೆಸ್ ಧೋರಣೆ ಈಗಲೂ ಹಾಗೆಯೇ ಮುಂದುವರೆದಿದೆ. ಇದು ಕಾಂಗ್ರೆಸ್‌ನ ಚಾಳಿಯಾಗಿದೆ. ಮುಂದೆ ಇದು ನಡೆಯುವುದಿಲ್ಲ ಎಂದರು. ಹಿಂದೂ ಧರ್ಮದ ವಿರುದ್ಧ ಸತೀಶ್ ಜಾರಕಿ ಹೊಳಿ ಮಾತನಾಡಿರುವುದನ್ನು ಕಾಂಗ್ರೆಸ್ ನಾಯಕರು ಖಂಡಿಸುವುದಿಲ್ಲ. ಅವರನ್ನು ಪಕ್ಷದಿಂದ ಹೊರಗೆ ಹಾಕಲಿ. ನಾವು ನಮ್ಮ ಪಕ್ಷದ ನೂಪುರ್ ಶರ್ಮಾ ಅವರ ವಿರುದ್ಧ ಕ್ರಮ ಜರುಗಿಸಿದಂತೆ ಕಾಂಗ್ರೆಸ್ ನಾಯಕರು ಜಾರಕಿಹೊಳಿ ವಿರುದ್ಧ ಕ್ರಮ ಜರುಗಿಸಲಿ. –ಆರಗ ಜ್ಞಾನೇಂದ್ರ, ಗೃಹ ಸಚಿವ

ಕುರುಬ ಸಮಾಜದ ಮುಖಂಡರ ಗುಸು ಗುಸು ಮಾತಿಗೆ ರೆಕ್ಕೆ ಪುಕ್ಕ!

ಬೆಂಗಳೂರು,ನ.9–ಕುರುಬ ಸಮಾಜದ ಮುಖಂಡರಾದ ಮುಕುಡಪ್ಪ ಮತ್ತು ಕೆ.ಪುಟ್ಟಸ್ವಾಮಿಯವರು ಗುಸು ಗುಸು ಮಾತನಾಡಿರುವ ವಿಡಿಯೋ ವೈರಲ್ ಆಗಿದ್ದು, ಅದಕ್ಕೆ ನಾನಾ ರೆಕ್ಕೆ ಪುಕ್ಕ ಕಟ್ಟಿ ಹಾರಿ ಬಿಡಲಾಗುತ್ತಿದೆ. ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ್ದ ಈ ಮುಖಂಡರು ಗೋಷ್ಠಿಗೂ ಮುನ್ನ ಗುಸು ಗುಸು ಮಾತನಾಡಲಾರಂಭಿಸಿದ್ದರು. ಮೈಕ್‌ಗಳು ಆನ್ ಆಗಿವೆ ಎಂಬ ಪರಿವೇ ಇಲ್ಲದೇ ಮಾತುಕತೆ ಸಾಗಿತ್ತು. ಮುರುಘಾ ಸ್ವಾಮಿಗಳ ತರಹ ಎಲ್ಲಾ ಇದ್ದಾರೆ ಎಂದ ಮುಕುಡಪ್ಪ, ನಾಲ್ಕು ಜನ ಇದ್ದಾರೆ. ಕುರುಬರು ಸ್ವಲ್ಪ ಜಾಸ್ತಿ. ಏನ್ ಮಾಡೋಕ್ಕಾಗುತ್ತೆ ಟಗರು ಇದ್ಯಾಲ್ಲಾ. ಒಂದು ಟಗರು 20 ಕುರಿ ಮೇಲೆ ಹತ್ತುತ್ತೆ ಎಂದು ಹೇಳಿದ್ದಲ್ಲದೆ, ಎಲ್ಲರದು ಅದೇ ಕತೆ ಎಂದು ಪುಟ್ಟಸ್ವಾಮಿ ಪ್ರತಿಕ್ರಿಯಿಸಿದ್ದಾರೆ. ಆಗ ಮುಕುಡಪ್ಪ, ನಮ್ದು ಅಷ್ಟೇ. ನಿಮ್ದು ಅಷ್ಟೇ. ಕೆಲವರದು ಹೊರಗೆ ಬರುತ್ತೆ, ಕೆಲವರದು ಬರೊದೇ ಇಲ್ಲ. ನಮ್ಮ ಟಗರುಗಳೇನೂ ಕಡಿಮೇನಾ? .... ಬಹಳ ಹುಷಾರು. ಅವ್ನು ಎಲ್ಲೂ ಸಿಕ್ಕಲ್ಲ ಎಂದರೆ, ಪುಟ್ಟಸ್ವಾಮಿ, ಮನೆ ಒಳ್ಗೇ ಸೇರಿಕೊಂಡುಬಿಡ್ತಾರಲ್ಲ ಸ್ವಾಮಿ ಎಂದು ಪ್ರತಿಕ್ರಿಯಿಸಿದ್ದಾರೆ. ಇದೀಗ ಈ ವಿಡಿಯೋ ವೈರಲ್ ಆಗಿದೆ.





ಮೈಸೂರಿನ ದಾಸಪ್ಪ ವೃತ್ತದಲ್ಲಿ ಟಾಟಾ ಮ್ಯಾಜಿಕ್ ಮಾಲೀಕರು ಹಾಗೂ ಚಾಲಕರ ವತಿಯಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು.

ಬಲಿಜ ಸಮುದಾಯವನ್ನು 2ಎಗೆ ಸೇರಿಸಲು ಆಗ್ರಹ

ಮೈಸೂರು, ನ.9–ಬಲಿಜ ಸಮುದಾಯವನ್ನು 2ಎ ಪಟ್ಟಿಗೆ ಸೇರ್ಪಡೆ ಮಾಡುವಂತೆ ಕರ್ನಾಟಕ ಬಲಿಜ ಸಮುದಾಯಗಳ ಅಭಿಮಾನಿ ಬಳಗ ಹಾಗೂ ಬಲಿಜ ವೆಲ್ಫೇರ್ ಅಸೋಸಿಯೇಷನ್ ಆಗ್ರಹಿಸಿ, ಸರ್ಕಾರಕ್ಕೆ ಮನವಿ ಸಲ್ಲಿಸಿದೆ.

ಕಾಂಗ್ರೆಸ್ ಮುಖಂಡ ಎಸ್. ರಮೇಶ್ ಮಾತನಾಡಿ, ಬಲಿಜ ಜನಾಂಗ ರಾಜ್ಯಾದ್ಯಂತ 47 ಲಕ್ಷಕ್ಕೂ ಅಧಿಕ ಮಂದಿ ಇದ್ದಾರೆ ಈ ಸಮುದಾಯ ಅತೀ ಹಿಂದುಳಿದಿದ್ದು, ಈ ಸಮಾಜವನ್ನು 3ಎ ನಿಂದ ಪ್ರವರ್ಗ 2ಎ ಗೆ ಸೇರ್ಪಡೆಗೊಳಿಸಿ ಸರ್ಕಾರಿ ಉದ್ಯೋಗ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಸೂಕ್ತ ಪ್ರಾತಿನಿಧ್ಯ ನೀಡುವಂತೆ ಆಗ್ರಹಿಸಿದರು. ಈ ವೇಳೆ ಸಂಘದ ಪ್ರಧಾನ ಕಾರ್ಯದರ್ಶಿ ಆರ್.ಕೆ. ನಾಗರಾಜ್, ಅಸೋಸಿಯೇಷನ್ ಅಧ್ಯಕ್ಷ ದೇವಪ್ರಕಾಶ್, ಉಪಾಧ್ಯಕ್ಷ ರಾಮಚಂದ್ರಪ್ಪ ಜಂಟಿ ಕಾರ್ಯದರ್ಶಿ ವಿನುತಾ, ಜಗನ್ನಾಥ್ ಸೇರಿದಂತೆ ಇತರ ಪದಾಧಿಕಾರಿಗಳು ಹಾಜರಿದ್ದರು.

ಗ್ರಾಹಕರಿಗೆ ಕೋಟ್ಯಾಂತರ ರೂ. ವಂಚಿಸಿ ಗಿರವಿ ಅಂಗಡಿ ಮಾಲೀಕ ಪರಾರಿ



ಮೈಸೂರು, ನ. 9(ಆರ್‌ಕೆ)– ಗಿರವಿ ಇರಿಸಿಕೊಂಡಿದ್ದ ಕೋಟ್ಯಾಂತರ ರೂ. ಬೆಲೆ ಬಾಳುವ ಚಿನ್ನ–ಬೆಳ್ಳಿ ಆಭರಣಗಳೊಂದಿಗೆ ಅಂಗಡಿ ಮಾಲೀಕ ರಾತ್ರೋರಾತ್ರಿ ಪರಾರಿಯಾಗಿದ್ದಾನೆ. ಮೈಸೂರಿನ ವಿವೇಕಾನಂದನಗರ ಸರ್ಕಲ್‌ನಲ್ಲಿರುವ ಮಾರುತಿ ಪಾನ್ ಅಂಡ್ ಜುವೆಲರಿ ಶಾಪ್ ಮಾಲೀಕ ನೇಮಿರಾಮ(50) ಗ್ರಾಹಕರಿಗೆ ಕೋಟ್ಯಾಂತರ ರೂ. ಪಂಗನಾಮ ಹಾಕಿ, ಗಿರವಿ ಇರಿಸಿದ್ದ ಚಿನ್ನಾಭರಣ ಹೊತ್ತೊಯ್ದಿರುವ ಆಸಾಮಿ. ಕಳೆದ ಏಳೆಂಟು ವರ್ಷಗಳಿಂದ ವಿವೇಕಾನಂದ ಸರ್ಕಲ್‌ನಲ್ಲಿ ಅಂಗಡಿ ನಡೆಸುತ್ತಿದ್ದ ಆತ, ಸಾಲ ಪಡೆಯಲು ಬರುವ ಗ್ರಾಹಕರಿಂದ ಚಿನ್ನಾಭರಣ ಹಾಗೂ ಬೆಳ್ಳಿ ಪದಾರ್ಥಗಳನ್ನು ಅಡವಿಟ್ಟುಕೊಂಡು, ಹಣ ನೀಡುತ್ತಿದ್ದ.

ಕೊರೊನಾ ಸಂದರ್ಭದಲ್ಲೂ ಸಂಕಷ್ಟ ಎಂದು ಬಂದವರಿಗೆ ಆಭರಣ ಪಡೆದು ಸಾಲ ನೀಡುತ್ತಿದ್ದ ನೇಮಿ ರಾಮನಿಗೆ ಕೆಲವರು ಬಡ್ಡಿ ಹಣವನ್ನು ಸರಿಯಾಗಿ ಹಿಂದಿರುಗಿಸದ ಕಾರಣ ಆತ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದನಾದರೂ, ನಂತರದ ದಿನಗಳಲ್ಲಿ ಒಳ್ಳೆಯ ವಹಿವಾಟು ಮಾಡುತ್ತಿದ್ದ ಎಂದು ಹೇಳಲಾಗಿದೆ. ಕಳೆದ ಸೋಮವಾರ ರಾತ್ರಿ ತಾನು ವಾಸವಿದ್ದ ಶ್ರೀರಾಂಪುರದ ಮನೆಯಿಂದ ಕುಟುಂಬ ಸಮೇತ ಗ್ರಾಹಕರು ಗಿರವಿ ಇಟ್ಟಿದ್ದ ಚಿನ್ನಾಭರಣ ಮತ್ತು ಬೆಳ್ಳಿ ಪದಾರ್ಥಗಳೊಂದಿಗೆ ಪರಾರಿಯಾಗಿದ್ದಾನೆ. ವಿಷಯ ತಿಳಿಯುತ್ತಿದ್ದಂತೆಯೇ ಗ್ರಾಹಕರು ವಿವೇಕಾನಂದ ಸರ್ಕಲ್‌ನಲ್ಲಿದ್ದ ಆತನ ಅಂಗಡಿ ಮುಂದೆ ಜಮಾಯಿಸಿ, ಕೊನೆಗೆ ಕುವೆಂಪುನಗರ ಠಾಣೆಗೆ ದೂರು ನೀಡಿದ್ದಾರೆ.

ಮತ್ತೊಂದೆಡೆ ಶ್ರೀರಾಂಪುರದ ಮನೆಯನ್ನೂ ಮೂವರಿಗೆ ಸೇಲ್ ಅಗ್ರಿಮೆಂಟ್ ಮಾಡಿ ಹಣ ಪಡೆದು ಅದೇ ಮನೆಯನ್ನು ಮತ್ತೋರ್ವನಿಗೆ ನೋಂದಣಿ ಮಾಡಿಕೊಟ್ಟು ನೇಮಿರಾಮ ಊರು ಬಿಟ್ಟು ಪರಾರಿಯಾಗಿದ್ದಾನೆ. ಅವರು ಪೊಲೀಸರಿಗೆ ದೂರು ನೀಡಿದ್ದಾರೆ.

ಪ್ರಕರಣ ದಾಖಲಿಸಿಕೊಂಡಿರುವ ಇನ್ಸ್‌ಪೆಕ್ಟರ್ ಶಣ್ಮುಗ ವರ್ಮ, ಪ್ರತಿಯೊಬ್ಬ ದೂರುದಾರರ ಲಿಖಿತ ಹೇಳಿಕೆ ಪಡೆದುಕೊಂಡು ತಲೆಮರೆಸಿಕೊಂಡಿರುವ ಪಾನ್ ಬ್ರೋಕರ್ ಪತ್ತೆಗಾಗಿ ಶೋಧ ನಡೆಸುತ್ತಿದ್ದಾರೆ.

ನಾಡಪ್ರಭು ಕೆಂಪೇಗೌಡರ ಹೆಸರಲ್ಲಿ ಒಕ್ಕಲಿಗರ ಮತ ಸೆಳೆಯುವ ಭ್ರಮೆಯಲ್ಲಿ ಬಿಜೆಪಿ

● ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಟಾಂಗ್ ● ಬಿಜೆಪಿ–ಕಾಂಗ್ರೆಸ್ ಧರ್ಮ, ಜಾತಿ ಹೆಸರಲ್ಲಿ ಜನರ ಮನಸ್ಸು ಹಾಳು ಮಾಡುತ್ತಿವೆ



ಬೆಂಗಳೂರು, ನ.9(ಕೆಎಂಶಿ)– ಪ್ರಧಾನಿ ನರೇಂದ್ರ ಮೋದಿ ಅವರಿಂದ ನಾಡಪ್ರಭು ಕೆಂಪೇಗೌಡರ ಪ್ರತಿಮೆ ಅನಾವರಣ ಮಾಡಿಸಿದರೆ, ಒಕ್ಕಲಿಗರ ಮತಗಳು ಬಿಜೆಪಿಗೆ ಬರುತ್ತದೆ ಎಂಬ ಭ್ರಮೆಯಲ್ಲಿ ಬಿಜೆಪಿಯವರು ಇದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ.

ನಾಡಪ್ರಭು ಕೆಂಪೇಗೌಡರ ಪ್ರತಿಮೆ ಅನಾವರಣ, ಬಿಜೆಪಿ ಸರ್ಕಾರದ ನಿಯೋಜಿತ ಕಾರ್ಯಕ್ರಮ, ಪ್ರಧಾನಿಯವರು ಬರುತ್ತಾರೆ. ಹೋಗುತ್ತಾರೆ ಅಷ್ಟೇ. ಇದರಿಂದ ಅವರ ಪಕ್ಷಕ್ಕೆ ಯಾವುದೇ ಲಾಭವಿಲ್ಲ ಎಂದಿದ್ದಾರೆ.

ರಾಜ್ಯ ಸರಕಾರ ಮತ್ತು ಬಿಜೆಪಿ ನಾಯಕರು ನಾಡಪ್ರಭು ಕೆಂಪೇಗೌಡರ ಹೆಸರನ್ನು ರಾಜಕೀಯಕ್ಕೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಅವರು ಏನು ಮಾಡುತ್ತಿದ್ದಾರೆ ಎನ್ನುವುದನ್ನು ಜನರು ಕೂಡ ನೋಡುತ್ತಿದ್ದಾರೆ ಎಂದರು.

ಪ್ರತಿಮೆ ಸ್ಥಾಪನೆ ಮಾಡಿ ಒಕ್ಕಲಿಗರ ಮತ ಸೆಳೆಯಬಹುದು ಎಂದು ಬಿಜೆಪಿಯವರು ಲೆಕ್ಕಾಚಾರ ಮಾಡಿದ್ದಾರೆ. ಬಿಜೆಪಿ ನಾಯಕರು ಆ ರೀತಿ ಭ್ರಮೆಯಲ್ಲಿದ್ದರೆ ಜನರೇ ಆ ಭ್ರಮೆಯಿಂದ ಹೊರ ತರುತ್ತಾರೆ ಎಂದು ಟಾಂಗ್ ನೀಡಿದರು.



ಬೆಂಗಳೂರು ದೊಡ್ಡಮಟ್ಟದಲ್ಲಿ ಬೆಳೆದಿದೆ. ಅದೇ ರೀತಿ ನಿರುದ್ಯೋಗ ಸಮಸ್ಯೆ ಇದೆ. ಎರಡು ರಾಷ್ಟ್ರೀಯ ಪಕ್ಷಗಳ ಆಡಳಿತಾವಧಿಯಲ್ಲಿ ಬೆಂಗಳೂರಲ್ಲಿ ಹಲವಾರು ರೀತಿಯ ಅನಾಹುತ ಮಾಡಿದ್ದಾರೆ. ಅದನ್ನು ಸರಿಪಡಿಸುವ ಮೂಲಕ ಕೆಂಪೇಗೌಡರಿಗೆ ಗೌರವ ಕೊಡುವುದು ನಮ್ಮೆಲ್ಲರ ಕರ್ತವ್ಯ ಎಂದರು.

ಧರ್ಮ, ಜಾತಿ ಹೆಸರಿನಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಜನರ ಮನಸ್ಸನ್ನು ಕೆಡಿಸುತ್ತವೆ. ಆ ಎರಡೂ ಪಕ್ಷಗಳಿಗೆ ಅಭಿವೃದ್ಧಿ ಬೇಕಿಲ್ಲ ಎಂದು ಇದೇ ಸಂದರ್ಭದಲ್ಲಿ ಟೀಕಾಪ್ರಹಾರ ನಡೆಸಿದರು.

ಹಿಂದೂ ಪದ ಅಶ್ಲೀಲ ಎಂದು ಶಾಸಕ ಸತೀಶ್ ಜಾರಕಿಹೊಳಿ ಅವರು ನೀಡಿರುವ ಹೇಳಿಕೆಯ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಅವರು, ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಸೂಕ್ಷ್ಮ ವಿಚಾರ ಇಟ್ಟುಕೊಂಡು ಚುನಾವಣಾ ರಾಜಕೀಯ ಮಾಡುತ್ತಿವೆ. ಇದು ಸರಿಯಲ್ಲ ಎಂದರು.

ಎರಡೂ ರಾಷ್ಟ್ರೀಯ ಪಕ್ಷಗಳಿಗೆ ಎಲ್ಲಾ ಅರಿವಿದ್ದರೂ ಜನರ ಸಮಸ್ಯೆ ಕೇಳಲು ಯಾರೂ ತಯಾರಿಲ್ಲ. ನಾನು ಹೊಡೆದಂಗೆ ಮಾಡ್ತೀನಿ, ನೀನು ಅತ್ತಂಗೆ ಮಾಡು ಎನ್ನುವಂಥ ನೀತಿ ಅನುಸರಿಸುತ್ತಿವೆ. ಇವರ ಯೋಗ್ಯತೆ ಏನು ಎನ್ನುವುದು ಜನರಿಗೆ ಗೊತ್ತಿದೆ ಎಂದು ಮಾಜಿ ಮುಖ್ಯಮಂತ್ರಿಗಳು ಕಿಡಿಕಾರಿದರು.

ಮೊಬೈಲ್ ನಂಬರ್‌ಗೆ ಪಾನ್‌ಕಾರ್ಡ್ ಲಿಂಕ್, ವಿದ್ಯುತ್ ಬಿಲ್ ಪಾವತಿ, ಹೂಡಿಕೆ ನೆಪದಲ್ಲಿ ಲಕ್ಷಾಂತರ ವಂಚನೆ



ಮೈಸೂರು, ನ.9–ಮೊಬೈಲ್‌ಗೆ ಪಾನ್ ಕಾರ್ಡ್ ಲಿಂಕ್ ಮಾಡುವಂತೆ ವಾಟ್ಸಾಪ್ ಸಂದೇಶ ರವಾನಿಸಿ, ಆನ್‌ಲೈನ್ ಮೂಲಕ ವ್ಯಕ್ತಿಯೊಬ್ಬರಿಗೆ 3.21 ಲಕ್ಷ ರೂ. ವಂಚಿಸಲಾಗಿದೆ. ಮೈಸೂರಿನ ಬೋಗಾದಿ 2ನೇ ಹಂತದ ನಿವಾಸಿ ಡಾ.ಆರ್.ಎಲ್. ಚಿಲಕ್ವಾಡ್ (61) ವಂಚನೆಗೊಳಗಾದವರಾಗಿದ್ದು, ಇವರ ಮೊಬೈಲ್‌ಗೆ ಪಾನ್‌ಕಾರ್ಡ್ ಅಪ್‌ಡೇಟ್ ಮಾಡುವಂತೆ ಸಂದೇಶ ರವಾನೆಯಾಗಿದೆ. ಅವರು ಲಿಂಕ್ ಮೇಲೆ ಕ್ಲಿಕ್ ಮಾಡಿ, ಕೆಲವೊಂದು ನಿರ್ದೇಶನಗಳನ್ನು ಪಾಲಿಸಿದ ನಂತರ ಅವರ ಬ್ಯಾಂಕ್ ಖಾತೆಯಿಂದ 3,21,978 ರೂ. ಕಡಿತಗೊಂಡಿದೆ.



ಮತ್ತೊಂದು ಪ್ರಕರಣದಲ್ಲಿ ಜಯಲಕ್ಷ್ಮಿಪುರಂ ನಿವಾಸಿ ಪೂನಂ ಪ್ರಕಾಶ್ (64) ಎಂಬುವರ ಮೊಬೈಲ್‌ಗೆ ವಿದ್ಯುತ್ ಬಿಲ್ ಪಾವತಿಸುವಂತೆ ಸಂದೇಶ ರವಾನೆಯಾಗಿದೆ. ಸಂದೇಶ ರವಾನೆಯಾದ ಮೊಬೈಲ್ ಸಂಖ್ಯೆಯನ್ನು ಅವರು ಸಂಪರ್ಕಿಸಿದಾಗ ಮಾತನಾಡಿದ ವ್ಯಕ್ತಿ ಟೀಂ ವ್ಯೂವರ್ ಆ್ಯಪ್ ಅನ್ನು ಇನ್‌ಸ್ಟಾಲ್ ಮಾಡುವಂತೆ ತಿಳಿಸಿ, 11 ರೂ. ಪಾವತಿಸುವಂತೆಯೂ ಹೇಳಿದ್ದಾನೆ. ಪೂನಂ ಅವರು ಹಾಗೆ ಮಾಡಿದಾಗ ಅವರ ಎರಡು ಬ್ಯಾಂಕ್ ಖಾತೆಗಳಿಂದ ಒಟ್ಟು 1,72,500 ರೂ. ಕಡಿತಗೊಂಡಿದೆ. ಇನ್ನೊಂದು ಪ್ರಕರಣದಲ್ಲಿ ಕಂಪನಿಯೊಂದರಲ್ಲಿ ಹಣ ಹೂಡಿಕೆ ಮಾಡಿದರೆ ಲಾಭ ಬರುತ್ತದೆ ಎಂದು ನಂಬಿಸಿ, ಶ್ರೀರಾಂಪುರ ನಿವಾಸಿ ಜಗದೀಶ್ವರರಾಜು (47) ಎಂಬುವರಿಗೆ ಆನ್‌ಲೈನ್ ಮೂಲಕ 1.64 ಲಕ್ಷ ರೂ. ವಂಚಿಸಲಾಗಿದೆ. ಈ ಮೂರೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಪತ್ನಿ ಹತ್ಯೆಗೈದ ಪತಿಗೆ ಐದು ವರ್ಷ ಜೈಲು ಶಿಕ್ಷೆ



ಚಾಮರಾಜನಗರ, ನ.9–ವರದಕ್ಷಿಣೆ ಕಿರುಕುಳ ನೀಡಿ, ಹಲ್ಲೆ ನಡೆಸಿ, ಪತ್ನಿ ಸಾವಿಗೆ ಕಾರಣನಾದ ಪತಿಗೆ 5 ವರ್ಷ ಜೈಲು ಮತ್ತು 1.50 ಲಕ್ಷ ರೂ. ದಂಡ ವಿಧಿಸಿ, ಚಾಮರಾಜನಗರ ಜಿಲ್ಲಾ ಸೆಷನ್ ನ್ಯಾಯಾಲಯ (ಪೀಠಾಸೀನ ಕೊಳ್ಳೇಗಾಲ) ತೀರ್ಪು ನೀಡಿದೆ. ಗುಂಡ್ಲುಪೇಟೆ ತಾಲೂಕು ಭರಟಹಳ್ಳಿ ಗ್ರಾಮದ ಮಹೇಶ್ ಶಿಕ್ಷೆಗೆ ಗುರಿಯಾದವನಾಗಿದ್ದು, ಈತ ತನ್ನ ಪತ್ನಿ ಪಾರ್ವತಮ್ಮಳ ಮೇಲೆ 2018ರ ಅಕ್ಟೋಬರ್ 2ರಂದು ರಾತ್ರಿ ರಿಪೀಸ್‌ಪಟ್ಟಿಯಿಂದ ಹಲ್ಲೆ ನಡೆಸಿದ್ದ. ಗಾಯಗೊಂಡ ಈಕೆ ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದು, 2018ರ ಅಕ್ಟೋಬರ್ 2ರಂದು ಡಿಸ್ಚಾರ್ಜ್ ಆಗಿ ಮನೆಗೆ ಬಂದ ನಂತರವೂ ಆಕೆಯ ಮೇಲೆ ಮಹೇಶ್ ಹಲ್ಲೆ ನಡೆಸಿದ್ದಾನೆ. ಇದರಿಂದಾಗಿ ಮರುದಿನ ಪಾರ್ವತಮ್ಮ ಸಾವನ್ನಪ್ಪಿದ್ದು, ಈ ಸಂಬಂಧ ತೆರಕಣಾಂಬಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪೊಲೀಸರು ಮಹೇಶ್‌ನನ್ನು ಬಂಧಿಸಿ, ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರು, ಮಹೇಶನಿಗೆ 5 ವರ್ಷ ಜೈಲು ಹಾಗೂ 1.50 ಲಕ್ಷ ರೂ. ದಂಡ ವಿಧಿಸಿದ್ದು, ದಂಡದ ಮೊತ್ತದಲ್ಲಿ ಪಾರ್ವತಮ್ಮನ ಇಬ್ಬರು ಮಕ್ಕಳಿಗೆ ತಲಾ 70 ಸಾವಿರ ರೂ. ಪಾವತಿಸಿ, ಉಳಿದ 10 ಸಾವಿರ ರೂ.ಗಳನ್ನು ಸರ್ಕಾರಕ್ಕೆ ಪಾವತಿಸಬೇಕೆಂದು ಆದೇಶ ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರಾದ ಬಿ.ಪಿ.ಮಂಜುನಾಥ ವಾದ ಮಂಡಿಸಿದ್ದರು.

ಮತದಾರರ ಪಟ್ಟಿಯಿಂದ ಯಾರೂ ಹೊರಗೆ ಉಳಿಯಬಾರದು

ನಂಜನಗೂಡು ಪಟ್ಟಣದಲ್ಲಿ ಮತದಾರರ ಜನಜಾಗೃತಿ ಜಾಥಾ



ನಂಜನಗೂಡು, ನ.9– ಮತದಾನ ಪ್ರತಿಯೊಬ್ಬ ನಾಗರಿಕನ ಹಕ್ಕು. ಸರ್ಕಾರ ವಯಸ್ಕ ಮತದಾರರು ಮತದಾರರ ಪಟ್ಟಿಯಿಂದ ಹೊರಗುಳಿಯಬಾರದು ಎಂಬ ಉದ್ದೇಶದಿಂದ ಜಾಗೃತಿ ಜಾಥಾ ನಡೆಸಲಾಗುತ್ತಿದ್ದು, 18 ವರ್ಷದ ಎಲ್ಲಾ ಮತದಾರರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೊಂದಾವಣೆ ಮಾಡಿಕೊಳ್ಳುವಂತೆ ತಹಶೀಲ್ದಾರ್ ಎಂ. ಶಿವಮೂರ್ತಿ ಮನವಿ ಮಾಡಿದರು.

ನಗರದ ರಾಷ್ಟ್ರಪತಿ ರಸ್ತೆಯಲ್ಲಿರುವ ಬಾಲಕಿಯರ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ತಾಲೂಕು ಆಡಳಿತ ಹಾಗೂ ತಾಲೂಕು ಪಂಚಾಯ್ತಿ, ಚುನಾವಣಾ ಸಾಕ್ಷರತಾ ಕ್ಲಬ್ ವತಿಯಿಂದ ಏರ್ಪಡಿಸಿದ್ದ ಮತದಾರರ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ದೇಶಾದ್ಯಂತ ಮತದಾರರ ಕರಡು ಮತಪಟ್ಟಿ ಬಿಡುಗಡೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಜಾಗೃತಿ ಜಾಥಾವನ್ನು ಹಮ್ಮಿಕೊಳ್ಳಲಾಗಿದೆ. ಈ ಜಾಥಾದ ಉದ್ದೇಶ 2023ರ ಚುನಾವಣೆಯಲ್ಲಿ ತಾಲೂಕಿನಲ್ಲಿ ವಯಸ್ಕ ಮತದಾರರ ಹೆಸರು ಸೇರ್ಪಡೆಯಾಗಬೇಕು. ಮರಣ ಹೊಂದಿದವರು ಹಾಗೂ ಹೊರಗಡೆ ಹೋಗಿರವರನ್ನು ಮತದಾರರ ಪಟ್ಟಿಯಿಂದ ಕೈಬಿಡಬೇಕು, ಈ ಎಲ್ಲಾ ಪಟ್ಟಿಯನ್ನು ತಯಾರು ಮಾಡಲು ಚುನಾವಣಾ ಅಧಿಕಾರಿಗಳಿಂದ ಕೆಲಸ ಪ್ರಗತಿಯಲ್ಲಿದ್ದು ಪ್ರತಿಯೊಬ್ಬರೂ ಸಹ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇದೆಯೇ ಅಥವಾ ಇಲ್ಲವೇ ಎಂದು ಪರಿಶೀಲಿಸಿಕೊಳ್ಳಿ, ಮತ್ತು ಪಟ್ಟಿಗೆ ಸಂಬಂಧಿಸಿದಂತೆ ಏನಾದರೂ ಆಕ್ಷೇಪಣೆಗಳು ಇದ್ದಲ್ಲಿ ಡಿ.6 ತನಕ ಆಕ್ಷೇಪ ಸಲ್ಲಿಸಲು ಅವಕಾಶವಿದೆ. ಹೆಚ್ಚಿನ ಮಾಹಿತಿಗಾಗಿ ತಾಲ್ಲೂಕು ಆಡಳಿತ ಭವನ ದಲ್ಲಿರುವ ಚುನಾವಣಾ ಅಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ಹೇಳಿದರು. ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿನಿಯರು ನಗರದ ಪ್ರಮುಖ ರಸ್ತೆಗಳಲ್ಲಿ ವಿವಿಧ ಘೋಷಣೆಗಳನ್ನು ಕೂಗಿ ಮತದಾನದ ಮಹತ್ವದ ಬಗ್ಗೆ ಅರಿವು ಮೂಡಿಸಲಾಯಿತು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಹೆಚ್.ಜಿ.ಶ್ರೀನಿವಾಸ್, ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು ಸೇರಿದಂತೆ ವಿದ್ಯಾರ್ಥಿನಿಯರು ಅಧಿಕಾರಿಗಳು ಹಾಜರಿದ್ದರು.

ವಾಲ್ಮೀಕಿ ಸಂಘಟನೆಗಳ ಒಕ್ಕೂಟದ ಮೈಸೂರು ಜಿಲ್ಲಾಧ್ಯಕ್ಷರಾಗಿ ತಾಯೂರು ಪ್ರಕಾಶ್ ನೇಮಕ

ಶಾಸಕ ಅಶ್ವಿನ್‌ಕುಮಾರ್‌ರಿಂದ ಸನ್ಮಾನ

ತಿ.ನರಸೀಪುರ, ನ.9– ಕರ್ನಾಟಕ ರಾಜ್ಯ ವಾಲ್ಮೀಕಿ ಸಂಘಟನೆಗಳ ಒಕ್ಕೂಟದ ಮೈಸೂರು ಜಿಲ್ಲಾಧ್ಯಕ್ಷರಾಗಿ ನೇಮಕಗೊಂಡ ವರುಣಾ ಕ್ಷೇತ್ರದ ಜೆಡಿಎಸ್ ನಿಕಟಪೂರ್ವ



ಅಧ್ಯಕ್ಷ ತಾಯೂರು ಪ್ರಕಾಶ್ ಅವರನ್ನು ಶಾಸಕ ಎಂ.ಅಶ್ವಿನ್ ಕುಮಾರ್ ಸನ್ಮಾನಿಸಿದರು.

ಪಟ್ಟಣದ ಮೈಸೂರು ರಸ್ತೆಯಲ್ಲಿರುವ ಜೆಡಿಎಸ್ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಸರಳ ಕಾರ್ಯಕ್ರಮದಲ್ಲಿ ತಾಯೂರು ಪ್ರಕಾಶ್ ಅವರನ್ನು ಸನ್ಮಾನಿಸಿ ಮಾತನಾಡಿ, ಪಕ್ಷದ ಸಂಘಟನೆಯನ್ನು ಯಶಸ್ವಿಯಾಗಿ ನಿಭಾಯಿಸಿ ಸಮುದಾಯದ ಸಂಘಟನೆಗೆ ಹೊರಟಿರುವ ತಾಯೂರು ಪ್ರಕಾಶ್ ಒಬ್ಬ ಉತ್ತಮ ಸಂಘಟಕರಾಗಿದ್ದಾರೆ. ಅವರು ಜೆಡಿಎಸ್ ಅಧ್ಯಕ್ಷರಾಗಿದ್ದ ಕ್ಷೇತ್ರದಲ್ಲಿ ಜೆಡಿಎಸ್ ಉತ್ತಮ ಸ್ಥಿತಿಯಲ್ಲಿತ್ತು ಪಕ್ಷವನ್ನು, ಕಾರ್ಯಕರ್ತರನ್ನು ಯಶಸ್ವಿಯಾಗಿ ನಿಭಾಯಿಸಿಕೊಂಡು ಪಕ್ಷದ ಯಶಸ್ಸಿಗೆ ಶ್ರಮಿಸಿದ್ದ ಇವರು ನಾಯಕ ಜನಾಂಗದ ಅಧ್ಯಕ್ಷ ಸ್ಥಾನದ ಜವಾಬ್ದಾರಿ ಹೊತ್ತಿದ್ದಾರೆ. ಅಲ್ಲಿಯೂ ಸಹ ಸಮುದಾಯದ ಸಂಘಟನೆಗೆ ಹೆಚ್ಚು ಒತ್ತು ಕೊಟ್ಟು ಯಶಸ್ವಿಯಾಗಲಿ ಎಂದು ಶುಭ ಕೋರಿದರು.

ಕಾರ್ಯಕ್ರಮದಲ್ಲಿ ಕ್ಷೇತ್ರ ಜೆಡಿಎಸ್ ಅಧ್ಯಕ್ಷ ಚಿನ್ನಸ್ವಾಮಿ, ಜಿ.ಪಂ.ಮಾಜಿ ಅಧ್ಯಕ್ಷ ಸಿದ್ದಾರ್ಥ, ಮಾಜಿ ಸದಸ್ಯ ಜೈಪಾಲ್ ಭರಣಿ, ಕೃಷ್ಣಾಪುರ ರಾಮಣ್ಣ, ಮರಿಸ್ವಾಮಿ, ನಿಲಸೋಗೆ ಮಹೇಶ್, ಕೆಂಪಯ್ಯನಹುಂಡಿ ಚೆನ್ನೇಗೌಡ ಮತ್ತಿತರರಿದ್ದರು.

ಭ್ರಷ್ಟ ಬಿಜೆಪಿ ಸರ್ಕಾರ ಕಿತ್ತೊಗೆಯಿರಿ: ಧ್ರುವನಾರಾಯಣ್



ಮಲ್ಕುಂಡಿ, ನ.9– ದೇಶ ಹಾಗೂ ರಾಜ್ಯದಲ್ಲಿ ದುರಾಡಳಿತ ನಡೆಸುತ್ತಿರುವ ಭ್ರಷ್ಟ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯಬೇಕಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಹಾಗೂ ಮಾಜಿ ಸಂಸದ ಆರ್ ಧ್ರುವನಾರಾಯಣ್ ಕರೆ ನೀಡಿದ್ದಾರೆ.

ನಂಜನಗೂಡು ತಾಲೂಕಿನ ಹೆಡಿಯಾಲ ಗ್ರಾಪಂ ವ್ಯಾಪ್ತಿಗೆ ಬರುವ ಕೊತ್ತನಹಳ್ಳಿ, ಇಂದಿರಾನಗರ, ಅಂಜನಪುರ, ಬಿರದೇವನಪುರ, ಚಿಲಕಹಳ್ಳಿ, ವೆಂಕಟಚಾಲಪುರ, ಬಳ್ಳೂರುಹುಂಡಿ ಗ್ರಾಮಗಳಲ್ಲಿ 75 ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಪಾದಯಾತ್ರೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಭ್ರಷ್ಟಾಚಾರ ಹಾಗೂ ಕಾಂಗ್ರೆಸ್ ಪಕ್ಷದ ಜನಪರ ಕೊಡುಗೆಯನ್ನು ಪ್ರತಿಯೊಬ್ಬರಿಗೂ ತಲುಪಿಸುವ ಕೆಲಸ ನಮ್ಮ ಪಕ್ಷದ ಕಾರ್ಯಕರ್ತರ ಜವಬ್ದಾರಿಯಾಗಿದೆ ಎಂದರು.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ದೇಶವನ್ನು ಬ್ರಿಟಿಷರು ಲೂಟಿ ಮಾಡಿ ಖಜಾನೆ ಖಾಲಿಯಾಗಿತ್ತು. ದೇಶ ಯಾವುದೇ ಅಭಿವೃದ್ಧಿ ಕಾಣದ ಸಂದರ್ಭದಲ್ಲಿ ದೇಶದ ಅಧಿಕಾರ ಹಿಡಿದ ಕಾಂಗ್ರೆಸ್ ಪಕ್ಷವು ದೇಶದ ಅಭಿವೃದ್ಧಿಯತ್ತ ಕೊಂಡೊಯ್ದಿತ್ತು. ಕಾಂಗ್ರೆಸ್ ಪಕ್ಷವು ದೇಶದ ಅಭಿವೃದ್ಧಿಗಾಗಿ ಶ್ರಮವಹಿಸಿತ್ತು. ದೇಶ ಹಾಗೂ ರಾಜ್ಯವನ್ನು ರಕ್ಷಿಸಲು ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಕಾಗಿದೆ.

ಕಾಂಗ್ರೆಸ್ ಸರ್ಕಾರ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಬಡವರ ರೈತರ ಹಿಂದುಳಿದವರ ಪರವಾಗಿ ಹಲವು ಯೋಜನೆಗಳನ್ನು ಜಾರಿಗೆ ತಂದು ಅನುಕೂಲ ಮಾಡಿಕೊಟ್ಟಿದ್ದರು. ಆದರೆ ಈಗಿನ ಬಿಜೆಪಿ ಸರ್ಕಾರವು ಕಾಂಗ್ರೆಸ್ ಪಕ್ಷ ಜಾರಿಗೆ ತಂದ ಅನ್ನಭಾಗ್ಯ, ಕ್ಷೀರಭಾಗ್ಯ ಯೋಜನೆಗಳಿಗೆ ಕಡಿವಾಣ ಹಾಕಿ ಸಾರ್ವಜನಿಕರು ದಿನನಿತ್ಯ ಬಳಸುವ ಆಹಾರ ಪದಾರ್ಥಗಳು, ಗ್ಯಾಸ್, ಪೆಟ್ರೋಲ್ ಬೆಲೆ ಏರಿಕೆ ಮಾಡಿದೆ. ಇಂತಹ ಸರ್ಕಾರ ನಿಮಗೆ ಬೇಕೆ? ಎಂದು ಪ್ರಶ್ನಿಸಿದರಲ್ಲದೆ, ಬಿಜೆಪಿ ಸರ್ಕಾರಕ್ಕೆ ತಾಕತ್ತಿದ್ದರೆ ಕಾಂಗ್ರೆಸ್ ಪಕ್ಷದ ನಾಯಕರನ್ನು ಟೀಕಿಸುವುದನ್ನು ಬಿಟ್ಟು ಜನರ ಬಳಿ ಅಭಿವೃದ್ಧಿ ತೋರಿಸಲಿ ಎಂದು ಗುಡುಗಿದರು

ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಬ್ಲಾಕ್ ಅಧ್ಯಕ್ಷ ಕುರಹಟ್ಟಿ ಕೆ.ಜಿ.ಮಹೇಶ್, ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ. ಮಾರುತಿ, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ಹೆಚ್.ಸಿ.ಬಸವರಾಜ್, ಮಣಿಕಂಠ, ಸುಬ್ರಹ್ಮಣ್ಯ, ಗ್ರಾಪಂ ಸದಸ್ಯೆ ರಾಣಿ ಪಟೇಲ್, ಸತೀಶ್, ಅನ್ವರ್, ಸಾಧಿಕ್, ಗುರುಸ್ವಾಮಿ, ಕಾಳೇಗೌಡ, ಗ್ರಾಪಂ ಅಧ್ಯಕ್ಷ ಸಿದ್ದರಾಜ್, ಗೋವಿಂದ ರಾಜ್, ಇಬ್ರಾಹಿಂ, ಸೋಮೇಶ, ಅಜಯ ಸೇರಿದಂತೆ ಪ್ರಮುಖರು ಹಾಜರಿದ್ದರು.

ಮಲ್ಲೂಪುರ ಗ್ರಾಪಂ ನೂತನ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ನಂಜನಗೂಡು, ನ.9– ತಾಲೂಕಿನ ಮಲ್ಲೂಪುರ ಗ್ರಾಮ ಪಂಚಾಯ್ತಿಯ ನೂತನ ಅಧ್ಯಕ್ಷರಾಗಿ ನಾಗಮಣಿ ಪ್ರಕಾಶ್, ಉಪಾಧ್ಯಕ್ಷರಾಗಿ ಕೋಮಲ ಸಿದ್ದರಾಜು ಆಯ್ಕೆಯಾದರು.

24 ಸದಸ್ಯ ಬಲದ ಮಲ್ಲೂಪುರ ಗ್ರಾಪಂನಲ್ಲಿ ಕಾಂಗ್ರೆಸ್ ಬೆಂಬಲಿತ 20, ಬಿಜೆಪಿ 2, ಬಿಎಸ್ಪಿ 2 ಸದಸ್ಯರ ಬಲವನ್ನು ಹೊಂದಿದೆ ಈ ಹಿಂದೆ ಅಧ್ಯಕ್ಷರಾಗಿದ್ದ ರೋಹಿಣಿ ಪುಟ್ಟರಾಜು ಅವರನ್ನು ಸ್ವಪಕ್ಷೀಯ ಸದಸ್ಯರೇ ಅವಿಶ್ವಾಸ ನಿರ್ಣಯದ ಮೂಲಕ ಪದಚ್ಯುತಗೊಳಿಸಿದ್ದ ಹಿನ್ನೆಲೆಯಲ್ಲಿ ಬುಧವಾರ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಲಾಯಿತು. ಅಧ್ಯಕ್ಷ ಸ್ಥಾನಕ್ಕೆ ನಾಗಮಣಿ ಪ್ರಕಾಶ್ ಮತ್ತು ಮಹದೇವಯ್ಯ ನಾಮಪತ್ರ ಸಲ್ಲಿಸಿದ್ದರು. ನಾಗಮಣಿ ಪ್ರಕಾಶ್ 17 ಮತಗಳನ್ನು ಪಡೆಯುವ ಮೂಲಕ ಅಧ್ಯಕ್ಷರಾಗಿ ಆಯ್ಕೆಯಾದರು. ಪ್ರತಿಸ್ಪರ್ಧಿ ಮಹದೇವಯ್ಯ 6 ಮತಗಳನ್ನು ಪಡೆದರು. ಒಬ್ಬ ಸದಸ್ಯ ಚುನಾವಣೆ ಪ್ರಕ್ರಿಯೆಯಿಂದ ದೂರ ಉಳಿದಿದ್ದರು.

ಉಪಾಧ್ಯಕ್ಷ ಸ್ಥಾನಕ್ಕೆ ಕೋಮಲಸಿದ್ದರಾಜು ಹೊರತುಪಡಿಸಿ ಬೇರೆ ಯಾರೊಬ್ಬರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅವಿರೋಧವಾಗಿ ಆಯ್ಕೆಗೊಂಡರು. ಚುನಾವಣಾಧಿಕಾರಿಯಾಗಿದ್ದ ರೇಷ್ಮೆ ಸಹಾಯಕ ನಿರ್ದೇಶಕ ಉಮೇಶ್ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ನೂತನ ಅಧ್ಯಕ್ಷೆ ನಾಗಮಣಿ ಪ್ರಕಾಶ್ ಆಯ್ಕೆಯಾಗುತ್ತಿದ್ದಂತೆ ನೂರಾರು ಸಂಖ್ಯೆಯಲ್ಲಿ ನೆರೆದಿದ್ದ ಅವರ ಅಭಿಮಾನಿಗಳು ಪಟಾಕಿ ಸಿಡಿಸಿ, ಸಿಹಿ ಹಂಚಿ, ಜೈಕಾರಗಳನ್ನು ಕೂಗಿ ಸಂಭ್ರಮ ಆಚರಿಸಿದರು.

ನೂತನ ಅಧ್ಯಕ್ಷೆ ನಾಗಮಣಿ ಪ್ರಕಾಶ್ ಮಾತನಾಡಿ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಬರುವ ಎಲ್ಲಾ ಗ್ರಾಮಗಳಲ್ಲಿ ಸರ್ಕಾರದ ಅನುದಾನವನ್ನು ಬಳಕೆ ಮಾಡಿಕೊಂಡು ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಶ್ರಮಿಸುತ್ತೇನೆ. ಜೊತೆಗೆ ಕುಡಿಯುವ ನೀರು, ಚರಂಡಿ, ರಸ್ತೆ ಸಮಸ್ಯೆಗಳನ್ನು ಬಗೆಹರಿಸಿ ಸೌಕರ್ಯ ಕಲ್ಪಿಸಲು ಮುಂದಾಗುತ್ತೇನೆ ಎಂದರಲ್ಲದೆ, ನನ್ನ ಆಯ್ಕೆಗೆ ಸಹಕಾರ ನೀಡಿದ ಎಲ್ಲಾ ಸದಸ್ಯರಿಗೂ ಮತ್ತು ಶಾಸಕ ಯತೀಂದ್ರ ಸಿದ್ದರಾಮಯ್ಯರವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ ಎಂದರು.

ಇದೇ ಸಂದರ್ಭದಲ್ಲಿ ಗ್ರಾಪಂ ಸದಸ್ಯರಾದ ಗುರುಸ್ವಾಮಿ, ರಮೇಶ್, ಸಚಿನ್, ಶಶಿಕುಮಾರ್, ಸುಶೀಲಮ್ಮ, ಪವಿತ್ರ, ಮಂಜು, ಸಿದ್ದರಾಜು, ರೂಪ, ಆನಂದಕುಮಾರ್, ಗುರುಸಿದ್ದೇಗೌಡ, ಮುಖಂಡರಾದ ಆರ್.ಮಹದೇವು, ಗೋನಹಳ್ಳಿ ಕುಮಾರ್, ಸಿದ್ದರಾಮೇಗೌಡ, ಬುಲೆಟ್ ಮಹದೇವು, ಶಿವಣ್ಣ, ಶಿವನಾಗು, ದಕ್ಷಿಣಮೂರ್ತಿ, ಗಿರೀಶ್ ತೊರೆಮಾವು, ಮಲ್ಲಳ್ಳಿ ಬಾಬು, ಮಹದೇವನಾಯಕ, ಮೋಹನ್ ಸೇರಿದಂತೆ ಅಪಾರ ಸಂಖ್ಯೆಯ ಅಭಿಮಾನಿಗಳು ಗ್ರಾಮಸ್ಥರು ಇದ್ದರು.

ಇಂದು ಚಿಕ್ಕಮ್ಮತಾಯಿ ದೇವಸ್ಥಾನ ಉದ್ಘಾಟನೆ

ಹಿರೀಕ್ಯಾತನಹಳ್ಳಿ, ನ.9– ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯ ಹಿರೀಕ್ಯಾತನಹಳ್ಳಿ ಗ್ರಾಮದಲ್ಲಿ ಚಿಕ್ಕಮ್ಮತಾಯಿ ದೇವಸ್ಥಾನ ಉದ್ಘಾಟನೆ ಮತ್ತು ಪ್ರತಿಷ್ಠಾಪನಾ ಕಾರ್ಯಕ್ರಮ ನ.10 ಮತ್ತು 11ರಂದು ನಡೆಯಲಿದೆ. ಗ್ರಾಮದ ವಾಲ್ಮೀಕಿ ಸಮಾಜದ ಟ್ರಸ್ಟ್ ವತಿಯಿಂದ ನಿರ್ಮಾಣಗೊಂಡಿರುವ ದೇವಸ್ಥಾನವನ್ನು ವಾಲ್ಮೀಕಿ ಮಹಾಸಂಸ್ಥಾನ ಮಠದ ಪ್ರಸನ್ನಾನಂದ ಪುರಿ ಸ್ವಾಮಿಗಳ ಆಶೀರ್ವಾದದೊಂದಿಗೆ ಹುಣಸೂರಿನ ಮಾದಹಳ್ಳಿ ಗ್ರಾಮದ ಉಕ್ಕಿನ ಕಂತೆ ಮಠದ ಶ್ರೀ ಶ್ರೀ ಸಾಂಬಸದಾ ಶಿವಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಲೋಕಾರ್ಪಣೆ ಮಾಡಲಾಗುವುದು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಎಚ್.ಪಿ. ಮಂಜುನಾಥ್ ವಹಿಸಲಿದ್ದು, ಉದ್ಘಾಟನೆಯನ್ನು ಶಾಸಕ ಅನಿಲ್ ಚಿಕ್ಕಮಾದು ನೆರವೇರಿಸುವರು. ಜ್ಯೋತಿಯನ್ನು ಎಂಸಿಡಿಸಿಸಿ ಬ್ಯಾಂಕಿನ ಅಧ್ಯಕ್ಷ ಹಾಗೂ ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್‌ನ ಉಪಾಧ್ಯಕ್ಷರಾದ ಜಿ.ಡಿ.ಹರೀಶ್ ಗೌಡ ಬೆಳಗಿಸುವರು. ಮುಖ್ಯ ಅತಿಥಿಗಳಾಗಿ ಗ್ರಾಪಂ ಅಧ್ಯಕ್ಷ ಜವರೇಗೌಡ, ಗ್ರಾಮದ ಯಜಮಾನರಾದ ಜಗದೀಶ್ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ.

ಅನಾಥ ಶವಗಳ ಮುಕ್ತಿದಾತ ಮಾದೇಶರಿಂದ ಮಹದೇಶ್ವರ ಬೆಟ್ಟದಲ್ಲಿ ಹೂವಿನ ಅಲಂಕಾರ

ತಿ.ನರಸೀಪುರ, ನ.9– ಪಟ್ಟಣದ ನಿವಾಸಿ ಅನಾಥ ಶವಗಳ ಮುಕ್ತಿದಾತ ಡಾ.ಎಂ.ಮಾದೇಶ್ ರವರು ತಮ್ಮ ತಂದೆ ಕೆ.ಮಹದೇವಪ್ಪನವರ ಜ್ಞಾಪಕಾರ್ಥವಾಗಿ



ಶ್ರೀ ಮಲೆ ಮಹದೇಶ್ವರ ಬೆಟ್ಟದಲ್ಲಿ 33 ನೇ ವರ್ಷದ ಹೂವಿನ ಅಲಂಕಾರ ಸೇವೆಯನ್ನು ನೆರವೇರಿಸಿದರು.

ಕಳೆದ 32 ವರ್ಷಗಳಿಂದಲೂ ಮಹದೇಶ್ವರ ಬೆಟ್ಟದ ದೇವಸ್ಥಾನದ ಸನ್ನಿಧಿಯಲ್ಲಿ ಹೂವಿನ ಅಲಂಕಾರ ಸೇವೆಯನ್ನು ನೆರವೇರಿಸುತ್ತಾ ಬಂದಿರುವ ಮಾದೇಶ್ ಎರಡನೇ ಕಾರ್ತಿಕ ಸೋಮವಾರದಂದು ಸುಮಾರು 800 ಕೆ.ಜಿ ಹೂಗಳನ್ನು ಬಳಸಿ 35 ಮಂದಿ ಹೂಗಾರರ ಸಹಕಾರದೊಂದಿಗೆ ದೇವಸ್ಥಾನದ ಗರ್ಭಗುಡಿ, ಚಪ್ಪರ ಮಾಳಿಗೆ, ಪ್ರಾಂಗಣ, ಗಣೇಶನ ಗುಡಿ, ಹುಲಿವಾಹನ, ಬಸವವಾಹನ, ರುದ್ರಾಕ್ಷಿ ಮಂಟಪ ಹಾಗೂ ಚಿನ್ನದರಥ, ಸಾಲೂರು ಮಠ ಮೊದಲಾದ ಸ್ಥಳಗಳನ್ನು ಸೇವಂತಿಗೆ, ಚೆಂಡುಮಲ್ಲಿಗೆ, ಗಣಗಲೆ, ಸುಗಂಧರಾಜ, ಜಾಲ್ವೇರಾ, ಆಸ್ಪರಾಸ್, ಗುಲಾಬಿ, ಮೊದಲಾದ ಬಗೆ ಬಗೆಯ ಬಣ್ಣಗಳ ಹೂಗಳಿಂದ ಸಿಂಗರಿಸಿ ಮಾದಪ್ಪನ ಸೇವೆ ಮಾಡಿದರು. ಬೆಳಿಗ್ಗೆಯಿಂದಲೇ ಸಹಸ್ರಾರು ಭಕ್ತಾದಿಗಳು ದೇವಾಲಯಕ್ಕೆ ಆಗಮಿಸಿ ಹೂವಿನ ಅಲಂಕಾರವನ್ನು ಕಣ್ತುಂಬಿಕೊಂಡರು. ಅಲಂಕಾರ ತಂಡದಲ್ಲಿ ಚಾಮರಾಜನಗರ, ಗುಂಡ್ಲುಪೇಟೆ, ತಿ.ನರಸೀಪುರದ ಸುರೇಶ್, ಅಭಿ, ರಘು, ಹರೀಶ್, ಬಾಲು, ಸಿದ್ದರಾಜು, ನಾಗ, ಮಹೇಶ್, ಶಿವು, ನಟೇಶ್ ಇತರರು ಇದ್ದರು.

ಬಿಎಸ್‌ಪಿಯಿಂದ ರಾಜ್ಯಾದ್ಯಂತ ಜೈಭೀಮ್ ಜನಜಾಗೃತಿ ಜಾಥಾ



ಹುಣಸೂರು, ನ.9– ಸಂವಿಧಾನದ ಆಶಯವನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಬಹುಜನ ಸಮಾಜ ಪಾರ್ಟಿ ರಾಜ್ಯ ವ್ಯಾಪ್ತಿ ಜೈ ಭೀಮ್ ಜನಜಾಗೃತಿ ಜಾಥಾ ಹಮ್ಮಿಕೊಂಡಿದೆ. ಇದು ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳ ತರಹ ರಾಜಕೀಯ ಜಾಥಾ ಅಲ್ಲ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಕೃಷ್ಣಮೂರ್ತಿ ಹೇಳಿದರು.

ನಗರದಲ್ಲಿ ಬೈಕ್ ಮತ್ತು ಕಾಲ್ನಡಿಗೆ ಜಾಥಾ ನಡೆಸಿ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ 75 ವರ್ಷ ಆಡಳಿತ ನಡೆಸಿದ್ದರೂ, ಉಳಿವಿಗಾಗಿ ಭಾರತ್ ಜೋಡೊ ಯಾತ್ರೆ ಹಮ್ಮಿಕೊಂಡಿದೆ. ಬಿಜೆಪಿ ತನ್ನ ರಾಜಕೀಯ ಲಾಭಕ್ಕೆ ಜನಸಂಕಲ್ಪ ಯಾತ್ರೆ, ಜೆಡಿಎಸ್ ಪಂಚರತ್ನ ಯಾತ್ರೆಗೆ ಕುಟುಂಬ ರಾಜಕಾರಣಕ್ಕೆ ಚಾಲನೆ ನೀಡುತ್ತಿದ್ದಾರೆ ಎಂದರು.

ಭ್ರಷ್ಟಾಚಾರ: ರಾಜ್ಯ ಮತ್ತು ಕೇಂದ್ರ ಸರ್ಕಾರದ ಬಿಜೆಪಿ ಭ್ರಷ್ಟಾಚಾರದ ಕೂಪವಾಗಿದೆ. ಗುಜರಾತ್ ರಾಜ್ಯದಲ್ಲಿ ಸಂಭವಿಸಿದ ತೂಗು ಸೇತುವೆ ದುರಂತದಲ್ಲಿ ಭ್ರಷ್ಟಾಚಾರ, ಹಣದಾಸೆಗೆ ನೂರಕ್ಕೂ ಹೆಚ್ಚು ಜನರನ್ನು ಬಲಿ ಪಡೆದಿದೆ ಎಂದರು.

ಬಿಎಸ್‌ಪಿ ಕಾರ್ಯಕರ್ತರು ನಗರದ ಪ್ರವಾಸಿ ಮಂದಿರದಿಂದ ಬೈಕ್ ಮತ್ತು ಕಾಲ್ನಡಿಗೆ ಜಾಥಾ ನಡೆಸಿದರು. ರಾಜ್ಯ ಪ್ರಧಾನ ಕಾರ್ಯದರ್ಶಿ ನಾಗೇಂದ್ರ, ತಾಲೂಕು ಘಟಕದ ಅಧ್ಯಕ್ಷ ಪ್ರಸನ್ನ, ಸೋಮನಹಳ್ಳಿ, ಇಮ್ತಿಯಾಜ್, ಜಿಲ್ಲಾ ಮುಖಂಡ ಭರತ್ ಗೌಡ, ಲೋಕೇಶ್, ಮಹೇಶ್ ಹಾಜರಿದ್ದರು.



ನಂಜನಗೂಡು ತಾಲೂಕು ನಗರ್ಲೆ ಗ್ರಾಮದಲ್ಲಿ ಪಶು ಚಿಕಿತ್ಸಾಲಯದ ವತಿಯಿಂದ ರಾಸುಗಳಿಗೆ 3ನೇ ಸುತ್ತಿನ ಕಾಲುಬಾಯಿ ಜ್ವರದ ವಿರುದ್ಧ ಲಸಿಕೆ ಹಾಕಲಾಯಿತು. ಪಶು ಚಿಕಿತ್ಸಾಲಯದ ವ್ಯಾಪ್ತಿಯ ಒಟ್ಟು 2000 ರಾಸುಗಳಿಗೆ ಮುಂದಿನ 20 ದಿನಗಳಲ್ಲಿ ಮುನ್ನೆಚ್ಚರಿಕೆಯಾಗಿ ಲಸಿಕೆಯನ್ನು ಹಾಕುವ ಗುರಿ ಹೊಂದಲಾಗಿದೆ.

ರೈತ ಪರ್ವಕ್ಕೆ ನೇಮಕ



ಹೆಚ್.ಡಿ.ಕೋಟೆ, ನ.9– ಕರ್ನಾಟಕ ರಾಜ್ಯ ರೈತ ಸಂಘ ರೈತ ಪರ್ವದ ರಾಜ್ಯ ಸಂಚಾಲಕರಾಗಿ ಹೆಚ್. ಡಿ. ಕೋಟೆ ತಾಲೂಕಿನ ಯರಳ್ಳಿ ಗ್ರಾಮದ ವೈ.ಎಲ್. ನವೀನ್ ಕುಮಾರ್ ನೇಮಕ ಗೊಂಡಿದ್ದಾರೆ ಎಂದು ರಾಜ್ಯಾಧ್ಯಕ್ಷ ಅರುಣ್ ಕುಮಾರ್ ತಿಳಿಸಿದ್ದಾರೆ.

ಮತದಾರರ ಕರಡು ಪ್ರತಿಯಲ್ಲಿ ದೋಷ ನಿವಾರಣೆಗಾಗಿ ಜನಜಾಗೃತಿ ಜಾಥಾ



ತಿ.ನರಸೀಪುರ, ನ.9– ಚುನಾವಣಾ ಹೊಸ ಮತದಾರ ಕರಡು ಪ್ರತಿಯನ್ನು ಬಿಡುಗಡೆಗೊಳಿಸಿದ್ದು, ಪಟ್ಟಿಯಲ್ಲಿರುವ ಲೋಪದೋಷಗಳನ್ನು ಸರಿಪಡಿಸಿಕೊಳ್ಳಲು ಜನಜಾಗೃತಿ ಜಾಥಾವನ್ನು ತಾಲೂಕು ಆಡಳಿತದ ವತಿಯಿಂದ ನಡೆಸಲಾಯಿತು.

ಜಿಲ್ಲಾ ಪಂಚಾಯತ್ ಮೈಸೂರು ಮತ್ತು ತಾಲೂಕು ಪಂಚಾಯಿತಿ ಮತ್ತು ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ಜಾಥಾ ಕಾರ್ಯಕ್ರಮವನ್ನು ನಡೆಸಲಾಯಿತು. ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳು, ಶಿಕ್ಷಕರು, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು ಭಾಗವಹಿಸಿ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಮತದಾರ ಪಟ್ಟಿ ಪರಿಷ್ಕರಣೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಘೋಷಣೆಗಳನ್ನು ಕೂಗಿದರು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ತಹಶೀಲ್ದಾರ್ ಸಿ. ಜಿ. ಗೀತಾ, ಚುನಾವಣೆ ಆಯೋಗವು ಮತದಾರ ಪಟ್ಟಿಯ ಕರಡು ಪ್ರತಿಯನ್ನು ಬಿಡುಗಡೆಗೊಳಿಸಿದ್ದು, ಮತದಾರ ಪಟ್ಟಿ ಪರಿಷ್ಕರಣೆಗೆ 5ನೇ ಜನವರಿ 2023 ರವರೆಗೆ ಅವಕಾಶ ಕಲ್ಪಿಸಿದೆ. ನಿಗದಿತ ಅವಧಿಯೊಳಗೆ ಮತದಾರ ಪಟ್ಟಿಯ ತಿದ್ದು ಪಡಿಗೆ ಅರ್ಜಿ ಸಲ್ಲಿಸಲು ಮನವಿ ಮಾಡಿದರು.

ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಸಿ.ಕೃಷ್ಣ ಮಾತನಾಡಿ, 18 ವರ್ಷಗಳು ತುಂಬಿದ ಪ್ರತಿಯೊಬ್ಬರು ಮತದಾರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳುವಂತೆ ಕೋರಿದರು. ಅಲ್ಲದೆ ಮತದಾರ ಪಟ್ಟಿಯಲ್ಲಿರುವ ತಮ್ಮ ವಿವರಗಳನ್ನು ಪರೀಕ್ಷಿಸಿಕೊಂಡು ವಿವರಗಳು ತಪ್ಪಿದ್ದಲ್ಲಿ ತಿದ್ದುಪಡಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಚುನಾವಣಾ ಶಿರಸ್ತೇದಾರ್ ಜೆ. ಕೆ. ಪ್ರಭುರಾಜ್, ಸಿಡಿಪಿಒ ಭವ್ಯಶ್ರೀ, ಸಿ.ಆರ್. ಪಿ. ನವೀನ, ನಂದಿನಿ, ರೂಪ ಇತರರು ಹಾಜರಿದ್ದರು.

ಎರಡೂವರೆ ವರ್ಷದಲ್ಲಿ ಎಂಸಿಡಿಸಿಸಿ ಬ್ಯಾಂಕ್ ಸಾಕಷ್ಟು ಪ್ರಗತಿ ಸಾಧಿಸಿದೆ




ಹನಗೋಡು, ನ.9– ಕಳೆದ ಎರಡೂವರೆ ವರ್ಷಗಳ ಅವಧಿಯಲ್ಲಿ ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಸಾಕಷ್ಟು ಪ್ರಗತಿ ಸಾಧಿಸಿದೆ. ಕೋವಿಡ್ ಸಂದರ್ಭದಲ್ಲಿ ರೈತರಿಗೆ ಆರ್ಥಿಕ ಸಹಾಯವಾಗಲೆಂದು ಸಾಲ ವಿತರಿಸಲಾಗಿದೆ ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ ತಿಳಿಸಿದ್ದಾರೆ.

ಸಮೀಪದ ಚಿಲ್ಕುಂದ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಕೃಷಿ ಸಾಲ ವಿತರಣೆ ಮಾಡಿ ಮಾತನಾಡಿದ ಅವರು, ತಾಲೂಕಿನಲ್ಲಿ ಈವರೆಗೆ 38.20 ಕೋಟಿ ಠೇವಣಿ ಸಂಗ್ರಹಿಸಲಾಗಿದೆ. 116.68 ಕೋಟಿ ಬೆಳೆ ಸಾಲ, 10.70 ಕೋಟಿ ಮಧ್ಯಮಾವಧಿ ಸಾಲ, ಹೈನುಗಾರಿಕೆ, ದುಡಿಯುವ ಬಂಡವಾಳ ಬಡ್ಡಿರಹಿತ ಸಾಲ 71.45 ಲಕ್ಷ, ಕೃಷಿಯೇತರ ಸಾಲ 16.89 ಕೋಟಿ, ಸ್ವ–ಸಹಾಯ ಸಂಘಗಳ ಸಾಲ 1.97 ಕೋಟಿ ಸೇರಿ ಒಟ್ಟು 146.97 ಕೋಟಿ ಸಾಲ ವಿತರಣೆ ಮಾಡಲಾಗಿದೆ ಎಂದು ವಿವರಿಸಿದರು.

ಎರಡೂವರೆ ವರ್ಷಗಳ ನಮ್ಮ ಅವಧಿಯಲ್ಲಿ ಒಟ್ಟು 17.12 ಕೋಟಿ ಠೇವಣಿ ಸಂಗ್ರಹಿಸಲಾಗಿದೆ. ಒಟ್ಟು 45.53 ಕೋಟಿ ಸಾಲ ವಿತರಣೆ ಮಾಡಿದಂತಾಗಿದೆ ಎಂದು ತಿಳಿಸಿದರು. ನಮ್ಮ ಬ್ಯಾಂಕ್ 2018ರಲ್ಲಿ 27 ಲಕ್ಷ ಲಾಭಾಂಶ ಹೊಂದಿತ್ತು. ಪ್ರಸ್ತುತ 4.4 ಕೋಟಿ ಲಾಭದಲ್ಲಿದೆ. ಮೈಸೂರು– ಚಾಮರಾಜನಗರ ಎರಡೂ ಜಿಲ್ಲೆಗಳಿಂದ ಕಳೆದ ಎರಡೂವರೆ ವರ್ಷಗಳ ಹಿಂದೆ ಕೇವಲ 45 ಸಾವಿರ ರೈತರು ಸಾಲ ಪಡೆದಿದ್ದರು. ಪ್ರಸ್ತುತ 81 ಸಾವಿರ ರೈತ ಕುಟುಂಬಗಳಿಗೆ 1,055 ಕೋಟಿವರೆಗೆ ಸಾಲ ವಿತರಣೆ ಮಾಡಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕರುಗಳಾದ ಕೆ.ಎಸ್.ಕುಮಾರ್, ನಾಗಭೂಷಣ್, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಪ್ರೇಮಕುಮಾರ್, ಬ್ಯಾಂಕಿನ ಮೇಲ್ವಿಚಾರಕ ಶ್ರೀನಿವಾಸ್, ಗುರು, ಜಿಪಂ ಮಾಜಿ ಸದಸ್ಯ ಸುರೇಂದ್ರ, ನಗರಸಭಾ ಸದಸ್ಯ ಸತೀಶ್, ಟಿಎಪಿಸಿಎಂಎಸ್ ಅಧ್ಯಕ್ಷ ಕೆಂಪೇಗೌಡ ಮತ್ತು ನಿರ್ದೇಶಕರುಗಳು ಹಾಜರಿದ್ದರು

ಸರೋಜಮ್ಮ ನಿಧನ



ಹೆಚ್.ಡಿ.ಕೋಟೆ, ನ.9– ಹೊಮ್ಮರಗಳ್ಳಿ ಗ್ರಾಮದ ನಿವಾಸಿ ಕೆಂಗೇಗೌಡ ಅವರ ಪತ್ನಿ ಸರೋಜಮ್ಮ (75) ಬುಧವಾರ ನಿಧನರಾಗಿದ್ದಾರೆ. ಮೃತರು ಪತಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ (ನ.10) ಮಧ್ಯಾಹ್ನ 12 ಗಂಟೆಗೆ ಅವರ ತೋಟದಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳ ಕರಡು ಮತದಾರರ ಪಟ್ಟಿ ಪ್ರಕಟ

● 2023ರ ಜ.5ರಂದು ಅಂತಿಮ ಪಟ್ಟಿ ● ನ.12, 20, ಡಿ.3, 4ರಂದು ವಿಶೇಷ ಅಭಿಯಾನ



ಮೈಸೂರು,ನ.9(ಪಿಎಂ)–ಮತದಾರರ ಪಟ್ಟಿ ಪರಿಷ್ಕರಣೆ ಅರ್ಹತೆ (2023ರ ಜ.1) ಸಂಬಂಧ ಭಾರತ ಚುನಾವಣಾ ಆಯೋಗವು ವೇಳಾಪಟ್ಟಿ ನೀಡಿದ್ದು, ಅದರಂತೆ ಕರಡು ಮತದಾರರ ಪಟ್ಟಿಗಳನ್ನು ಜಿಲ್ಲೆಯ ಎಲ್ಲಾ 11 ವಿಧಾನಸಭಾ ಕ್ಷೇತ್ರಗಳ ಮತದಾರರ ನೋಂದಣಾಧಿಕಾರಿ ಮತ್ತು ಸಹಾಯಕ ಮತದಾರರ ನೋಂದಣಾಧಿಕಾರಿ ಕಚೇರಿಗಳಲ್ಲಿ ಪ್ರಕಟಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳೂ ಆದ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರಡು ಮತದಾರರ ಪಟ್ಟಿಯಂತೆ ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಿಂದ ಒಟ್ಟು 25,27,812 ಮತದಾರರು ಇದ್ದಾರೆ. ಈ ಪೈಕಿ 12,58,679 ಪುರುಷರು, 12,68,934 ಮಹಿಳೆಯರು ಹಾಗೂ 199 ತೃತೀಯ ಲಿಂಗ ಮತದಾರರು ಇದ್ದಾರೆ.

ಮತದಾರರ ಪಟ್ಟಿಗಳ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ವೇಳಾಪಟ್ಟಿಯಂತೆ ಇಂದು (ನ.9) ಕರಡು ಮತದಾರರ ಪಟ್ಟಿ ಪ್ರಕಟಿಸಲಾಗಿದೆ. ಅಂತೆಯೇ ಇಂದಿನಿಂದ ಡಿ.8ರ ವರೆಗೆ ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿದೆ. ಈ ಅವಧಿಯಲ್ಲಿ ಹೆಸರು ಸೇರ್ಪಡೆ, ತಿದ್ದುಪಡಿ ಮತ್ತು ತೆಗೆದು ಹಾಕಲು ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕಿದೆ. ಇದಕ್ಕಾಗಿಯೇ ನ.12, 20, ಡಿ.3 ಮತ್ತು 4ರಂದು ವಿಶೇಷ ಅಭಿಯಾನ ನಡೆಯಲಿದೆ. ಇದರಲ್ಲಿ ಪ್ರತಿ ಮತಗಟ್ಟೆಗಳಿಗೆ ನಿಯೋಜಿಸಿರುವ ಬಿಎಲ್‌ಓಗಳು (ಮತಗಟ್ಟೆ ಅಧಿಕಾರಿಗಳು) ಮನೆ–ಮನೆ ಸಮೀಕ್ಷೆ ನಡೆಸಲಿದ್ದಾರೆ.

ಡಿ.26ರಂದು ಹಕ್ಕು ಮತ್ತು ಆಕ್ಷೇಪಣೆ ಇತ್ಯರ್ಥಪಡಿಸುವ ಕೊನೆ ದಿನವಾಗಿದೆ. 2023ರ ಜ.3ರಂದು ಮತದಾರರ ಪಟ್ಟಿಯ ನಿಯತಾಂಕಗಳ ಪರಿಶೀಲನೆ ಹಾಗೂ ಚುನಾವಣಾ ಆಯೋಗದಿಂದ ಅಂತಿಮ ಮತದಾರರ ಪಟ್ಟಿಯ ಪ್ರಕಟಣೆಗೆ ಅನುಮತಿ ಪಡೆಯಲಾಗುವುದು. ಅಲ್ಲದೆ, ದತ್ತಾಂಶ ಕಾಲೋಚಿತಗೊಳಿಸಿ ಪೂರಕ ಪಟ್ಟಿಗಳ ಮುದ್ರಣ ಮಾಡಲಾಗುವುದು. ಜ.5ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ.

ವಿಧಾನಸಭಾ ಕ್ಷೇತ್ರಗಳ ಮತದಾರರ ಪಟ್ಟಿಯನ್ನು ಮುಖ್ಯ ಚುನಾವಣಾಧಿಕಾರಿಗಳು, ಕರ್ನಾಟಕ ರಾಜ್ಯ ಇವರ ಅಧಿಕೃತ ಜಾಲತಾಣ <https://ceo.karnataka.gov.in1.>ನಲ್ಲಿ ಲಭ್ಯವಿದ್ದು, ಸಾರ್ವಜನಿಕರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾದ ಬಗ್ಗೆ ಪರಿಶೀಲಿಸುವುದು ಹಾಗೂ ಸರಿಯಾದ ಹೆಸರನ್ನು ನಮೂದುಗಳೊಂದಿಗೆ ನೋಂದಾಯಿಸಿದ ಬಗ್ಗೆ ಖಚಿತಪಡಿಸಿಕೊಳ್ಳಬೇಕು.

ಕರಡು ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಸಾರ್ವಜನಿಕರು ಮತದಾರರ ಪಟ್ಟಿಯಲ್ಲಿ ಅವರ ಹೆಸರು ಇರುವುದನ್ನು ಖಚಿತಪಡಿಸಿಕೊಳ್ಳಬೇಕು. ಒಂದು ವೇಳೆ ಹೆಸರು ಕೈಬಿಟ್ಟು ಹೋಗಿದ್ದಲ್ಲಿ ಸಂಬಂಧಿಸಿದ ಮತದಾರರ ನೋಂದಣಾಧಿಕಾರಿಗಳ ಗಮನಕ್ಕೆ ತಂದು ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವ ಅವಧಿಯಲ್ಲಿ ಹೆಸರು ಸೇರ್ಪಡೆ ಮಾಡಿಸಬೇಕು.

ಕರಡು ಮತದಾರರ ಪಟ್ಟಿಯಲ್ಲಿ ಮೃತ ಮತದಾರರ ಹೆಸರುಗಳು ಉಳಿದುಕೊಂಡಿದ್ದಲ್ಲಿ ಅದರ ಬಗ್ಗೆ ಮಾಹಿತಿ, ದಾಖಲಾತಿಗಳನ್ನು ಹೊಂದಿರುವ ಮೃತ ಮತದಾರರ ಕುಟುಂಬದ ಸದಸ್ಯರು ಅಥವಾ ಆ ಬಗ್ಗೆ ಮಾಹಿತಿ ಹೊಂದಿದ ಬೂತ್ ಮಟ್ಟದ ಅಧಿಕಾರಿಗಳು, ಬೂತ್ ಮಟ್ಟದ ಏಜೆಂಟರುಗಳು, ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಅಂತಹ ಮೃತ ಮತದಾರರ ಹೆಸರನ್ನು ಪ್ರಮಾಣಿತ ಕಾರ್ಯನಿರ್ವಹಣಾ ಪದ್ಧತಿಗೆ ಅನುಗುಣವಾಗಿ ಕೈಬಿಡಲು ಸಹಕಾರ ನೀಡಬೇಕು. ಕರಡು ಮತದಾರರ ಪಟ್ಟಿಯಲ್ಲಿರುವ ಯಾವುದೇ ಮತದಾರರ ಭಾವಚಿತ್ರವನ್ನು ಅಳವಡಿಸದಿದ್ದಲ್ಲಿ, ಭಾವಚಿತ್ರವು ಅಸ್ಪಷ್ಟವಾಗಿದ್ದಲ್ಲಿ, ಅಥವಾ ಚುನಾವಣಾ ಆಯೋಗವು ನಿಗದಿಪಡಿಸಿರುವ ಮಾನದಂಡಗಳಿಗೆ ಅನುಗುಣವಾಗಿಲ್ಲವಾದರೆ, ಇನ್ನಿತರೆ ದೋಷವಿರುವ ಭಾವಚಿತ್ರಗಳನ್ನು ತಿದ್ದುಪಡಿ ಅರ್ಜಿಯ ಮೂಲಕ ಬದಲಿಸಿಕೊಳ್ಳಲು ಅವಕಾಶವಿದೆ.

17 ವರ್ಷ ಮೇಲ್ಪಟ್ಟವರು ಮುಂಗಡ ಅರ್ಜಿ ಸಲ್ಲಿಸಬಹುದು

ಮತದಾರರ ಪಟ್ಟಿಗೆ ನೋಂದಾಯಿಸಲು ವರ್ಷದಲ್ಲಿ ನಾಲ್ಕು ಅವಕಾಶಗಳನ್ನು ನೀಡಲಾಗಿದೆ (ಮೊದಲಿದ್ದಂತೆ ಅರ್ಹತಾ ದಿನಾಂಕವಾದ ಜನವರಿ 1ರವರೆಗೂ ಕಾಯಬೇಕಾಗಿಲ್ಲ) 17+ ವಯಸ್ಸಿನ ಯುವಜನರಿಗೆ ಮುಂಗಡ ಅರ್ಜಿ ಸಲ್ಲಿಸುವ ಸೌಲಭ್ಯ ಕಲ್ಪಿಸಲಾಗಿದೆ. ಪ್ರಸಕ್ತ 2023ರ ವಾರ್ಷಿಕ ಮತದಾರರ ಪಟ್ಟಿಯ ಪರಿಷ್ಕರಣೆ ಸಂದರ್ಭದಲ್ಲಿ 1ನೇ ಏಪ್ರಿಲ್, 1ನೇ ಜುಲೈ ಮತ್ತು 1ನೇ ಅಕ್ಟೋಬರ್ 2022ಕ್ಕೆ 18 ವರ್ಷ ತುಂಬುವ ಯುವ ಮತದಾರರು ಪಟ್ಟಿಗೆ ಹೆಸರು ಸೇರಿಸಲು ಮುಂಗಡ ಅರ್ಜಿ ಸಲ್ಲಿಸಲು ಅವಕಾಶವಿದೆ.

ಅರ್ಜಿ ಸಲ್ಲಿಸುವ ವಿಧಾನ

ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ನೇಮಕವಾಗಿರುವ ಅಧಿಸೂಚಿತ ಮತದಾರರ ನೋಂದಣಾಧಿಕಾರಿಗಳು, ಸಹಾಯಕ ಮತದಾರರ ನೋಂದಣಾಧಿಕಾರಿಗಳಿಗೆ ನಿಗದಿತ ನಮೂನೆಗಳಲ್ಲಿ ಆನ್‌ಲೈನ್ ಮೂಲಕವೇ ಅವಶ್ಯಕ ದಾಖಲೆಗಳೊಂದಿಗೆ ಅರ್ಜಿಗಳನ್ನು ಸಲ್ಲಿಸಲು ಹೆಚ್ಚಿನ ಆದ್ಯತೆ ನೀಡಬೇಕು. ಅಲ್ಲದೇ ಸಾರ್ವಜನಿಕರು ಹಕ್ಕು ಮತ್ತು ಆಕ್ಷೇಪಣೆಯ ಅವಧಿಯಲ್ಲಿ ಸಲ್ಲಿಸುವ ಅರ್ಜಿಗಳನ್ನು ಆನ್‌ಲೈನ್ ಮೂಲಕವೇ (NVSP website, VHA mobile App, BLOಗಳ ಮೂಲಕ Garuda App ನಲ್ಲಿ) ಸಲ್ಲಿಸಬೇಕು.

ಕಂಟ್ರೋಲ್ ರೂಂಗಳ ಮಾಹಿತಿ

ಮೈಸೂರು ಜಿಲ್ಲೆಯ ವಿಧಾನಸಭಾ ಕ್ಷೇತ್ರವಾರು ಕಂಟ್ರೋಲ್ ರೂಂಗಳ ದೂರವಾಣಿ ಸಂಖ್ಯೆಗಳಿಗೆ ಕರೆ ಮಾಡಿ ಸಾರ್ವಜನಿಕರು ಸ್ಪಷ್ಟೀಕರಣ, ಮಾಹಿತಿ ಪಡೆದುಕೊಳ್ಳಬಹುದು. ಜಿಲ್ಲಾಧಿಕಾರಿಗಳ ಕಚೇರಿ: 1077, ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರ : 08223–274175, ಕೆ.ಆರ್.ನಗರ: 08223–262371, 08223– 262234, ಹುಣಸೂರು : 08222–252040, ಹೆಚ್.ಡಿ. ಕೋಟೆ: 08228–255600, ನಂಜನಗೂಡು: 08221– 223108, ಚಾಮುಂಡೇಶ್ವರಿ: 0821–2414811, 0821 –2414812, ಕೃಷ್ಣರಾಜ, ಚಾಮರಾಜ ಮತ್ತು ಎನ್‌ಆರ್ ಕ್ಷೇತ್ರ : 0821–2418800, ವರುಣಾ : 08221–223108, ಟಿ.ನರಸೀಪುರ : 08227–260210.



ಮೈಸೂರು ಡಿಸಿ ಕಚೇರಿಯಲ್ಲಿ ಬುಧವಾರ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ವಿವಿಧ ರಾಜಕೀಯ ಪಕ್ಷದ ಪ್ರತಿನಿಧಿಗಳೊಂದಿಗೆ ಮತದಾರರ ಪಟ್ಟಿಯ ಪರಿಷ್ಕರಣೆ ಸಭೆ ನಡೆಸಿ, ಕರಡು ಮತದಾರರ ಪಟ್ಟಿ ವಿತರಣೆ ಮಾಡಿದರು.

ಶುಲ್ಕರಹಿತ ದೂರವಾಣಿ 1950

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ 2022ರ ಸೆ.1ರ ನಂತರದಲ್ಲಿ ಸೇರ್ಪಡೆ, ತಿದ್ದುಪಡಿ ಮಾಡುವ ವಿವರಗಳ ಮತದಾರರ ಗುರುತಿನ ಚೀಟಿಯನ್ನು ಸ್ಪೀಡ್ ಪೋಸ್ಟ್ ಮೂಲಕ ಮತದಾರರಿಗೆ ವಿತರಣೆ ಮಾಡಲಾಗುವುದು. ಮತದಾರರ ಪಟ್ಟಿಯ ಪರಿಷ್ಕರಣೆಯ ಸಲುವಾಗಿ 1950 ಸಂಖ್ಯೆ ಮತದಾರರ ಸಹಾಯವಾಣಿ ಪ್ರಾರಂಭಿಸಲಾಗಿದೆ.

ಮತಗಟ್ಟೆಗಳ ರ‍್ಯಾಷನಲೈಜೇಷನ್ ಹಿನ್ನೆಲೆ; 2,919ರಿಂದ 2905ಕ್ಕೆ ಇಳಿಕೆಯಾದ ಮತಗಟ್ಟೆಗಳು

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತಗಟ್ಟೆಗಳ ರ‍್ಯಾಷನಲೈಜೇಷನ್ ಸಂಬಂಧ 1500ಕ್ಕೂ ಹೆಚ್ಚು ಮತದಾರರಿರುವ ಮತಗಟ್ಟೆಗಳನ್ನು ವಿಭಜಿಸಿ ಹೆಚ್ಚುವರಿಯಾಗಿ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಅಲ್ಲದೆ, ಕಡಿಮೆ ಮತದಾರರಿರುವ ಮತಗಟ್ಟೆಗಳನ್ನು ಒಗ್ಗೂಡಿಸಲಾಗಿದೆ. ಅದರಂತೆ ಒಟ್ಟಾರೆ ಜಿಲ್ಲೆಯಲ್ಲಿರುವ 2,919 ಮತಗಟ್ಟೆಗಳ ಪೈಕಿ 19 ಅನ್ನು ವಿಲೀನಗೊಳಿಸಿದ್ದು, 1500ಕ್ಕೂ ಹೆಚ್ಚು ಮತದಾರರಿರುವ ಮತಗಟ್ಟೆಗಳನ್ನು ವಿಭಜಿಸಿ 4 ಅನ್ನು ಹೆಚ್ಚಳ ಮಾಡಲಾಗಿದೆ. ಜೊತೆಗೆ 2 ಕಿ.ಮೀ. ದೂರದ ಹಿನ್ನೆಲೆಯಲ್ಲಿ 1 ಮತಗಟ್ಟೆಯನ್ನು ಹೆಚ್ಚಳ ಮಾಡಲಾಗಿದೆ. ಒಟ್ಟಾರೆ ಈಗ ಜಿಲ್ಲೆಯಲ್ಲಿ 2905 ಮತಗಟ್ಟೆಗಳನ್ನು ರಚಿಸಲಾಗಿದೆ

ಮತದಾರರ ಗುರುತಿನ ಚೀಟಿಗೆ ಆಧಾರ್ ಜೋಡಣೆ; ಜಿಲ್ಲೆಯಲ್ಲಿ ಶೇ.61.59ರಷ್ಟು ಪ್ರಗತಿ

ಮತದಾರರ ಪಟ್ಟಿಯಲ್ಲಿನ ಮತದಾರರನ್ನು ದೃಢೀಕರಣದ ಉದ್ದೇಶದಿಂದ ಹೊಸದಾಗಿ ಜಾರಿಗೆ ತಂದಿರುವ ನಮೂನೆ–6ಬಿ ಅಲ್ಲಿ ಮತದಾರರ ಪಟ್ಟಿಯಲ್ಲಿ ನೋಂದಣಿಯಾಗಿರುವ ಮತದಾರರು ತಮ್ಮ ಆಧಾರ್ ಸಂಖ್ಯೆ ಜೋಡಣೆ ಮಾಡಿ ದೃಢೀಕರಿಸಬಹುದು.

ಆಧಾರ್ ಮಾಹಿತಿ ಒದಗಿಸಲು ಸಾಧ್ಯವಾಗದಿದ್ದಲ್ಲಿ ಇತರ 11 ದಾಖಲೆಗಳ ಪೈಕಿ ಯಾವುದಾದರೂ ಒಂದನ್ನು ಒದಗಿಸಿ ದೃಢೀಕರಿಸಲು ಅವಕಾಶವಿದೆ. ಮನ್ರೇಗಾ ಉದ್ಯೋಗ ಕಾರ್ಡ್, ಬ್ಯಾಂಕ್, ಅಂಚೆ ಕಚೇರಿಯಿಂದ ನೀಡಲಾದ ಭಾವಚಿತ್ರವಿರುವ ಪಾಸ್ ಪುಸ್ತಕ, ಕಾರ್ಮಿಕ ಮಂತ್ರಾಲಯದ ಯೋಜನೆಯಡಿ ನೀಡಲಾದ ಆರೋಗ್ಯ ವಿಮೆ ಸ್ಮಾರ್ಟ್ ಕಾರ್ಡ್, ಡ್ರೈವಿಂಗ್ ಲೈಸೆನ್ಸ್, ಪಾನ್ ಕಾರ್ಡ್, ಎನ್.ಪಿ.ಆರ್ ಅಡಿಯಲ್ಲಿ ಆರ್.ಜಿ.ಐ ಮೂಲಕ ನೀಡಲಾದ ಸ್ಮಾರ್ಟ್ ಕಾರ್ಡ್, ಇಂಡಿಯನ್ ಪಾಸ್‌ಪೋರ್ಟ್, ಭಾವಚಿತ್ರವಿರುವ ಪಿಂಚಣಿ ದಾಖಲೆ, ಕೇಂದ್ರ, ರಾಜ್ಯ ಸರ್ಕಾರ, ಸಾರ್ವಜನಿಕ ವಲಯದ ಉದ್ದಿಮೆಗಳು, ಸಾರ್ವಜನಿಕ ನಿಯಮಿತ ಕಂಪನಿಗಳ ಭಾವಚಿತ್ರವಿರುವ ಗುರುತಿನ ಚೀಟಿ, ಸಂಸತ್ ಸದಸ್ಯರು, ವಿಧಾನಸಭಾ ಸದಸ್ಯರು, ವಿಧಾನಪರಿಷತ್ ಸದಸ್ಯರಿಗೆ ನೀಡಲಾದ ಅಧಿಕೃತ ಗುರುತಿನ ಚೀಟಿ ಹಾಗೂ ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯದ ವಿಶಿಷ್ಟ ಗುರುತಿನ ಚೀಟಿ (ಯುಡಿಐಡಿ) ಒದಗಿಸಿ ದೃಢೀಕರಿಸಿಕೊಳ್ಳಬಹುದು.

ಈ ದೃಢೀಕರಣಕ್ಕೆ ಆನ್‌ಲೈನ್ ಮತ್ತು ಆಫ್‌ಲೈನ್ ಎರಡರಲ್ಲೂ ಅವಕಾಶವಿದೆ. ಆನ್‌ಲೈನ್ ವ್ಯವಸ್ಥೆಯಡಿ ಎನ್‌ವಿಎಸ್‌ಪಿ (NVSP) ಮತ್ತು ವೋಟರ್ ಹೆಲ್ಪ್‌ಲೈನ್ ಆ್ಯಪ್ (VHA)ನಲ್ಲಿ ಮತದಾರು ಮಾಹಿತಿಯನ್ನು ದೃಢೀಕರಿಸಲು ಅವಕಾಶವಿದೆ. ಆಧಾರ್ ಸ್ವಯಂ ದೃಢೀಕರಣಕ್ಕೆ ಆಧಾರ್ ಜೋಡಣೆಯಾಗಿರುವ ಮೊಬೈಲ್‌ಗೆ ಸ್ವೀಕೃತವಾಗುವ ಒಟಿಪಿ (OTP) ಸೌಲಭ್ಯವಿದೆ. ಮತದಾರರ ಗುರುತಿನ ಚೀಟಿಗೆ ಆಧಾರ್ ಜೋಡಣೆಯಲ್ಲಿ ಶೇ.61.59ರಷ್ಟು ಪ್ರಗತಿಯನ್ನು ಜಿಲ್ಲೆಯಲ್ಲಿ ಸಾಧಿಸಲಾಗಿದೆ.

ಐಸಿಸಿ ಟಿ20 ವಿಶ್ವಕಪ್

ಪಾಕಿಸ್ತಾನ ಫೈನಲ್‌ಗೆ

ಸಿಡ್ನಿ: ನ್ಯೂಜಿಲ್ಯಾಂಡ್ ತಂಡವನ್ನು ಮಣಿಸುವ ಮೂಲಕ ಪಾಕಿಸ್ತಾನ ಐಸಿಸಿ ಟಿ20 ವಿಶ್ವಕಪ್ ಫೈನಲ್‌ಗೆ ಪ್ರವೇಶಿಸಿದೆ. ಸಿಡ್ನಿಯಲ್ಲಿ ಇಂದು ನಡೆದ ಪಂದ್ಯದಲ್ಲಿ ನ್ಯೂಜಿಲ್ಯಾಂಡ್ ನೀಡಿದ್ದ 153 ರನ್‌ಗಳ ಸಾಧಾರಣ ಮೊತ್ತವನ್ನು ಬೆನ್ನಟ್ಟಿದ ಪಾಕಿಸ್ತಾನ ಇನ್ನು 5 ಎಸೆತ ಬಾಕಿ ಇರುವಂತೆ 153 ರನ್ ಪೇರಿಸಿ ಗೆಲುವಿನ ನಗೆ ಬೀರಿದೆ. ಪಾಕಿಸ್ತಾನ ಪರ ಆರಂಭಿಕರಾಗಿ ಕಣಕ್ಕಿಳಿದ ಮೊಹಮ್ಮದ್ ರಿಜ್ವಾನ್ ಮತ್ತು ಬಾಬರ್ ಅಜಾಂ ಅತ್ಯುತ್ತಮ ಆರಂಭ ಒದಗಿಸಿಕೊಟ್ಟರು. ಮೊಹಮ್ಮದ್ ರಿಜ್ವಾನ್ 57 ರನ್ ಬಾರಿಸಿದ್ದರೆ ಬಾಬರ್ ಅಜಾಂ 53 ರನ್ ಗಳಿಸಿ ಔಟಾದರು.

3ನೇ ವರ್ಷದ ಚಿರಸ್ಮರಣೆ



ಶ್ರೀಮಾನ್ ಹೊಸಟ್ಟಿ ರಾಜೇಗೌಡರು

ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ನಿಮ್ಮ ನೆನಪು ಚಿರನೂತನ ನಿಮ್ಮ ನೆನಪಿನಲ್ಲಿ ಧರ್ಮಪತ್ನಿ ಶ್ರೀಮತಿ ಸರೋಜಮ್ಮ, ಮಕ್ಕಳು, ಸೊಸೆಯಂದಿರು, ಅಳಿಯಂದಿರು ಮತ್ತು ಹೊಸಟ್ಟಿ ಕುಟುಂಬವರ್ಗ ಮುರುಕನಹಳ್ಳಿ, ಶೀಳನೆರೆ ಹೋ., ಕೆ.ಆರ್.ಪೇಟೆ ತಾ.

ನಿಧನ



ಶ್ರೀಮತಿ ಜವನಮ್ಮನವರು

ಡಾ|| ಆನಂದರವರ ಮಾತೃಶ್ರೀಯವರಾದ ಶ್ರೀಮತಿ. ಜವನಮ್ಮರವರು ದಿನಾಂಕ 9.11.2022 ರಂದು ದೈವಾಧೀನರಾಗಿದ್ದು ಇವರ ಅಂತ್ಯಕ್ರಿಯೆ ದಿನಾಂಕ 10.11.2022 ರಂದು ಮಧ್ಯಾಹ್ನ 1.00 ಗಂಟೆಗೆ ಗಣೇಶನಗರದ ರುದ್ರಭೂಮಿಯಲ್ಲಿ ನೆರವೇರಲಿದೆ ಇಂತಿ ದುಃಖತಪ್ತರು ಕುಟುಂಬವರ್ಗ ಮತ್ತು ಬಂಧುಮಿತ್ರರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷಿದಾರರಾದ ಮೈಸೂರು ಸಿಟಿ, ಸಿದ್ಧಾರ್ಥ ನಗರ, ತೀರ್ಥಂಕರ ಮಾರ್ಗ, ಮನೆ ನಂ. 965 ರಲ್ಲಿ ವಾಸವಾಗಿರುವ ಲೇಟ್ ಶೆಟ್ಟಪ್ಪ ರವರ ಮಗನಾದ ಸುಮಾರು 76 ವರ್ಷ ವಯಸ್ಸುಳ್ಳ **ಶ್ರೀ ಕೆ ಎಸ್ ಜಯಶಂಕರ್** ರವರು ಬೆಂಗಳೂರು ಸಿಟಿ–ಸೌತ್–560039, ಕೆಂಗೇರಿ ಹೋಬಳಿ, ನಾಯಂಡಹಳ್ಳಿ, ಪಂತರ್ ಪಾಳ್ಯ, ರೇಡಿಯಂಟ್ ಕರೇಲ್, ಮನೆ ನಂ 404ರಲ್ಲಿ ವಾಸವಾಗಿರುವ ಲೇಟ್ ಕೆ.ಎಲ್ ವಿಜಯ ನಾರಾಯಣ್ ರವರ ಮಗನಾದ ಸುಮಾರು 48 ವರ್ಷ ವಯಸುಳ್ಳ **ಶ್ರೀ ಮಂಜುನಾಥ ಕೆ. ವಿ.** ಮಾಲೀಕತ್ವಕ್ಕೆ ಒಳಪಟ್ಟ ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಖರೀದಿಸಲು ತೀರ್ಮಾನಿಸಿ ದಿನಾಂಕ 07–11–2022 ರಂದು ಕ್ರಯದ ಕರಾರು ಪತ್ರ ಮಾಡಿಕೊಂಡಿರುತ್ತಾರೆ.

ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಗಾದರೂ ಯಾವುದೇ ರೀತಿಯಾ ಹಕ್ಕು, ಬಾಧ್ಯತೆ, ಹಿತಾಸಕ್ತಿ, ಇದ್ದಲ್ಲಿ ಈ ಸಾರ್ವಜನಿಕ ಪ್ರಕಟಣೆ ಹೊರಡಿಸಿದ ಏಳು (7) ದಿನಗಳ ಒಳಗಾಗಿ ಸೂಕ್ತ ದಾಖಲಾತಿಗಳೊಂದಿಗೆ ಖುದ್ದಾಗಿ ಅಥವಾ ವಕೀಲರ ಮೂಲಕ ಈ ಕೆಳಕಂಡ ವಕೀಲರನ್ನು ಸಂಪರ್ಕಿಸ ಬಹುದು, ತಪ್ಪಿದಲ್ಲಿ ಯಾವುದೇ ತಕರಾರುಗಳು ಇಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಷಡ್ಯೂಲ್ ಸ್ವತ್ತಿಗೆ ಸಂಬಂದಿಸಿದಂತೆ ನೊಂದಾಯಿತ ಶುದ್ಧ ಕ್ರಯ ಪತ್ರ ಮಾಡಿಕೊಳ್ಳುವವರಿದ್ದಾರೆ. ಒಂದು ವೇಳೆ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಶುದ್ಧ ಕ್ರಯ ಪತ್ರ ನೊಂದಣಿ ಆದ ನಂತರ ಬಂದ ತಕರಾರುಗಳು ನಮ್ಮ ಕಕ್ಷಿದಾರರನ್ನು ಯಾವುದೇ ರೀತಿಯಲ್ಲಿ ಬದ್ಧಪಡಿಸುವುದಿಲ್ಲವೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಯರಗನಹಳ್ಳಿ ಗ್ರಾಮ, ಸರ್ವೆ ನಂ.54, 55, 56, 57, 58, 59, 60, 61, 67, 68ರಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಶಾಲಾ ಶಿಕ್ಷಕರ ಗೃಹ ನಿರ್ಮಾಣ ಸಹಕಾರ ಸಂಘ(ನಿ), ರವರಿಂದ 1ನೇ ಹಂತದಲ್ಲಿ ರಾಧಕೃಷ್ಣ ನಗರ (ಶಿಕ್ಷಕರ ಬಡಾವಣೆ)ಯ ವಿವೇಕಾನಂದ ಬ್ಲಾಕ್‌ಗೆ ಸೇರಿದ, ನಿವೇಶನದ ಸಂಖ್ಯೆ 150 ಇದರ ಅಳತೆ ಪೂರ್ವ–ಪಶ್ಚಿಮ 40 ಅಡಿ, ಉತ್ತರ ದಕ್ಷಿಣ 30 ಅಡಿಗಳುಳ್ಳ ನಿವೇಶನ ಈ ಕ್ರಯದ ಕರಾರು ಪತ್ರಕ್ಕೆ ಸೇರಿದ ಸ್ವತ್ತಾಗಿರುತ್ತದೆ. ನೀವೇಶನಕ್ಕೆ ಚಕ್ಕುಬಂದಿ: **ಪೂರ್ವಕ್ಕೆ:** ರಸ್ತೆ, **ಪಶ್ಚಿಮಕ್ಕೆ:** ಸೈಟ್ ನಂ.162, **ಉತ್ತರಕ್ಕೆ:** ಸೈಟ್ ನಂ.149, **ದಕ್ಷಿಣಕ್ಕೆ:** ಸೈಟ್ ನಂ.151

ಉಮೇಶ್ ಎನ್.ಆರ್. ವಕೀಲರು
ಕಛೇರಿ: #478, ಗದ್ದಿಗೆ ಮುಖ್ಯ ರಸ್ತೆ, ಬೋಗಾದಿ, ಮೈಸೂರು –570026
ಮೊ.ನಂ. 9844635621, 9845135621

ಸಾರ್ವಜನಿಕರ ಗಮನಕ್ಕೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇಂದರೆ, ನನ್ನ ಕಕ್ಷಿದಾರರಾದ ಶ್ರೀ ದರ್ಶನ್.ಡಿ ಇವರು ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಬೋಗಾದಿ, ಬ್ಯಾಂಕ್ ಕಾಲೋನಿ, 7ನೇ ಕ್ರಾಸ್ ಮನೆ ನಂ. 451ರಲ್ಲಿ ವಾಸವಾಗಿರುವ ಶ್ರೀ ನಾಗರಾಜು. ಬಿ.ಕೆ.ರವರ ಮಗನಾದ ಶ್ರೀ ಅಭಿಷೇಕ್ ಗೌಡ. ಬಿ.ಎನ್. ರವರಿಗೆ ಸೇರಿದ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ವತ್ತನ್ನು ಖರೀದಿಮಾಡಲು ಒಪ್ಪಿರುತ್ತಾರೆ.

ಈ ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾರಿಗಾದರೂ ಯಾವುದೇ ತೆರನಾದ ಹಕ್ಕು ಅಥವಾ ಅಧಿಕಾರ ಇದ್ದಲ್ಲಿ ಅವರುಗಳು ನಮಗೆ ಲಿಖಿತ ನೋಂದಾಯಿತ ಅಂಚೆಯ ಮೂಲಕ ಮೂಲ ದಾಖಲಾತಿಗಳ ಸಹಿತ ಷೆಡ್ಯೂಲ್ ಸ್ವತ್ತಿನ ಮೇಲೆ ಅವರಿಗೆ ಇರುವ ಹಕ್ಕು ಅಥವಾ ಅಧಿಕಾರದ ಸ್ವರೂಪವನ್ನು ಈ ಪ್ರಕಟಣೆಯಾದ ಹತ್ತು (10) ದಿನಗಳೊಳಗೆ ಲಿಖಿತ ಹೇಳಿಕೆ ಮೂಲಕ ಈ ಕೆಳಕಂಡವರಿಗೆ ತಿಳಿಸಬಹುದು. ಹತ್ತು ದಿನಗಳೊಳಗೆ ಯಾವುದೇ ರೀತಿಯ ದೂರು ಬರದಿದ್ದಲ್ಲಿ, ನಮ್ಮ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಮುಂದುವರಿಯುತ್ತಾರೆ. ನಂತರ ಬಂದ ಯಾವುದೇ ರೀತಿಯ ದೂರುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್: ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಬೋಗಾದಿ ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಬೋಗಾದಿ ಗ್ರಾಮದ ಪಟ್ಟಣ ಪಂಚಾಯಿತಿ ದಾಖಲೆ ನಮೂನೆ–3ರ ಪ್ರಕಾರ ಆಸೆಸ್‌ಮೆಂಟ್ ನಂ. 784/1 ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ : ಚಿಕ್ಕೋನಮ್ಮರವರ ಸ್ವತ್ತು, ಪಶ್ಚಿಮಕ್ಕೆ: ಮರಿದೇವಮ್ಮ ರವರ ಸ್ವತ್ತು, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ : ಅಪೂರ್ವ. ಎನ್.ರವರ 785/1 ಸ್ವತ್ತು. ಈ ಮಧ್ಯೆ ಇರುವ ಪೂರ್ವಪಶ್ಚಿಮಕ್ಕೆ 43.00 ಅಡಿಗಳು, ದಕ್ಷಿಣೋತ್ತರ 60.00 ಅಡಿಗಳ ಒಟ್ಟು 2580 ಚದರ ಅಡಿಗಳುಳ್ಳ ಪೂರ್ತಾ ನಿವೇಶನ

Sd/- J.Srinivas, B.com,LL.B.,P.G.D.B.T ADVOCATE, office: Near Burma Bazar, behind katha Meeta, Danvanthri Road cross, Mysore. Cell No. 9844136362 & 9844623071
email:srinivasj2805@gmail.com
srinivas_adv@yahoo.co.in
ದಿನಾಂಕ: 09.11.2022
ಸ್ಥಳ: ಮೈಸೂರು

ಚರ್ಮಗಂಟು ರೋಗ; ಜಾನುವಾರುಗಳಿಗೆ ಪ್ರಾರಂಭಿಕ ಹಂತದಲ್ಲಿ

'ಮನೆ ಮದ್ದು' ಸಿದ್ದೌಷಧ

ನಾಗನಹಳ್ಳಿ ಸಾವಯವ ಕೃಷಿ ಸಂಶೋಧನಾ ಕೇಂದ್ರದ ಹೈನುಗಾರಿಕೆ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಎ.ನಾಗಮಣಿ ಮಾಹಿತಿ



ಮೈಸೂರು, ನ.9(ಎಂಕೆ)– ರೈತಾಪಿ ವರ್ಗದಲ್ಲಿ ಆತಂಕ ಮೂಡಿಸಿರುವ, ಜಾನುವಾರುಗಳನ್ನು ಕಾಡುವ ಚರ್ಮಗಂಟು ರೋಗ(ಲಂಪಿಸ್ಕಿನ್ ರೋಗ)ಕ್ಕೆ ಇಲ್ಲಿದೆ ಮನೆ ಮದ್ದು..!

ಮೈಸೂರು ಜಿಲ್ಲೆಯ ಕೆ.ಆರ್.ನಗರ, ಸರಗೂರು, ತಿ.ನರಸೀಪುರ ಹಾಗೂ ಮೈಸೂರು ತಾಲೂಕಿನ ಕೆಲ ಭಾಗಗಳಲ್ಲಿ ಜಾನುವಾರುಗಳಿಗೆ ಚರ್ಮಗಂಟು ರೋಗ ಪತ್ತೆಯಾಗಿದ್ದು, ಪ್ರಾರಂಭದ ಹಂತದಲ್ಲಿಯೇ ಮನೆ ಮದ್ದು ಬಳಕೆ ಮಾಡಿದರೆ ಜಾನುವಾರುಗಳನ್ನು ರೋಗದಿಂದ ಪಾರು ಮಾಡಬಹುದು.

ಜಾನುವಾರುಗಳಲ್ಲಿ ಚರ್ಮಗಂಟು ರೋಗದ ಪ್ರಮಾಣ ಹೆಚ್ಚಾಗುವುದಕ್ಕೂ ಮುನ್ನವೇ ಗಮನಿಸಿ, ಮನೆಯಲ್ಲೇ ಔಷಧಿ ಗುಣಗಳನ್ನು ಹೊಂದಿರುವ ಕೆಲ ಪದಾರ್ಥಗಳಿಂದಲೇ ರೋಗ ಹರಡದಂತೆ ಮುಂಜಾಗ್ರತೆ ವಹಿಸಬಹುದಾಗಿದೆ. ಮನೆ ಮದ್ದು ಪ್ರಯೋಗದ ಜೊತೆಗೆ ಜಾನುವಾರುಗಳನ್ನು ಕಟ್ಟಿಹಾಕುವ ಕೊಟ್ಟಿಗೆಗಳ ಶುಚಿತ್ವ ಕಾಪಾಡುವುದು ಅತ್ಯಂತ ಮುಖ್ಯವಾಗಿದೆ ಎಂದು ನಾಗನಹಳ್ಳಿ ಸಾವಯವ ಕೃಷಿ ಸಂಶೋಧನಾ ಕೇಂದ್ರದ ಹೈನುಗಾರಿಕೆ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ.ಎ.ನಾಗಮಣಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಚರ್ಮಗಂಟು ರೋಗದ ಪ್ರಾರಂಭಿಕ ಹಂತದಲ್ಲಿ 10 ವಿಳ್ಯೆದೆಲೆ, 10 ಗ್ರಾಂ ಕಾಳು ಮೆಣಸು, 10 ಗ್ರಾಂ ಉಪ್ಪನ್ನು ಚೆನ್ನಾಗಿ ರುಬ್ಬಿ ಬೆಲ್ಲದೊಂದಿಗೆ ಮಿಶ್ರಣ ಮಾಡಿ ಸಣ್ಣ–ಸಣ್ಣ ಉಂಡೆಗಳಾಗಿ ಮಾಡಿಕೊಂಡು ಮೊದಲನೇ ದಿನ ಪ್ರತಿ ಮೂರು ಘಂಟೆಗೊಮ್ಮೆ ಒಂದು ಬಾರಿ ತಿನ್ನಿಸಬೇಕು. ಎರಡನೇ ದಿನದಿಂದ ಪ್ರತಿದಿನ ಮೂರು ಬಾರಿ ಎರಡು ವಾರದವರೆಗೆ ತಿನ್ನಿಸಬೇಕು ಎಂದು ಮಾಹಿತಿ ನೀಡಿದರು.

ಇನ್ನಷ್ಟು ಪರಿಣಾಮಕಾರಿ ಮನೆ ಮದ್ದು: 2 ಬೆಳ್ಳುಳ್ಳಿ, 1 ಬೊಗಸೆ ಬೇವಿನ ಎಲೆ, 2 ಸಣ್ಣ ಈರುಳ್ಳಿ, 1 ಬೊಗಸೆ ತುಳಸಿ, 5 ವಿಳ್ಯೆದೆಲೆ, ಒಂದು ಬೊಗಸೆ ಸಿಹಿ ತುಳಸಿ, 10 ಗ್ರಾಂ ಕೊತ್ತಂಬರಿ ಬೀಜ, 1 ಬೊಗಸೆ ಬಿಲ್ವಪತ್ರೆ, 10 ಗ್ರಾಂ ಜೀರಿಗೆ, 10 ಗ್ರಾಂ ಒಣಗಿದ ದಾಲ್ಚಿನ್ನಿ ಎಲೆ, 10 ಗ್ರಾಂ ಕಾಳು ಮೆಣಸು, 10 ಗ್ರಾಂ ಅರಿಶಿನ ಪುಡಿ, 100 ಗ್ರಾಂ ಬೆಲ್ಲ ಹಾಗೂ 30 ಗ್ರಾಂ ನೆಲಬೇವು ಎಲೆಯಪುಡಿ ಚೆನ್ನಾಗಿ ರುಬ್ಬಿ ಬೆಲ್ಲದೊಂದಿಗೆ ಮಿಶ್ರಣ ಮಾಡಿ ಸಣ್ಣ–ಸಣ್ಣ ಉಂಡೆಗಳಾಗಿ ಮಾಡಿಕೊಂಡು ಮೊದಲನೇ ದಿನ ಪ್ರತಿ 3 ಗಂಟೆಗೆ ಒಂದು ಬಾರಿ ತಿನ್ನಿಸಬೇಕು. ಹಾಗೆಯೇ ಎರಡನೆಯ ದಿನದಿಂದ ಪ್ರತಿದಿನ ಬೆಳಗ್ಗೆ ಹಾಗೂ ಸಾಯಂಕಾಲ ಎರಡು ಬಾರಿ ಅಥವಾ ಗುಣ ಹೊಂದುವವರೆಗೆ ತಿನ್ನಿಸಬೇಕು ಎಂದು ತಿಳಿಸಿದರು.

ಜಾನುವಾರುಗಳಿಗೆ ಗಾಯಗಳಾಗಿದ್ದರೆ ಹೊರಗಿನಿಂದ ಔಷಧಿ ಹಚ್ಚುವುದು ಅಗತ್ಯವಾಗಿರುತ್ತದೆ. 1 ಬೊಗಸೆ ಕುಪ್ಪೆ ಎಲೆ, 10 ಬೆಳ್ಳುಳ್ಳಿ, 1 ಬೊಗಸೆ ಬೇವಿನ ಎಲೆ, 20 ಗ್ರಾಂ ಅರಿಶಿನ ಪುಡಿ, 1 ಬೊಗಸೆ ಮದರಂಗಿ ಎಲೆ, 1 ಬೊಗಸೆ ತುಳಸಿ ಎಲೆಯನ್ನು ಚೆನ್ನಾಗಿ ರುಬ್ಬಿ 500 ಗ್ರಾಂ ಎಳ್ಳೆಣ್ಣೆ ಅಥವಾ ಕೊಬ್ಬರಿ ಎಣ್ಣೆಯೊಂದಿಗೆ ಬೆರೆಸಿ, ಕುದಿಸಿ, ಆರಿಸಿದ ನಂತರ ಜಾನುವಾರುಗಳಲ್ಲಾಗಿರುವ ಗಾಯವನ್ನು ಚೆನ್ನಾಗಿ ತೊಳೆದು ಒಣ ಬಟ್ಟೆಯಿಂದ ಒರೆಸಿದ ಮೇಲೆ ತಯಾರಿಸಿದ ಎಣ್ಣೆಯನ್ನು ಹಚ್ಚುವುದರಿಂದ ರೋಗವನ್ನು ತಡೆಯಬಹುದಾಗಿದೆ ಎಂದರು.

ರೋಗದ ಪ್ರಮಾಣ ಹೆಚ್ಚಾಗಿದ್ದರೆ ಮನೆ ಮದ್ದು ಕೆಲಸ ಮಾಡುವುದು ಕಡಿಮೆ. ಆದ್ದರಿಂದ ಚಿಕಿತ್ಸೆ ಅಗತ್ಯವಾಗಿ ಬೇಕಾಗುತ್ತದೆ. ರೋಗದ ಪ್ರಾರಂಭಿಕ ಹಂತದಲ್ಲಿಯೇ ಮನೆ ಮದ್ದು ಬಳಕೆ ಮಾಡಿದರೆ ತುಂಬಾ ಉಪಯುಕ್ತ ಎಂದರು.



"ಚರ್ಮಗಂಟು ರೋಗಕ್ಕೆ ಒಳಗಾಗಿರುವ ಜಾನುವಾರುಗಳನ್ನು ಗುಂಪಿನಲ್ಲಿ ಸೇರಲು ಬಿಡದೆ ಪ್ರತ್ಯೇಕವಾಗಿ ಆರೈಕೆ ಮಾಡಬೇಕಾಗಿದೆ ಗುಂಪಿನಲ್ಲಿ ಬಿಟ್ಟರೆ ಇನ್ನಷ್ಟು ಹರಡುವ ಸಾಧ್ಯತೆಯೇ ಹೆಚ್ಚು. ಆದ್ದರಿಂದ ಪ್ರತ್ಯೇಕ ಕೊಟ್ಟಿಗೆಯಲ್ಲಿ ಕಟ್ಟಿಹಾಕುವುದು ಸೂಕ್ತ. ಹಾಗೆಯೇ ಜಾನುವಾರುಗಳ ಕೊಠಡಿಯನ್ನು ಶುಚಿಯಾಗಿ ಇಡುವುದು ಮುಖ್ಯ. ಆಗಾಗ ಜಾನುವಾರುಗಳನ್ನು ತೊಳೆಯುವುದರಿಂದ ಚರ್ಮಗಂಟು ರೋಗ ಬಾರದಂತೆ ತಡೆಯಬಹುದಾಗಿದೆ.

–ಡಾ.ಎ.ನಾಗಮಣಿ, ಸಹಾಯಕ ಪ್ರಾಧ್ಯಾಪಕಿ ಸಾವಯವ ಕೃಷಿ ಸಂಶೋಧನಾ ಕೇಂದ್ರ

ಉಪವಿಭಾಗಾಧಿಕಾರಿ ನ್ಯಾಯಾಲಯ, ಹುಣಸೂರು ಆರ್.ಎ.ನಂ 47/2018–19

ಮೇಲ್ಮನವಿದಾರರು: ಶ್ರೀಮತಿ ಅನುಸೂಯಮ್ಮ ಕೋಂ.ಲೇಟ್ ಹೊಂಬೇಗೌಡ ಹೊಡಕೆಕಟ್ಟೆ ಕಾವಲ್ ಗ್ರಾಮ, ಗಾವಡಗೆರೆ ಹೋಬಳಿ, ಹುಣಸೂರು ತಾಲ್ಲೂಕು ವಿರುದ್ಧ

ಎದುರುದಾರರು: 1. ರೆವಿನ್ಯೂ ಇನ್‌ಸ್ಪೆಕ್ಟರ್ ಗಾವಡಗೆರೆ ಹೋಬಳಿ, 2. ಸತೀಷ, ಬಿನ್.ಲೇಟ್ ಬೈರೋಜಿರಾವ್, ನಂ 152/2, ಗಂಗಾಧರೇಶ್ವರ ವೃತ್ತ, ಭೈರವೇಶವರ ನಗರ ಹೆಬ್ಬಾಳ್ ಬಡಾವಣೆ, ಮೈಸೂರು–16, 3. ರಾಮಚಂದ್ರರಾವ್, ಬಿನ್.ಲೇಟ್ ಭೈರೋಜಿ ರಾವ್, 4. ಶ್ರೀಮತಿ ಸೀತಾಬಾಯಿ, ಬಿನ್.ಲೇಟ್ ಭೈರೋಜಿರಾವ್, 5. ಪಾರ್ವತಿ, ಬಿನ್.ಲೇಟ್ ಭೈರೋಜಿರಾವ್, 3 ರಿಂದ 5 ರವರು ಮುಳ್ಳೂರು ಗ್ರಾಮ, ಗಾವಡಗೆರೆ ಹೋಬಳಿ, ಹುಣಸೂರು, ತಾಲ್ಲೂಕು ವಾಸ.

ಪ್ರಕಟಣೆ: ಮೇಲ್ಕಂಡ ಮೇಲ್ಮನವಿದಾರರು ಎದುರುದಾರರ ವಿರುದ್ಧ ಹುಣಸೂರು ತಾಲ್ಲೂಕು, ಗಾವಡಗೆರೆ ಹೋಬಳಿ ಹೊನ್ನೇನ ಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೇ ನಂ 28/1ರಲ್ಲಿ 1 ಎಕರೆ ಜಮೀನಿನ ಖಾತೆಯನ್ನು ಪ್ರಶ್ನಿಸಿ ಈ ಮೇಲ್ಮನವಿಯನ್ನು ತಂದಿರುತ್ತಾರೆ. 4 ಮತ್ತು 5ನೇ ಎದುರುದಾರರುಗಳು ಈ ನ್ಯಾಯಾಲಯ ದಿಂದ ಅನೇಕ ಬಾರಿ ನೋಟೀಸು ಜಾರಿ ಮಾಡಿದರು ಅದೇ ವಿಳಾಸದಲ್ಲಿ ವಾಸವಿದ್ದರೂ ಸಹ ತೆಗೆದುಕೊಂಡಿರುವುದಿಲ್ಲ. ಸದರಿ ಮೇಲ್ಮನವಿಯುನ್ನು ದಿನಾಂಕ 05.12.2022 ರಂದು ಮಧ್ಯಾಹ್ನ 3.00 ಗಂಟೆಗೆ ನಿಗದಿ ಪಡಿಸಿದ್ದು ಆ ದಿನ 4 ಮತ್ತು 5ನೇ ಎದುರುದಾರರು ನ್ಯಾಯಾಲಯವು ನಿಗದಿ ಪಡಿಸಿರುವ ದಿನಾಂಕದಂದು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗತಕ್ಕದ್ದು. ತಪ್ಪಿದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.

ಸಹಿ/–ಬಿ.ಎ ಸುರೇಶ್‌ಕುಮಾರ್, ಬಿ.ಕಾಂ.ಎಲ್.ಎಲ್.ಬಿ, ವಕೀಲರು, ಮೇಲ್ಮನವಿದಾರರ ಪರ ವಕೀಲರು

ನಗರಸಭಾ ಕಾರ್ಯಾಲಯ, ಹೂಟಗಳ್ಳಿ

ಎಸ್.ಆರ್.ಎಸ್. ಎದುರು, ಹೈಟೆನ್ಷನ್, ಜೋಡಿ ರಸ್ತೆ, ಹೂಟಗಳ್ಳಿ, ಮೈಸೂರು ಜಿಲ್ಲೆ–570018
ದೂ: 0821–2001737, E-Mail: itstaff_ulb_hootagalli@yahoo.com
http://www.hootagallicity.mrc.gov.in

ಸಂ:ನಸಹೂ/ತಾಂತ್ರಿಕ/ಟೆಂಡರ್/ಸಿ.ಆರ್–13/2022–23 ದಿನಾಂಕ: 08.11.2022

ಟೆಂಡರ್ ಪ್ರಕಟಣೆ (ಇ–ಪೋರ್ಟಲ್ ಮೂಲಕ)

ಹೂಟಗಳ್ಳಿ ನಗರಸಭೆ ವಾಪ್ತಿಯಲ್ಲಿ 2021–22 ಹಾಗೂ 2022–23ನೇ ಸಾಲಿನ ನಗರಸಭಾ ಸಾಮಾನ್ಯ ನಿಧಿಯಲ್ಲಿ ಕೆ.ಟಿ.ಪಿ.ಪಿ. ಕಾಯ್ದೆ 2000ರ ಪ್ರಕಾರ ಕೆ.ಡಬ್ಲ್ಯೂ–1 ರ ನಿಯಮದಂತೆ 09 ಸಂಖ್ಯೆಯ ಕಾಮಗಾರಿಗಳಿಗೆ ಐಟಂವಾರು ಟೆಂಡರ್ ಕರೆಯಲಾಗಿದ್ದು ಪರಿಶಿಷ್ಟ ಜಾತಿಯ ಗುತ್ತಿಗೆದಾರರಿಗೆ **02 ಕಾಮಗಾರಿಗಳು,** ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ **01 ಕಾಮಗಾರಿ** ಮೀಸಲಾಗಿಡಲಾಗಿದೆ. ಕಾಮಗಾರಿಗಳ **ಕನಿಷ್ಠ ಮೊತ್ತ ರೂ.1.33 ಲಕ್ಷಗಳು ಮತ್ತು ಗರಿಷ್ಠ ಮೊತ್ತ ರೂ.10.00 ಲಕ್ಷಗಳು.** ಲೋಕೋಪಯೋಗಿ ಇಲಾಖೆಯ ಅರ್ಹ ನೋಂದಾಯಿತ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು **http://eproc.karnataka.gov.in** ಇ–ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ:25.11.2022 ಸಂಜೆ 5:30 ಗಂಟೆಯವರೆಗೆ** ಹಾಗೂ ಟೆಂಡರ್ ತೆರೆಯುವ **ದಿನಾಂಕ:28.11.2022 ಬೆಳಗ್ಗೆ 11:00 ಗಂಟೆಗೆ,** ಹೆಚ್ಚಿನ ಮಾಹಿತಿಗಾಗಿ ಕಛೇರಿ ತಾಂತ್ರಿಕ ಶಾಖೆ ಹಾಗೂ ಕಛೇರಿ ವೆಬ್‌ಸೈಟ್ ಅನ್ನು ಸಂಪರ್ಕಿಸಬಹುದಾಗಿದೆ. ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಗರಸಭೆ ಖಾಯ್ದಿರಿಸಿಕೊಂಡಿದೆ. ಕಾಮಗಾರಿಯ ಜಿ.ಎಸ್.ಟಿ ಯನ್ನು ಪ್ರತ್ಯೇಕವಾಗಿ ಪಾವತಿಸಲಾಗುವುದು.

ಷರತ್ತು : ಪೂರ್ಣಗೊಂಡ ಕಾಮಗಾರಿಗಳಿಗೆ ನಗರಸಭೆಯ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಬಿಲ್ ಪಾವತಿಸಲಾಗುವುದು.

ವಾಸಾಸಂಇ/ಮೈಸೂರು/ಶಿರಡಿ ಸಾಯಿ/651/2022–23 **ಸಹಿ/– ಪೌರಾಯುಕ್ತರು ನಗರಸಭೆ, ಹೂಟಗಳ್ಳಿ**

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ

ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : purmymul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

[illegible] www.eproc.karnataka.gov.in [illegible]

ಕ್ರ. ಸಂ	ಟೆಂಡರ್ ಸಂಖ್ಯೆ	ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	IFT No.1028:ADMN: Tender: 2022	[illegible]	30.11.2022 ಸಂಜೆ 5.00 ಗಂಟೆಯವರೆಗೆ
2	KMF/2022-23/ IND10362 /CALL-2	[illegible]	19.11.2022 ಸಂಜೆ 5.00 ಗಂಟೆಯವರೆಗೆ
3	KMF/2022-23/ IND10531	[illegible]	19.11.2022 ಸಂಜೆ 5.00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ [illegible] (6366430803 / 9845284780) [illegible]
ಸಹಿ/– ವ್ಯವಸ್ಥಾಪಕ ನಿರ್ದೇಶಕರು ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.

ಮೈಸೂರು ಸಕ್ಕರೆ ಕಂಪನಿ ನಿಯಮಿತ,

(ಕರ್ನಾಟಕ ಸರ್ಕಾರದ ಒಳಸ್ವಾಮ್ಯಕ್ಕೆ ಒಳಪಟ್ಟಿದೆ)
ಸಕ್ಕರೆ ನಗರ, ಮಂಡ್ಯ–571 402.
ಎಂಎಸ್‌ಕೆ:ಎಡಿಎಂ:ಎಸ್ಟೇಟ್:200:2022–23 ದಿ:09.11.2022

ತೆಂಗಿನ ಫಸಲಿನ ಬಹಿರಂಗ ಹರಾಜು ಪ್ರಕಟಣೆ

ಕಂಪನಿಯ ಆವರಣದಲ್ಲಿರುವ 549 ತೆಂಗಿನ ಮರಗಳ ಹಾಗೂ ಸಾತನೂರು ಫಾರಂನ 446 ತೆಂಗಿನ ಮರಗಳ ಫಸಲನ್ನು ಒಂದು ವರ್ಷದ ಅವಧಿಗೆ ಗುತ್ತಿಗೆ ಪಡೆದುಕೊಳ್ಳಲು ಬಹಿರಂಗ ಹರಾಜು ಮಾಡಲಾಗುವುದು (Open Action)ಹರಾಜು ವೇಳಾಪಟ್ಟಿ ಈ ಕೆಳಕಂಡಂತಿರುತ್ತದೆ.

(1) ಕಂಪನಿಯ ಆವರಣದ ಬಹಿರಂಗ ಹರಾಜನ್ನು **ದಿನಾಂಕ:18.11.2022 ರಂದು ಬೆಳಿಗ್ಗೆ: 11.00 ಘಂಟೆಗೆ** ಪ್ರಧಾನ ವ್ಯವಸ್ಥಾಪಕರವರ ಕಛೇರಿಯಲ್ಲಿ ನಡೆಸಲಾಗುವುದು. (2) **ದಿನಾಂಕ:19.11.2022 ರಂದು ಬೆಳಿಗ್ಗೆ:11.00 ಘಂಟೆಗೆ** ಸಾತನೂರು ಫಾರಂ ಕಛೇರಿ ಆವರಣದಲ್ಲಿ ಬಹಿರಂಗ ಹರಾಜು ಮಾಡಲಾಗುವುದು. (3) ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಬಿಡ್ಡುದಾರರು ಸ್ಥಳದಲ್ಲಿ **ರೂ.5000/– ಗಳನ್ನು** ಇ.ಎಂ.ಡಿ. ಆಗಿ ಪಾವತಿಸಿ ನಂತರ ಬಿಡ್ಡಿನಲ್ಲಿ ಭಾಗವಹಿಸುವುದು. (4) ಹರಾಜು ಪ್ರಕ್ರಿಯೆ ಮುಗಿದ ನಂತರ ಯಶಸ್ವಿ ಬಿಡ್ಡುದಾರರನ್ನು ಹೊರತುಪಡಿಸಿ ಉಳಿದ ಬಿಡ್ಡುದಾರರಿಗೆ ಸ್ಥಳದಲ್ಲಿಯೇ ಅವರು ಪಾವತಿಸಿರುವ ಇ.ಎಂ.ಡಿ. ಹಣವನ್ನು ವಾಪಸ್ಸು ಮಾಡಲಾಗುವುದು. ಈ ಹರಾಜು ಪ್ರಕ್ರಿಯೆ ಸಂಬಂಧ ಹೆಚ್ಚಿನ ಮಾಹಿತಿಗಾಗಿ ಕಂಪನಿಯ ಎಸ್ಟೇಟ್ ಸೂಪರ್‌ವೈಸರ್‌ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–ಸಿಬ್ಬಂದಿ ಅಧಿಕಾರಿ

ವಾಸಾಸಂಇ/ಸಹ–ಮಂ/ಎಸಿಪಿ/437/2022–23